

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಅಕ್ಟೋಬರ್ 9 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 172 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಬೆಳೆ ಹಾನಿಗೆ 2 ಸಾವಿರ ಕೋಟಿ ಪರಿಹಾರ ಬಿಡುಗಡೆ

ಮಳೆ ಆಶ್ರಿತ ಬೆಳೆಗೆ 17,000, ನೀರಾವರಿ ಬೆಳೆಗೆ 25,000, ದೀರ್ಘಕಾಲಿಕ ಬೆಳೆಗೆ 31,000 ಪರಿಹಾರ

ಬೆಂಗಳೂರು, ಅ. 8(ಕೆಎಂಶಿ)– ಅತಿವೃಷ್ಟಿ ಮತ್ತು ಪ್ರವಾಹದಿಂದ



ಉಂಟಾದ ಬೆಳೆ ನಷ್ಟ ಪರಿಹಾರಕ್ಕಾಗಿ ರಾಜ್ಯ ಸರ್ಕಾರ 2,000 ಕೋಟಿ ರೂ. ಬಿಡುಗಡೆ ಮಾಡಿದೆ. ನೈಋತ್ಯ ಮುಂಗಾರು ಹಾಗೂ ನೆರೆಯಿಂದ 12.5 ಲಕ್ಷ ಹೆಕ್ಟೇರ್ ಬೆಳೆ ನಷ್ಟವಾಗಿದ್ದು, ಹಾನಿಗೊಳಗಾದ ರೈತರಿಗೆ ಒಂದು ತಿಂಗಳಲ್ಲಿ ಪರಿಹಾರ ದೊರೆಯಲಿದೆ. ಕಂದಾಯ ಸಚಿವ ಕೃಷ್ಣಬೈರೇಗೌಡ ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿದ್ದು, ಸರ್ಕಾರ ಪ್ರತಿ ಹೆಕ್ಟೇರ್‌ಗೆ 8,500 ರೂ. ಹೆಚ್ಚುವರಿಯಾಗಿ ಪರಿಹಾರ ನೀಡಲು ನಿರ್ಧರಿಸಿದೆ ಎಂದರು. ಮಳೆ ಆಶ್ರಿತ ಬೆಳೆ ಹಾನಿಗೆ 17,000 ರೂ., ▶ 6ನೇ ಪುಟಕ್ಕೆ

ಕಾವೇರಿ ತೀರದಲ್ಲಿ ಒತ್ತುವರಿ ತೆರವು

ರೆಸಾರ್ಟ್, ಹೋಂ ಸ್ಟೇ ಸೇರಿ ಇತರೆ ವಾಣಿಜ್ಯ ಉದ್ದೇಶಿತ ಕಟ್ಟಡಗಳು ನೆಲಸಮ



ಶ್ರೀರಂಗಪಟ್ಟಣ ಬಳಿ ಕಾವೇರಿ ತೀರದಲ್ಲಿನ ಅತಿಕ್ರಮಣವನ್ನು ಬುಧವಾರ ಜೆಸಿಬಿ ಸಹಾಯದಿಂದ ತೆರವು ಮಾಡಲಾಯಿತು.

ಶ್ರೀರಂಗಪಟ್ಟಣ, ಅ.8– ಶ್ರೀರಂಗಪಟ್ಟಣ ಬಳಿ ಕಾವೇರಿ ತೀರದಲ್ಲಿನ ಅತಿಕ್ರಮಣವನ್ನು ಬುಧವಾರ ತೆರವು ಮಾಡಲಾಯಿತು.

ಖಾಸಗಿ ರೆಸಾರ್ಟ್, ಹೋಂ ಸ್ಟೇ, ಇತರೆ ವಾಣಿಜ್ಯ ಉದ್ದೇಶಿತ ಕಟ್ಟಡಗಳನ್ನು ಜೆಸಿಬಿಗಳ ಮೂಲಕ ನೆಲಸಮಗೊಳಿಸಲಾಯಿತು. ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಎಂಜಿನಿಯರ್ ವಿ.ಜಯಂತ್ ಅವರ ಮೂಲಕ ನದಿಯ ಬಫರ್ ವಲಯ ಗುರುತಿಸಲಾಯಿತು. ಮತ್ತೆ ಅತಿಕ್ರಮ ನಡೆಯುವುದನ್ನು ತಡೆಯಲು ನದಿ ತೀರದಲ್ಲಿ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಟ್ರೆಂಚ್ ತೆಗೆಸಿ ಹದ್ದುಬಸ್ತು ಮಾಡಿದರು.

ತಹಶೀಲ್ದಾರ್ ಚೇತನಾ ಯಾದವ್ ನೇತೃತ್ವದಲ್ಲಿ, ಪೊಲೀಸ್ ಬಿಗಿ ಭದ್ರತೆಯಲ್ಲಿ ಸುಮಾರು 4 ತಾಸುಗಳ ಕಾಲ ನಡೆದ ತೆರವು ಕಾರ್ಯಾಚರಣೆ ವೇಳೆ ಅಧಿಕಾರಿಗಳು ಮತ್ತು ಸ್ಥಳೀಯರ ನಡುವೆ ವಾಗ್ವಾದ ನಡೆಯಿತು. ಕಾನೂನು ಉಲ್ಲಂಘಿಸಿ ಕಟ್ಟಿರುವ ಕಟ್ಟಡ ಮತ್ತು ನದಿಗೆ ಸೇರಿದ ಜಾಗದ ಅತಿಕ್ರಮ ತೆರವು ಕಾರ್ಯಾಚರಣೆಗೆ ತಕರಾರು ಮಾಡುವಂತಿಲ್ಲ, ಅಡ್ಡಿಪಡಿಸಿದರೆ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ಅಧಿಕಾರಿಗಳು ಎಚ್ಚರಿಸಿದರು.

ಉಪ ಲೋಕಾಯುಕ್ತರ ನಿರ್ದೇಶನ: ಪಟ್ಟಣಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದ ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರಿಗೆ ಸ್ಥಳೀಯರು ಕಾವೇರಿ ನದಿ ಬಫರ್ ವಲಯ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಮತ್ತು ನೀರಾವರಿ ಇಲಾಖೆಗೆ ಸೇರಿದ ಜಾಗದ ಅತಿಕ್ರಮಣದ ಬಗ್ಗೆ ದೂರು ನೀಡಿದ್ದರು. ಈ ದೂರು ಆಧರಿಸಿ ಅತಿಕ್ರಮ ತೆರವು ಮಾಡಿ, ವರದಿ ಸಲ್ಲಿಸುವಂತೆ ಉಪ ಲೋಕಾಯುಕ್ತರಿಂದ ತಾಲೂಕು ಆಡಳಿತಕ್ಕೆ ಒಂದು ತಿಂಗಳ ಹಿಂದೆ ನಿರ್ದೇಶನ ಬಂದಿತ್ತು. ಈ ಹಿನ್ನೆಲೆಯಲ್ಲಿ ಬುಧವಾರ ನಸುಕಿನಲ್ಲೇ ತೆರವು ಕಾರ್ಯಾಚರಣೆ ನಡೆಯಿತು.

ಇಂದಿನ ಕಾರ್ಯಾಚರಣೆಯಲ್ಲಿ ಕಾವೇರಿ ನೀರಾವರಿ ನಿಗಮದ ಇಇ ಜಯಂತ್, ಪುರಸಭೆ ಮುಖ್ಯಾಧಿಕಾರಿ ಸತೀಶ್ ಹಾಗೂ ಡಿವೈಎಸ್ಪಿ ಶಾಂತಮಲ್ಲಪ್ಪ ನೇತೃತ್ವದ ಅಧಿಕಾರಿಗಳ ತಂಡ ಭಾಗವಹಿಸಿತ್ತು. ಕಾವೇರಿ ನದಿ ತೀರದ ಕರಾಬು ಹಾಗೂ ಬಫರ್ ಝೋನ್ ಪ್ರದೇಶಗಳಲ್ಲಿ ಅಕ್ರಮವಾಗಿ ಹೋಂ ಸ್ಟೇಗಳು ಹಾಗೂ ರೆಸಾರ್ಟ್‌ಗಳು ತಲೆಯೆತ್ತಿದ್ದು, ಮೊದಲ ಹಂತವಾಗಿ ಕರಾಬು ಜಮೀನನ್ನು ಗುರುತಿಸಿ ಮುಂದಿನ ಕ್ರಮಕ್ಕಾಗಿ ತಾಲೂಕು ಆಡಳಿತಕ್ಕೆ ನೀಡಲಾಗುವುದು ಎಂದು ಕಾವೇರಿ ನೀರಾವರಿ ನಿಗಮದ ಇಇ ಜಯಂತ್ ತಿಳಿಸಿದರು.

ತಹಸೀಲ್ದಾರ್ ಚೇತನ ಯಾದವ್ ಮತ್ತು ಪುರಸಭೆ ಮುಖ್ಯಾಧಿಕಾರಿ ಸತೀಶ್ ಮಾತನಾಡಿ, ಕಾವೇರಿ ನದಿ ▶ 6ನೇ ಪುಟಕ್ಕೆ

ಅ.17ಕ್ಕೆ ಕಾವೇರಿ ತೀರ್ಥೋದ್ಭವ

ಸರ್ಕಾರದಿಂದ 2.75 ಕೋಟಿ ಅನುದಾನ ಬಿಡುಗಡೆ

ಮಡಿಕೇರಿ,ಅ.8–ಪವಿತ್ರ ಕಾವೇರಿ ತೀರ್ಥೋದ್ಭವಕ್ಕೆ ದಿನಗಣನೆ ಆರಂಭವಾಗಿದ್ದು, ರಾಜ್ಯ ಸರ್ಕಾರ ಒಟ್ಟು 2.75 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ. ತಲಕಾವೇರಿಯ ಬ್ರಹ್ಮಕುಂಡಿಕೆಯಲ್ಲಿ ಅ.17ರ ಮಧ್ಯಾಹ್ನ 1 ಗಂಟೆ 44 ನಿಮಿಷಕ್ಕೆ ಸಲ್ಲುವ ಮಕರ ಲಗ್ನದಲ್ಲಿ ಕಾವೇರಿಯು ತೀರ್ಥ ರೂಪಿಣಿಯಾಗಿ ಭಕ್ತರಿಗೆ ದರ್ಶನ ನೀಡಲಿದ್ದು ಆ ಮೂಲಕ ಭಾಗಮಂಡಲದ ಶ್ರೀಭಗಂಡೇಶ್ವರ–ತಲಕಾವೇರಿ ದೇವಾಲಯಗಳಲ್ಲಿ ಸಂಪ್ರದಾಯದಂತೆ ಶ್ರೀ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವ ಜಾತ್ರೆ ನಡೆಯಲಿದೆ. ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ವಿವಿಧ ಕಾರ್ಯಕ್ರಮಗಳನ್ನು ನಡೆಸಲು ಹಾಗೂ ಇನ್ನಿತರೆ ನಿರ್ವಹಣೆಗಾಗಿ ▶ 6ನೇ ಪುಟಕ್ಕೆ



ಸಂಗ್ರಹ ಚಿತ್ರ

ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ; ಮಾಲೀಕ ಸೇರಿ 7 ಮಂದಿ ಸಾವು

ಅಮರಾವತಿ, ಅ.8– ಆಂಧ್ರಪ್ರದೇಶದ ಪಟಾಕಿ ಕಾರ್ಖಾನೆಯಲ್ಲಿ ಭೀಕರ ಸ್ಫೋಟ ಸಂಭವಿಸಿದ್ದು, ಈ ದುರ್ಘಟನೆಯಲ್ಲಿ ಮಾಲೀಕ ಸೇರಿ ಕನಿಷ್ಟ 7 ಮಂದಿ ಸಾವನ್ನಪ್ಪಿ, ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆ.



ಆಂಧ್ರಪ್ರದೇಶದ ಕೋನಸೀಮ ಜಿಲ್ಲೆಯ ರಾಯವರಂನಲ್ಲಿರುವ ಶ್ರೀ ಗಣಪತಿ ಗ್ರ್ಯಾಂಡ್ ಪಟಾಕಿ ತಯಾರಿಕಾ ಘಟಕದಲ್ಲಿ ಈ ಸ್ಫೋಟ ಸಂಭವಿಸಿದೆ. ಪ್ರಬಲ ಸ್ಫೋಟದಲ್ಲಿ 6 ಮಂದಿ ಸ್ಥಳದಲ್ಲೇ ಸಾವನ್ನಪ್ಪಿದ್ದು, ಮತ್ತೊರ್ವ ಆಸ್ಪತ್ರೆಗೆ ಸಾಗಿಸುವಾಗ ಮಾರ್ಗಮಧ್ಯೆ ಅಸುನೀಗಿದ್ದಾರೆ. ಹಲವರು ತೀವ್ರವಾಗಿ ಗಾಯಗೊಂಡಿದ್ದಾರೆ. ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚಾಗಬಹುದು ಎಂದು ಅಧಿಕಾರಿಗಳು ▶ 6ನೇ ಪುಟಕ್ಕೆ

ಮೈಸೂರಲ್ಲಿ ಹಾಡಹಗಲೇ ಕೊಚ್ಚಿ ವ್ಯಕ್ತಿಯ ಭೀಕರ ಕೊಲೆ

ಘಟನೆ ನಡೆದ 24 ಗಂಟೆಯಲ್ಲೇ 6 ಮಂದಿ ಸೆರೆ

ಮೈಸೂರು, ಅ.8(ಆರ್‌ಕೆ)– ಕಾರು ಅಡ್ಡಗಟ್ಟಿ ವ್ಯಕ್ತಿಯನ್ನು ಕೊಚ್ಚಿ ಕೊಲೆಗೈದು ಪರಾರಿಯಾಗಿದ್ದ ಆರು ಮಂದಿ ಆರೋಪಿಗಳನ್ನು ಘಟನೆ ನಡೆದ 24 ಗಂಟೆಯೊಳಗೆ ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.



ವೆಂಕಟೇಶ್

ಮೈಸೂರಿನ ನಾಯ್ಡು ನಗರದ ಕೀರ್ತಿ ಕುಮಾರ್ (28), ಗಾಯತ್ರಿಪುರಂನ ಹಾಲಪ್ಪ (24), ವೀರನಗೆರೆಯ ನಂದನ್ (27), ಸಿದ್ಧಾರ್ಥ ಬಡಾವಣೆಯ ನಿರೂಪ್ (28), ನಜರ್‌ಬಾದ್‌ನ ಭರತ್ (22) ಹಾಗೂ ಮಂಡ್ಯ ಜಿಲ್ಲೆ ಮೈಲಾಪುರದ ಧ್ರುವಕುಮಾರ್ (24) ಬಂಧಿತರು.

ನಿನ್ನೆ (ಅ.7) ಪೂರ್ವಾಹ್ನ ಸುಮಾರು 11.30ರಲ್ಲಿ ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆ ಸರಹದ್ದಿನ ದೊಡ್ಡಕೆರೆ ಮೈದಾನದ ದಸರಾ ವಸ್ತುಪ್ರದರ್ಶನದ ಬಳಿ ಇಟ್ಟಿಗೆ ಗೂಡಿನ ಜ್ವಾಲಾಮುಖಿ ಹೋಟೆಲ್ ಜಂಕ್ಷನ್‌ನಲ್ಲಿ ವೆಂಕಟೇಶ್ ಅಲಿಯಾಸ್ ಗಿಲ್ಕಿ ವೆಂಕಟೇಶ್‌ನ ಕಾರು ಅಡ್ಡಗಟ್ಟಿ, ಆತನ ಕಣ್ಣಿಗೆ ಖಾರದಪುಡಿ ಎರಚಿ ಮಚ್ಚು, ಲಾಂಗ್‌ಗಳಿಂದ ಮನಸ್ಸೋಇಚ್ಛೆ ಕೊಚ್ಚಿ ಬರ್ಬರವಾಗಿ ಕೊಲೆಗೈದು ಈ ಆರು ಮಂದಿ ಪರಾರಿಯಾಗಿದ್ದರು.

ಪ್ರಕರಣ ದಾಖಲಿಸಿಕೊಂಡಿದ್ದ ನಜರ್‌ಬಾದ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಮಹದೇವಸ್ವಾಮಿ, ತನಿಖೆ ಕೈಗೊಂಡಿದ್ದರು. ಘಟನೆ ಹಿನ್ನೆಲೆಯಲ್ಲಿ ನಗರ ಪೊಲೀಸ್ ಕಮಿಷನರ್ ಸೀಮಾ ಲಾಟ್ಕರ್ ಅವರು ಪ್ರಕರಣ ಭೇದಿಸಲು ರಚಿಸಿದ್ದ ಎರಡು ತಂಡಗಳ ಅಧಿಕಾರಿಗಳು ಘಟನೆ ನಡೆದ ಸ್ಥಳದಲ್ಲಿ ಸಾರ್ವಜನಿಕರು ತೆಗೆದಿದ್ದ ಫೋಟೋಗಳು ಮತ್ತು ಸುತ್ತಲಿನ ಸಿಸಿ ಕ್ಯಾಮರ ಫುಟೇಜ್‌ಗಳ ಸುಳಿವಿನ ಆಧಾರದ ಮೇಲೆ ಇಂದು ಮುಂಜಾನೆ ನಗರದ ಹೊರವಲಯದಲ್ಲಿ ಅಡಗಿದ್ದ ಆರೂ ಮಂದಿ ಆರೋಪಿಗಳ ಹೆಡೆಮುರಿ ಕಟ್ಟುವಲ್ಲಿ ಯಶಸ್ವಿಯಾಗಿದ್ದಾರೆ.

ಬಂಧಿತರಿಂದ ಕೃತ್ಯಕ್ಕೆ ಬಳಸಿದ್ದ ಮಚ್ಚು, ಲಾಂಗ್, ಆಟೋ, ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿರುವ ಪೊಲೀಸರು ಆರೂ ಮಂದಿ ಆರೋಪಿಗಳ ತೀವ್ರ ▶ 6ನೇ ಪುಟಕ್ಕೆ

ಹಾಸನಾಂಬ ಜಾತ್ರೆಯಲ್ಲಿ ಸಾಂಪ್ರದಾಯಿಕ ಉಡುಗೆ ಕಡ್ಡಾಯ

ಪ್ರತ್ಯೇಕ ಸಮಯ, ಸರತಿ ಸಾಲಿನಲ್ಲಿ ದರ್ಶನ ವ್ಯವಸ್ಥೆ





ಹಾಸನ,ಅ.8–ಈ ಬಾರಿ ಹಾಸನದ ಪ್ರಸಿದ್ಧ ಹಾಸನಾಂಬ ಜಾತ್ರಾ ಮಹೋತ್ಸವದಲ್ಲಿ ಜಿಲ್ಲಾಡಳಿತದಿಂದ ಕಟ್ಟುನಿಟ್ಟಿನ ಷರತ್ತು ವಿಧಿಸಲಾಗಿದೆ. ಎಲ್ಲಾ ಭಕ್ತರೂ ಸಾಂಪ್ರದಾಯಿಕ ಉಡುಗೆಗಳನ್ನೇ ಧರಿಸಿಕೊಂಡು ಬರಬೇಕು. ಜೊತೆಗೆ, ವಿಐಪಿ ಟಿಕೆಟ್, ಹಣಕ್ಕೆ ಖರೀದಿಸಿದ ವಿಶೇಷ ದರ್ಶನ ಟಿಕೆಟ್ ಹಾಗೂ ಧರ್ಮದರ್ಶನ ಮಾಡುವ ಭಕ್ತರಿಗೆ ಪ್ರತ್ಯೇಕ ಸಮಯ ಮತ್ತು ಸರತಿ ಸಾಲುಗಳನ್ನು ವ್ಯವಸ್ಥೆ ಮಾಡಲಾಗಿದೆ ಎಂದು ಹಾಸನ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ಜಾತ್ರೆಯನ್ನು ಅತ್ಯಂತ ಸಡಗರ ಮತ್ತು ಸಂತೋಷದಿಂದ ಆಚರಿಸಲಾಗುತ್ತಿದೆ. ಜಿಲ್ಲಾಡಳಿತವು ಭರದಿಂದ ಸಿದ್ಧತೆಗಳನ್ನು ಪೂರ್ಣಗೊಳಿಸಿದ್ದು, ಭಕ್ತರಿಗೆ ಸುಗಮ ದರ್ಶನಕ್ಕೆ ಅತ್ಯಾಧುನಿಕ ವ್ಯವಸ್ಥೆಗಳನ್ನು ಮಾಡಿದೆ. ಭಕ್ತರ ಅನುಕೂಲಕ್ಕಾಗಿ ಹಲವು ಹೊಸ ತಂತ್ರಜ್ಞಾನಗಳನ್ನು ಪರಿಚಯಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಮಾಹಿತಿ ನೀಡಿದರು.

ಕ್ಯೂ ವ್ಯವಸ್ಥೆಯಲ್ಲಿ ಬದಲಾವಣೆ: ಸಾಮಾನ್ಯ ದರ್ಶನಕ್ಕೆ ಒಂದು ಸರತಿ ಸಾಲು, ಟಿಕೆಟ್ ಖರೀದಿಸಿ ಬರುವವರಿಗೆ ದೇವಿ ದರ್ಶನಕ್ಕೆ ಎರಡು ಪ್ರತ್ಯೇಕ ಸರತಿ ಸಾಲುಗಳು, ಗಣ್ಯರಿಗೆ ಅಂದರೆ ಶಿಷ್ಟಾಚಾರದ ದರ್ಶನಕ್ಕೆ ಬರುವವರಿಗೆ ಮತ್ತೊಂದು ಪ್ರತ್ಯೇಕ ಸರತಿ ಸಾಲು ಮಾಡಲಾಗಿದೆ. ▶ 6ನೇ ಪುಟಕ್ಕೆ

25 ಲಕ್ಷ ಭಕ್ತರ ನಿರೀಕ್ಷೆ

80 ವರ್ಷ ಮೇಲ್ಪಟ್ಟವರು; ಅಂಗವಿಕಲರಿಗೆ ನೇರ ದರ್ಶನ

ಹಾಸನ: ಕಳೆದ ಬಾರಿ 20 ಲಕ್ಷಕ್ಕೂ ಹೆಚ್ಚು ಮಂದಿ ಹಾಸನಾಂಬ ದೇವಿಯ ದರ್ಶನ ಪಡೆದಿದ್ದಾರೆ. ಈ ಬಾರಿ 25 ಲಕ್ಷಕ್ಕೂ ಹೆಚ್ಚು ಮಂದಿ ಬರುವ ನಿರೀಕ್ಷೆ ಇದೆ ಎಂದು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾಡಳಿತದಿಂದ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಅ.15ರಂದು ಮುಖ್ಯಮಂತ್ರಿ ಉಪಮುಖ್ಯಮಂತ್ರಿ ಸೇರಿ ಸಚಿವರು ದೇವಿಯ ದರ್ಶನಕ್ಕೆ ಬರಲಿದ್ದಾರೆ ಎಂದರು.

ದೇವಿ ದರ್ಶನಕ್ಕೆ 80 ವರ್ಷಕ್ಕಿಂತ ಮೇಲಿನವರು ಹಾಗೂ ಅಂಗವಿಕಲರಿಗೆ ನೇರದರ್ಶನ ವ್ಯವಸ್ಥೆ ಮಾಡಲಾಗಿದೆ. ಗಂಟೆಗೆ 6 ಸಾವಿರ ಮಂದಿಯಂತೆ ಪ್ರತಿದಿನ ಒಂದೂವರೆ ಲಕ್ಷಕ್ಕೂ ಹೆಚ್ಚು ಭಕ್ತರು ದೇವಿ ದರ್ಶನ ಪಡೆಯಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಲಾಗಿದೆ. ಈ ಬಾರಿ ವಿಐಪಿ, ವಿವಿಐಪಿ ಪಾಸ್ ರದ್ದುಪಡಿಸಿದ್ದು, ಶಿಷ್ಟಾಚಾರ ದರ್ಶನ ವ್ಯವಸ್ಥೆಯಲ್ಲಿಯೂ ಬದಲಾವಣೆ ಮಾಡಲಾಗಿದೆ ಎಂದರು.

ಇದೇ ಮೊದಲ ಬಾರಿಗೆ ಜಾನಪದ ಜಾತ್ರಾ ಮಹೋತ್ಸವ, ವಸ್ತುಪ್ರದರ್ಶನ, ಶ್ವಾನ ಪ್ರದರ್ಶನ, ಆಹಾರ ಮೇಳ ಏರ್ಪಡಿಸಲಾಗಿದೆ. ಇದರೊಂದಿಗೆ ಫಲಪುಷ್ಪ ಪ್ರದರ್ಶನ, ಪ್ರವಾಸೋದ್ಯಮ ಇಲಾಖೆಯಿಂದ ಟೂರ್ ಪ್ಯಾಕೇಜ್, ಹೆಲಿಟೂರಿಸಂ ಕೂಡ ಆಯೋಜನೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಸಾರಿಗೆ ಇಲಾಖೆಯಿಂದ ವಿವಿಧ ಜಿಲ್ಲೆ ಹಾಗೂ ರಾಜಧಾನಿಯಿಂದ ಸಾರಿಗೆ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಸುಮಾರು 2,300ಕ್ಕೂ ಹೆಚ್ಚು ಬಸ್‌ಗಳನ್ನು ದರ್ಶನೋತ್ಸವಕ್ಕೆ ಪ್ರತ್ಯೇಕವಾಗಿ ನಿಯೋಜಿಸಲಾಗಿದೆ ಎಂದರು.

ಮೈಸೂರು ಮಿತ್ರ ಗುರುವಾರ 9 ಅಕ್ಟೋಬರ್ 2025

ಹುಲಿಗಳಿಗೆ ವಿಷ ಹಾಕುವುದ ಸಹಿಸಲ್ಲ

• ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ • ಕಾಡುಪ್ರಾಣಿಗಳ ಕೊಲ್ಲುವವರ ವಿರುದ್ಧ ಕಠಿಣ ಕ್ರಮ • ವನ್ಯಜೀವಿ ಸಪ್ತಾಹ ಸಮಾರೋಪ ಸಮಾರಂಭ; ಅರಣ್ಯ ಸಂರಕ್ಷಕರಿಗೆ ಪದಕ ವಿತರಣೆ

ಬೆಂಗಳೂರು, ಅ.8(ಕೆಎಂಶಿ)–ಕಾಡು ಪ್ರಾಣಿಗಳನ್ನು ಕೊಲ್ಲುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ದ ರಾಮಯ್ಯ ಎಚ್ಚರಿಕೆ ನೀಡಿದ್ದಾರೆ.

ಮಲೆ ಮಹದೇಶ್ವರ ತಪ್ಪಲಿನಲ್ಲಿ ಹುಲಿಗಳ ಹತ್ಯೆ, ಮಲೆನಾಡು ಭಾಗದಲ್ಲಿ ಆನೆಗಳು ಸೇರಿದಂತೆ ವನ್ಯಜೀವಿಗಳನ್ನು ಕೊಲ್ಲುತ್ತಿರುವುದು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ವನ್ಯಜೀವಿಗಳಿಲ್ಲದೆ ಅರಣ್ಯ ಸಂಪತ್ತಿಗೆ ಮೌಲ್ಯವೇ ಇಲ್ಲ. ಪ್ರಾಣಿಗಳನ್ನು ಕೊಲ್ಲುವವರ ವಿರುದ್ಧ ಕಠಿಣ ಕ್ರಮ ಜರುಗಿಸಿ ಎಂದು ಅರಣ್ಯ ಮತ್ತು ಪೊಲೀಸ್ ಅಧಿಕಾರಿಗಳಿಗೆ ಆದೇಶ ಮಾಡಿದ್ದಾರೆ.




ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ವನ್ಯಜೀವಿ ಸಪ್ತಾಹ ಸಮಾರೋಪ ಸಮಾರಂಭದಲ್ಲಿ ಪರಿಸರ, ಅರಣ್ಯ ಸಂರಕ್ಷಕರಿಗೆ ಪದಕ ವಿತರಿಸಿ ಮಾತ ನಾಡಿದ ಅವರು, ಹಸುವನ್ನು ತಿಂದಿದೆ ಎನ್ನುವ ಕಾರಣಕ್ಕೆ ಹುಲಿಗಳಿಗೆ ವಿಷ ಹಾಕುವುದನ್ನು ಸಹಿಸಲು ಸಾಧ್ಯವಿಲ್ಲ. ಅರಣ್ಯ ಮತ್ತು ಪ್ರಾಣಿ ಸಂಪತ್ತನ್ನು ನಾಶ ಮಾಡಲು ಮುಂದಾದರೆ ಅಂಥವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು. ಎಷ್ಟೇ ದೊಡ್ಡವರಾಗಿದ್ದರೂ ಮುಲಾಜು ನೋಡದೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಅರಣ್ಯ ಪರಿಸರ ಆರೋಗ್ಯಕರ ವಿಸ್ತರಣೆ ಯಾದಷ್ಟೂ ಮನುಷ್ಯ ಪರಿಸರ ಹೆಚ್ಚು ಆರೋಗ್ಯಕರವಾಗಿರುತ್ತದೆ. ಅರಣ್ಯದ ಉಳಿವು ಭೂಮಿಯ ಉಳಿವು ಎನ್ನುವುದನ್ನು ಮರೆಯಬಾರದು. ಆನೆ ಮತ್ತು ಹುಲಿ ಸಂಪತ್ತಿನಲ್ಲಿ ನಮ್ಮ ರಾಜ್ಯ ಕ್ರಮವಾಗಿ ಮೊದಲ ಮತ್ತು ಎರಡನೇ ಸ್ಥಾನದಲ್ಲಿದೆ. ಜೊತೆಗೆ ಪ್ರಾಣಿ ಮತ್ತು ಮನುಷ್ಯ ಸಂಘರ್ಷ ತಪ್ಪಿಸಿ ಸಹಬಾಳ್ವೆ ಏರ್ಪಡಬೇಕು. ಪ್ರಾಣಿಗಳು ಕಾಡು ಬಿಟ್ಟು ಹೊರಗೆ ಏಕೆ ಬರುತ್ತಿವೆ ಎನ್ನುವ ಬಗ್ಗೆ ಅಧ್ಯಯನ ನಡೆದು ವೈಜ್ಞಾನಿಕ ಪರಿಹಾರ ಕಂಡುಕೊಳ್ಳಬೇಕಿದೆ. ಅರಣ್ಯಾಧಿಕಾರಿಗಳು ಹೆಚ್ಚು ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸ ಬೇಕು. ದಿನೇ ದಿನೆ ಅರಣ್ಯ ಪ್ರದೇಶ ಕಡಿಮೆ ಆಗುತ್ತಿದ್ದರೆ ಮನುಷ್ಯ ಕುಲ ಉಳಿಯಲು ಸಾಧ್ಯವಿಲ್ಲ. ಅರಣ್ಯದ ಉಳಿವು ಮನುಷ್ಯನ ಉಳಿವು ಎನ್ನುವುದನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕು ಎಂದರು.

ಅ.11ರಂದು ಮೈಸೂರು–ಕಾರೈಕುಡಿ ಎಕ್ಸ್‌ಪ್ರೆಸ್ ರೈಲಿನ ಮಾರ್ಗ ಬದಲಾವಣೆ

ಮೈಸೂರು,ಅ.8(ಪಿಎಂ)– ಬೆಂಗಳೂರು ಕಂಟೋನ್‌ಮೆಂಟ್‌ನಲ್ಲಿ ಹಳಿ ನಿರ್ವಹಣಾ ಕಾಮಗಾರಿ ನಡೆಯುವ ಹಿನ್ನೆಲೆಯಲ್ಲಿ ರೈಲೊಂದರ ಸೇವೆಯನ್ನು ಅ.11ರಂದು ಒಂದು ದಿನಕ್ಕೆ ಅನ್ವಯವಾಗುವಂತೆ ಮಾರ್ಗ ಬದಲಾವಣೆ ಮಾಡಲಾಗಿದೆ. ಮೈಸೂರು–ಕಾರೈಕುಡಿ ಎಕ್ಸ್‌ಪ್ರೆಸ್ ರೈಲು (ರೈಲು ಸಂಖ್ಯೆ 06243) ಅ.11ರಂದು ಮೈಸೂರಿನಿಂದ ಹೊರಟು ಕೆಎಸ್‌ಆರ್ ಬೆಂಗಳೂರು–ಯಶವಂತಪುರ–ಲೊಟ್ಟೆಗೊಲ್ಲಹಳ್ಳಿ–ಬಾಣಸವಾಡಿ–ಎಸ್‌ಎಂವಿಟಿ ಬೆಂಗಳೂರು–ಬೈಯ್ಯಪನಹಳ್ಳಿ–ಕೃಷ್ಣರಾಜಪುರಂ ಮಾರ್ಗವಾಗಿ ಸಂಚರಿಸಲಿದೆ. ಬೆಂಗಳೂರು ಕಂಟೋನ್‌ಮೆಂಟ್‌ನಲ್ಲಿ ನಿಗದಿತ ನಿಲುಗಡೆ ಅಂದು ಇರುವುದಿಲ್ಲವೆಂದು ನೈರುತ್ಯ ರೈಲ್ವೆಯ ಮೈಸೂರು ವಿಭಾಗದ ಸಾರ್ವಜನಿಕ ಸಂಪರ್ಕ ಅಧಿಕಾರಿ ಗಿರೀಶ್ ಧರ್ಮರಾಜ್ ಕಲಗೊಂಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾಲ್ಮೀಕಿ ಜಯಂತಿ ಯಶಸ್ವಿ...



ಮೈಸೂರಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಪದಾಧಿಕಾರಿಗಳಾದ ದ್ಯಾವಪ್ಪನಾಯಕ, ಪ್ರಭಾಕರ ಹುಣಸೂರು, ಶ್ರೀಧರ್ ಚಾಮುಂಡಿಬೆಟ್ಟ, ಮಾದೇಶ್, ರಾಜು, ಸುರೇಶ್ ಮತ್ತಿತರು ಪಾಲ್ಗೊಂಡಿದ್ದರು.

ಅಡುಗೆ ಕಂಟ್ರಾಕ್ಟರ್ ಗೋಡೌನ್‌ನಲ್ಲಿ 10 ಲಕ್ಷ ನಗದು ಕಳವು; ಆರೋಪಿ ಬಂಧನ


ಮೈಸೂರು, ಅ. 8, (ಆರ್‌ಕೆ)– ಅಡುಗೆ ಕಂಟ್ರಾಕ್ಟರ್ ಗೋಡೌನ್‌ನಲ್ಲಿ 10 ಲಕ್ಷ ನಗದು ಕಳವು ಮಾಡಿದ್ದ ನೌಕರನನ್ನು ಕುವೆಂಪುನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹೆಚ್.ಡಿ.ಕೋಟೆ ತಾಲೂಕು ಸರಗೂರು ನಿವಾಸಿ ಗಿರೀಶ್ ಬಂಧಿತ ಆರೋಪಿ. ಶ್ರೀರಂಗಪಟ್ಟಣ ಮೂಲದ ಅಡುಗೆ ಕಂಟ್ರಾಕ್ಟರ್ ರಮೇಶ್ ಎಂಬುವರು ಮೈಸೂರಿನ ಕುವೆಂಪುನಗರ ಎಂ. ಬ್ಲಾಕ್‌ನಲ್ಲಿರುವ ಗೋಡೌನ್‌ನಲ್ಲಿ ತರಕಾರಿ ಹೆಚ್ಚುವ ಕೆಲಸ ಮಾಡಿಕೊಂಡಿದ್ದ ಆತ, ವಾರದ ಹಿಂದೆ ಮಾಲೀಕರು ಅಲ್ಮೇರಾದಲ್ಲಿ ಇರಿಸಿದ್ದ 10 ಲಕ್ಷ ರೂ. ನಗದು ಕದ್ದು ಪರಾರಿಯಾಗಿದ್ದ.

ಈ ಬಗ್ಗೆ ಸಂಶಯಗೊಂಡ ಮಾಲೀಕ ರಮೇಶ್, ಗಿರೀಶ್ ಸೇರಿದಂತೆ ಏಳು ಮಂದಿ ಕೆಲಸಗಾರರ ವಿರುದ್ಧ ಕುವೆಂಪು ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಇನ್ಸ್‌ಪೆಕ್ಟರ್ ಯೋಗೇಶ್, ಸಿಸಿ ಕ್ಯಾಮರಾ ಫುಟೇಜ್‌ಗಳ ಸುಳಿವಿನ ಜಾಡು ಆದರಿಸಿ ಗಿರೀಶ್ ನಗದು ಕಳವು ಮಾಡಿರುವುದು ದೃಢಪಟ್ಟಿತು.

ಬಳಿಕ ಆರೋಪಿಯನ್ನು ನ್ಯಾಯಾಧೀಶರ ಮುಂದೇ ಹಾಜರುಪಡಿಸಲಾಗಿ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಜೊತೆಗೆ 10 ಲಕ್ಷ ರೂ ನಗದನ್ನು ವಶಪಡಿಸಿಕೊಳ್ಳಲಾಗಿದೆ. ಪತ್ತೆ ಕಾರ್ಯಾಚರಣೆಯಲ್ಲಿ ಕುವೆಂಪುನಗರ ಇನ್ಸ್‌ಪೆಕ್ಟರ್ ಯೋಗೇಶ್, ಸಬ್‌ಇನ್ಸ್‌ಪೆಕ್ಟರ್ ಮೋಹನ್ ಕುಮಾರ್ ಮತ್ತು ಇತರ ಪೊಲೀಸ್ ಸಿಬ್ಬಂದಿಗಳು ಪಾಲ್ಗೊಂಡಿದ್ದರು.


ನಿಧನ



ಶ್ರೀಮತಿ ಗಂಗಮ್ಮ

ಮೈಸೂರು: ಚಾಮರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಲ್.ನಾಗೇಂದ್ರ ಅವರ ಚಿಕ್ಕಮ್ಮ ಹಾಗೂ ನಗರಪಾಲಿಕೆ ಮಾಜಿ ಸದಸ್ಯೆ ಶ್ರೀಮತಿ ಪ್ರಮೀಳಾ ಭರತ್ ಅವರ ಅತ್ತೆ ಶ್ರೀಮತಿ ಗಂಗಮ್ಮ(70) ಮಂಗಳವಾರ ನಿಧನರಾದರು. ಮೃತರು ಪತಿ, ದೇವರಾಜ ಮಾರುಕಟ್ಟೆ ವರ್ತಕ ನಾಗರಾಜೇಗೌಡ, ಪುತ್ರ ಭರತ್, ಪುತ್ರಿಯರು ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಇಂದು ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಇವರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾದಮ್ಮ



ತಿ.ನರಸೀಪುರ ತಾಲೂಕು, ಸೋಸಲೆ ಹೋಬಳಿ, ಗಾಣಿಗನ ಕೊಪ್ಪಲು ಗ್ರಾಮದ ಚೆನ್ನಯ್ಯ ಕಾಳಮ್ಮನ ಗುಡ್ಡಪ್ಪ ಅವರ ಪತ್ನಿ ಮಾದಮ್ಮ (90) ಮಂಗಳವಾರ ನಿಧನರಾದರು. ಮೃತರು ಪುತ್ರರಾದ ಸಿದ್ದ, ರಾಜಣ್ಣ, ಬೋರಣ್ಣ, ಚೆನ್ನಯ್ಯ, ಶಿವಣ್ಣ ಹಾಗೂ ಹೆಣ್ಣು ಮಕ್ಕಳಾದ ಸುಂದ್ರಮ್ಮ, ಭಾಗ್ಯ, ಶೈಲ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗಾಣಿಗನಕೊಪ್ಪಲಿನಲ್ಲಿ ಬುಧವಾರ (ಅ.8) ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಟಿ.ರಾಮೇಗೌಡ

ಬಿಎಸ್‌ಎನ್‌ಎಲ್ ನಿವೃತ್ತ ಟೆಲಿಕಾಂ ಟೆಕ್ನಿಕಲ್ ಅಸಿಸ್ಟೆಂಟ್, ಕುವೆಂಪುನಗರದ ನಿವಾಸಿ ಟಿ.ರಾಮೇಗೌಡ (77) ಬುಧವಾರ ನಿಧನರಾದರು. ಮೃತರು ಪತ್ನಿ, ಪುತ್ರ ಹಾಗೂ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಅ.9ರ ಮಧ್ಯಾಹ್ನ 12ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹಾಲಿ ಒಳ ಮೀಸಲಾತಿ ಮಾದಿಗರಿಗೆ ಮರಣ ಶಾಸನ; ಸರ್ಕಾರ ಸಾಮಾಜಿಕ ನ್ಯಾಯದ ಪರವಾಗಿಲ್ಲ

• ಕರ್ನಾಟಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಎಸ್.ಅರುಣ್‌ಕುಮಾರ್ ಆಕ್ರೋಶ • ಅಡ್ಜೆಸ್ಟ್ ಮೂಲಕ ಮಹಾ ಅನ್ಯಾಯವಾಗಿದೆ; ಗಂಭೀರ ಆರೋಪ

ಮೈಸೂರು, ಅ.8(ಎಂಕೆ)– ಪರಿಶಿಷ್ಟ ಜಾತಿ ಒಳ ಮೀಸಲಾತಿ ಹಂಚಿಕೆ ಆದೇಶ ಮಾದಿಗ ಸಮುದಾಯಕ್ಕೆ ಬರೆದಿರುವ ಮರಣಶಾಸನವಾಗಿದ್ದು, ರಾಜ್ಯ ಸರ್ಕಾರ ಸಾಮಾಜಿಕ ನ್ಯಾಯದ ಪರವಾಗಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತಿದೆ ಎಂದು ಕರ್ನಾಟಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಎಸ್.ಅರುಣ್ ಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಕರ್ನಾಟಕ ನ್ಯಾಯ ಪರ ವಕೀಲರ ವೇದಿಕೆ ಅಧ್ಯಕ್ಷ ಎಸ್.ಅರುಣ್ ಕುಮಾರ್ ಸುದ್ದಿ ಗೋಷ್ಠಿ ನಡೆಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿದ ಅವರು, ವ್ಯವಸ್ಥಿತವಾಗಿ ಪಿತೂರಿ ನಡೆಸಿಯೇ ಪೆರಿಯಾ, ಪೆರಿಯನ್ ಮತ್ತು ಮೊಗೆರಾ ಸಮುದಾಯಗಳನ್ನು ಒಳ ಮೀಸಲಾತಿ ಹಂಚಿಕೆಯಲ್ಲಿ ಪ್ರವರ್ಗ–ಬಿ(ಹೊಲೆಯ ಹಾಗೂ ಇನ್ನಿತರೆ ಬಲಗೈ ಸಮುದಾಯಗಳು)ಗೆ ಸೇರಿಸಲಾಯಿತು ಎಂದು ಕಿಡಿಕಾರಿದರು.

ನ್ಯಾ.ನಾಗಮೋಹನ್‌ದಾಸ್ ಆಯೋಗವು ಸಮೀಕ್ಷೆಯಲ್ಲಿ ಮೂಲ ಜಾತಿ ಹೇಳಿಕೊಳ್ಳದೆ ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ(ಎಕೆ, ಎಡಿ ಮತ್ತು ಎಎ) ಎಂದು ಬರೆಸಿರುವ ಸುಮಾರು 4.74 ಲಕ್ಷ ಜನರನ್ನು ಒಂದು ಗುಂಪು ಮಾಡಿ, ಶೇ.1 ರಷ್ಟು ಒಳ ಮೀಸಲಾತಿ ಹಂಚಿಕೆ ಮಾಡಲಾಗಿತ್ತು ಆದರೆ, ಅಲ್ಲಿಯೂ ಪಿತೂರಿ ನಡೆಸಿದ್ದರಿಂದ ಎಕೆ, ಎಡಿ ಮತ್ತು ಎಎ ಜನರನ್ನು ಅರ್ಧದಷ್ಟು ಪ್ರವರ್ಗ–ಎ(ಮಾದಿಗ ಮತ್ತು ಇನ್ನಿತರೆ ಎಡಗೈ ಸಮುದಾಯಗಳು) ಮತ್ತು ಇನ್ನರ್ಧದಷ್ಟು ಪ್ರವರ್ಗ–ಬಿಗೆ ಸೇರ್ಪಡಿಸಿ ತಲಾ ಶೇ.6 ರಷ್ಟು ಒಳ ಮೀಸಲಾತಿ ಹಂಚಿಕೆ ಮಾಡಲಾಯಿತು ಎಂದು ವಿವರಿಸಿದರು.

ಅಷ್ಟು ಮಾತ್ರವಲ್ಲದೆ ಹೊಲೆಯ ಗುಂಪಿನಲ್ಲಿರುವ(ಪ್ರವರ್ಗ–ಬಿ) ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರದ ವ್ಯಕ್ತಿ, ಸರ್ಕಾರದ ಸವಲತ್ತುಗಳನ್ನು ಮಾದಿಗರ ಗುಂಪಿನಲ್ಲಿ (ಪ್ರವರ್ಗ–ಎ)ಯೂ ಪಡೆದುಕೊಳ್ಳಬಹುದು ಎಂದು ಆದೇಶಿಸುವ ಮೂಲಕ ರಾಜ್ಯ ಸರ್ಕಾರ ಮಾದಿಗ ಸಮುದಾಯವನ್ನು ಸಂಪೂರ್ಣ ಕಡೆಗಣಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರಿ ಎಸ್‌ಸಿ, ಎಸ್ಟಿ ನೌಕರರ ಸಂಘದ ಅಧ್ಯಕ್ಷ ಡಿ.ಚಂದ್ರಶೇಖರಯ್ಯ ವಿದ್ಯಾರ್ಥಿಗಳ ಸಭೆಯಲ್ಲಿ ಸರ್ಕಾರದ ಆದೇಶವನ್ನು ದಿಕ್ಕರಿಸಿ ಎಕೆ, ಎಡಿ ಮತ್ತು ಎಎನಲ್ಲಿರುವ ಹೊಲೆಯರು, ಮಾದಿಗರ ಗುಂಪಿನಲ್ಲೂ ಅರ್ಜಿ ಹಾಕಿ, ಅರ್ಜಿ ಹಾಕುವುದು ಗುಟ್ಟಾಗಿರಲಿ ಎಂದು ಹೇಳಿಕೊಡುತ್ತಾರೆ ಎಂದರೆ ಇದರ ಅರ್ಥವೇನು? ಇದನ್ನು ನೋಡಿ ಕೊಂಡು ಸರ್ಕಾರ ಏನೂ ಮಾಡುತ್ತಿದೆ? ಯಾರ್‍ಯಾರಿಗೋ ಶೋಕಾಸ್ ನೋಟಿಸ್ ನೀಡುವ ಸರ್ಕಾರವೇನು ಸತ್ತಿದೆಯೇ ಎಂದು ತೀವ್ರ ಅಸಮಾದಾನ ಹೊರ ಹಾಕಿದರು.

ಮಾದಿಗ ಸಮಾಜದ ವಿರೋಧಿ ಸರ್ಕಾರ: ಎಕೆ, ಎಡಿ ಮತ್ತು ಎಎ ನಲ್ಲಿರುವ ಹೊಲೆಯರು ಸಹ ಮಾದಿಗರ ಗುಂಪಿನಲ್ಲಿ ಒಳ ಮೀಸಲಾತಿ ಪಡೆದುಕೊಳ್ಳಬಹುದು ಎಂದಾದರೆ ಯಾವ ಅರ್ಥದಲ್ಲಿ ಮಾದಿಗರಿಗೆ ಶೇ.6ರಷ್ಟು ಒಳ ಮೀಸಲಾತಿ ಕೊಟ್ಟಿದ್ದಾರೆ. ಈ ರೀತಿಯಾದರೆ ಹೊಲೆಯರಿಗೆ ಶೇ.12ರಷ್ಟು ಮೀಸಲಾತಿ ಕೊಟ್ಟಂತಾಗುತ್ತದೆ. ಸಮಾಜ ಕಲ್ಯಾಣ ಇಲಾಖೆಯಿಂದ ಆದೇಶಗಳು ಬರುತ್ತಿವೆ. ಇದಕ್ಕೆ ನಾವು ಡಾ.ಹೆಚ್.ಸಿ. ಮಹದೇವಪ್ಪ ಅವರನ್ನು ಮಾದಿಗ ಸಮಾಜದ ನಂಬರ್ ಒನ್ ವೈರಿ ಎಂದರೆ ತಪ್ಪಾ... ಮಾದಿಗರ ಮೇಲೆ ಹಿಂದೂ ಸಮಾಜದಿಂದಲ್ಲಾ ಹೊಲೆಯರಿಂದಲೇ ದೌರ್ಜನ್ಯವಾಗಿದೆ ಎಂದು ಹರಿಹಾಯ್ದರು.

ಕರ್ನಾಟಕ ಮಾದಿಗರ ಸಂಘದ ಪಿ.ನಾರಾಯಣ, ಆರ್.ಇಂದ್ರಮ್ಮ ಉಪಸ್ಥಿತರಿದ್ದರು.

ಅತ್ಯಂತ ಖಂಡನೀಯ... ಅಪ್ರಬುದ್ಧ ನಡೆ...!

“ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ವಕೀಲರೊಬ್ಬರು ಕೋರ್ಟ್‌ನಲ್ಲಿಯೇ ಶೂ ತೂರಲು ಯತ್ನಿಸಿರುವ ಘಟನೆ ಅತ್ಯಂತ ಖಂಡನೀಯ. ಸಿಜೆಐ ತಪ್ಪು ಮಾತನಾಡುತ್ತಿದ್ದಾರೆ ಎಂದು ಈ ವ್ಯಕ್ತಿಗೆ ಅನ್ನಿಸಿದ್ದರೂ ಪ್ರಶ್ನಿಸಲು ಕಾನೂನಾತ್ಮಕವಾಗಿ ಬೇರೆ ದಾರಿಗಳಿವೆ. ಆದರೆ ಶೂ ಬಿಸಾಡಲು ಯತ್ನಿಸಿದ್ದು ಉದ್ಧಟತನದ ಪರಮಾವಧಿಯಾಗಿದ್ದು, ಅದನ್ನು ಖಂಡಿಸುತ್ತೇವೆ. ಆತನಿಗೆ ಶಿಕ್ಷೆಯೂ ಆಗಬೇಕು.

–ಎಸ್.ಅರುಣ್‌ಕುಮಾರ್, ಕರ್ನಾಟಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ

ಅ.12ರಿಂದ ಅನಿರ್ದಿಷ್ಟಾವಧಿ ಹೋರಾಟ...

ಮಾದಿಗರ ಕ್ರಾಂತಿಕಾರಿ ಒಳಮೀಸಲಾತಿ ಹೋರಾಟ ಸಮಿತಿಯ ಬಿ.ಆರ್. ಭಾಸ್ಕರ್ ಪ್ರಸಾದ್ ಮಾತನಾಡಿ, ಒಳ ಮೀಸಲಾತಿ ಹಂಚಿಕೆಯಲ್ಲಿ ಮಾದಿಗ ಸಮುದಾಯಕ್ಕಾಗಿರುವ ಅನ್ಯಾಯದ ವಿರುದ್ಧ ಅ.12ರಿಂದ ಅನಿರ್ದಿಷ್ಟಾವಧಿ ಹೋರಾಟ ನಡೆಸಲಾಗುವುದು. ಟಿ.ನರಸೀಪುರದಲ್ಲಿರುವ ಎನ್.ರಾಚಯ್ಯ ಅವರ ಸಮಾಧಿ ಸ್ಥಳದಿಂದಲೇ ಈ ಹೋರಾಟ ಆರಂಭಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹಾಗೂ ಕಾನೂನು ಸಚಿವರು ಸೇರಿದಂತೆ ಇತರರ ಮನೆ ಮುಂದೆ ಮುನ್ಸೂಚನೆ ನೀಡದೇ ಗುಂಪು ಗುಂಪಾಗಿ ಪ್ರತಿಭಟನೆ ಮಾಡುತ್ತೇವೆ. ಪ್ರಾಣತ್ಯಾಗಕ್ಕೂ ಸಿದ್ಧರಾಗಿದ್ದೇವೆ ಎಂದು ಎಚ್ಚರಿಸಿದರು.

ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲೆತ್ನ ಖಂಡಿಸಿ ಮೈಸೂರಲ್ಲಿ ಪ್ರಗತಿಪರ ಸಂಘಟನೆಗಳಿಂದ ಪ್ರತಿಭಟನೆ

ಮೈಸೂರು,ಅ.8(ಜಿಎ)–ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ವಕೀಲರೊಬ್ಬರು ಶೂ ಎಸೆಯಲೆತ್ನಿಸಿರುವುದನ್ನು ಖಂಡಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟ, ಪ್ರಗತಿಪರ ಸಂಘಟನೆಗಳು, ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ನ್ಯಾಯಾಲಯದ ಎದುರಿನ ಗಾಂಧಿ ಪುತ್ಥಳಿ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ವಕೀಲ ರಾಕೇಶ್ ಕಿಶೋರ್ ವಿರುದ್ಧ ನಾನಾ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.



ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲೆತ್ನಿಸಿದ ಪ್ರಕರಣ ಖಂಡಿಸಿ ಮೈಸೂರಿನ ನ್ಯಾಯಾಲಯದ ಮುಂಭಾಗ ಪ್ರಗತಿಪರ ಸಂಘಟನೆಗಳಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ರಂಗಾಯಣದ ಮಾಜಿ ನಿರ್ದೇಶಕ ಎಚ್.ಜನಾರ್ಧನ್(ಜನ್ನಿ) ಮಾತನಾಡಿ, ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಇಂದಿಗೂ ನ್ಯಾಯಾಂಗದ ಮೇಲೆ ಜನರು ಗೌರವ ಹೊಂದಿದ್ದಾರೆ. ಅಂತಹ ಸ್ಥಾನದಲ್ಲಿ ಕುಳಿತಿರುವ ವ್ಯಕ್ತಿಯ ಮೇಲೆ ಶೂ ಎಸೆಯಲೆತ್ನಿಸಿರುವುದು ಖಂಡನೀಯ. ದೇಶದ ಸಂವಿಧಾನವನ್ನು ಉಳಿಸುವ ನಿಟ್ಟಿನಲ್ಲಿ ನಾವೆಲ್ಲರೂ ಹೋರಾಟ ಮಾಡಬೇಕಾಗಿದೆ ಎಂದು ಹೇಳಿದರು.

ವಕೀಲ ರಾಕೇಶ್ ಕಿಶೋರ್ ಅವರನ್ನು ತಕ್ಷಣವೇ ಬಂಧಿಸಬೇಕು. ಒಬ್ಬ ನ್ಯಾಯಮೂರ್ತಿಗೆ ಈ ರೀತಿಯ ಅಗೌರವ ತೋರಿಸುವ ಮನುವಾದಿ ಮನಸ್ಸಿನವರು ಬೇರೆಯವರ ಬಗ್ಗೆ ಇನ್ನೆಷ್ಟು ಅಗೌರವ ತೋರಲ್ಲ ಎಂದು ಪ್ರಶ್ನಿಸಿದರು.

ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ ಮಾತನಾಡಿ, ದೇಶದಲ್ಲಿ ಪ್ರಜಾಪ್ರಭುತ್ವ, ಜಾತ್ಯತೀತ ವ್ಯವಸ್ಥೆಯನ್ನು ನಾಶ ಮಾಡಿ ಮನುವಾದವನ್ನು ಮರುಸ್ಥಾಪಿಸಲು ಮುಂದಾಗಿರುವುದು ದೊಡ್ಡ ಅಪಾಯಕಾರಿ. ಆರ್‌ಎಸ್‌ಎಸ್ ಶತಮಾನೋತ್ಸವ ಆಚರಣೆ ಮಾಡಲಾಗುತ್ತಿದೆ. ಈ ಸಂಘಟನೆಯು ಯಾವಾಗ ನೋಂದಣಿಯಾಗಿದೆ, ಈ ಸಂಘಟನೆಗೆ ಬರುವ ಹಣದ ಮೂಲ ಯಾವುದು ಎಂಬುದು ಗೊತ್ತಾಗಬೇಕಾ ಗಿದೆ ಎಂದು ಹೇಳಿದರು.

ದೇಶದ ಸರ್ವೋಚ್ಛ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಮೇಲೆ ಶೂ ಎಸೆಯಲೆತ್ನಿಸಿ ಅಪಮಾನಿಸುವಂತಹ ಘಟನೆ ನಾಚಿಕೆಗೇಡು. ಮನುವಾದದ ಮನಸ್ಸಿನವರು ಇಂದಿಗೂ ತಮ್ಮ ವಿಷವನ್ನು ಕಾರುತ್ತಿದ್ದಾರೆ ಎಂಬುದಕ್ಕೆ ಇದೊಂದು ಉದಾಹರಣೆಯಾಗಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಲೀಡ್ ಬ್ಯಾಂಕ್ ನಿವೃತ್ತ ಮ್ಯಾನೇಜರ್ ಕೆ.ಎನ್. ಶಿವಲಿಂಗಯ್ಯ, ಅಹಿಂದ ಜವರಪ್ಪ, ಸವಿತ ಮಲ್ಲೇಶ್, ಟಿ.ಗುರುರಾಜ್, ಪ್ರೊ.ಪಂಡಿತಾರಾಧ್ಯ, ಪ್ರೊ.ಕೆ.ಎಂ.ಜಯರಾಮಯ್ಯ, ಲಕ್ಷ್ಮಣ್ ಹೊಸಕೋಟೆ, ಹರಿಹರ ಆನಂದಸ್ವಾಮಿ, ಕೆ.ಆರ್.ಗೋಪಾಲಕೃಷ್ಣ, ಜಯರಾಮ್, ಜಗದೀಶ್ ಸೂರ್ಯ, ಹೊಸಕೋಟೆ ಬಸವರಾಜು, ಉಗ್ರ ನರಸಿಂಹೇಗೌಡ, ಸುಬ್ರಹ್ಮಣ್ಯ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

‘ಭವಿಷ್ಯದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ, ಜವಾಬ್ದಾರಿ ಯುವಶಕ್ತಿಯ ಕೈಯಲ್ಲಿ’ ವಿಷಯ ಕುರಿತು ನಾಳೆ ಮೈಸೂರಲ್ಲಿ ಮುಕ್ತ ಸಂವಾದ

ಮೈಸೂರು, ಅ. 8(ಜಿಎ)–ದಾರಿ ಫೌಂಡೇಷನ್ ಮತ್ತು ಯುವರಾಜ ಕಾಲೇಜು ವತಿಯಿಂದ ‘ಭವಿಷ್ಯದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ, ಜವಾಬ್ದಾರಿ ಯುವಶಕ್ತಿಯ ಕೈಯಲ್ಲಿ’ ವಿಷಯ ಕುರಿತು ಮುಕ್ತ ಸಂವಾದ ಅ.10ರಂದು ಬೆಳಗ್ಗೆ 10.30ಕ್ಕೆ ಯುವರಾಜ ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಹಿರಿಯ ಕಲಾವಿದ ಮುಖ್ಯಮಂತ್ರಿ ಚಂದ್ರು ಸಂವಾದ ಉದ್ಘಾಟಿಸುವರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ನೋಟರಿ ಎಂ.ಎನ್.ಸುಮನಾ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಪ್ರಾಂಶುಪಾಲ ಪ್ರೊ.ಎಸ್.ಮಹ ದೇವಮೂರ್ತಿ ಅಧ್ಯಕ್ಷತೆ ವಹಿಸುವರು. ಮೈವಿವಿ ಸಿಂಡಿಕೇಟ್ ಸದಸ್ಯ ಶಂಕರ್ ಹುಯಿಲಾಳು, ಕಾಲೇಜಿನ ಆಡಳಿತಾಧಿಕಾರಿ ಪ್ರೊ.ಕೆ.ಅಜಯ್ ಕುಮಾರ್, ಜ್ಞಾನ ವಾಹಿನಿ ಸಮಿತಿ ಸಂಚಾಲಕ ಪ್ರೊ.ಸಿ.ಡಿ. ಪರಶುರಾಮ ಅತಿಥಿಗಳಾಗಿರುವರು. ದಾರಿ ಫೌಂಡೇಷನ್ ಅಧ್ಯಕ್ಷ ಎಲ್.ರಂಗಯ್ಯ, ಕಾರ್ಯದರ್ಶಿ ತಗಡೂರು ವೀರೇಶ್ ಕುಮಾರ್ ಮಹಾಮನೆ, ಖಜಾಂಚಿ ವಿಶ್ವನಾಥ್ ಕುಲಕರ್ಣಿ, ಸಂಚಾಲಕ ಪ್ರಭಾಕರ್ ಉಪಸ್ಥಿತರಿರುವರು ಎಂದು ದಾರಿ ಫೌಂಡೇಷನ್ ಅಧ್ಯಕ್ಷ ಎಲ್. ರಂಗಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.10.2025 ಗುರುವಾರ, ಮಳೆ ನಕ್ಷತ್ರ: ಹಸ್ತ 27.09.2025 ರಿಂದ 10.10.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಕೃಷ್ಣ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಭರಣಿ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಲಕ್ವ, ಪ್ಯಾರಲಿಸಿಸ್‌ಗೆ ಚಿಕಿತ್ಸಾ ಶಿಬಿರ, ಮಧುಮೇಹ ರೋಗಿಗಳಿಗೆ ಚಿಕಿತ್ಸೆ, ಮೂಲವ್ಯಾಧಿ/ಪೈಲ್ಸ್ ರೋಗದ ಚಿಕಿತ್ಸಾ ಶಿಬಿರ, ಸ್ಥಳ : ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಬಿಳಿಮುಟ್ಟು, ಮೂಗು ಕಟ್ಟುವುದು, ಮೂಗು ಸುರಿಯುವುದು, ಮೂಗಿನಿಂದ ರಕ್ತ ಬರುವುದು, ಮೂಗಿನಲ್ಲಿ ದುರ್ಮಾಂಸ, ಸೀನುವಿಕೆ, ಕೆಂಪು ಕಣ್ಣುಗಳು, ಮೂಗು, ಗಂಟಲು, ಕಣ್ಣುಗಳು ಮತ್ತು ಬಾಯಿಯಲ್ಲಿ ತುರಿಕೆ, ಮಹಿಳೆಯರ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭ ಸಂಸ್ಕಾರ ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 10 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್. ರಾಘವೇಂದ್ರ ಅವರು ಕೈಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರನಗರ, ಬೆಳಗ್ಗೆ 10 ರಿಂದ.

■ **ಸುಯೋಗ್ ಆಸ್ಪತ್ರೆ, ಸುಯೋಗ್ ಶಿಕ್ಷಣ ಸಂಸ್ಥೆಗಳ ಸಮೂಹ ಮತ್ತು ಸುಯೋಗ್ ಕ್ಲಿನಿಕಲ್ ಸೊಸೈಟಿ:** ವೈದ್ಯಕೀಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ಉಪಯೋಗಗಳು ಕುರಿತು ವಿಚಾರ ಸಂಕಿರಣ, ಉದ್ಘಾಟನೆ :ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜು ಪ್ರಾಧ್ಯಾಪಕ ಡಾ. ಸಿ.ಆರ್. ಆದಿತ್ಯ, ಜೆಎಸ್‌ಎಸ್‌ಎಹೆಚ್‌ಇಆರ್ ಪ್ರಾಧ್ಯಾಪಕ ಡಾ. ವಿಕ್ರಮ್ ಪಾಟೀಲ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ. ಯೋಗಣ್ಣ, ಮುಖ್ಯ ಅತಿಥಿಗಳು : ಸುಯೋಗ್ ಆಸ್ಪತ್ರೆ ಟ್ರಸ್ಟಿ ಶ್ರೀಮತಿ ಸುಧಾ ಯೋಗಣ್ಣ, ಸ್ಥಳ: ಸೆಮಿನಾರ್ ಹಾಲ್, 4ನೇ ಮಹಡಿ, ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಸಂಜೆ 4.30ಕ್ಕೆ.

■ **ಸಾಧನಾ ಮಂದಿರ :** ಸರಸ್ವತಿ ಪೂಜಾ, ಸಂಜೆ 4.45 ರಿಂದ ಯಡತೊರೆ ಶ್ರೀ ಯೋಗಾನಂದೇಶ್ವರ ಮಠ; ರಾತ್ರಿ 6 ರಿಂದ ಶ್ರೀ ಕೃಷ್ಣಮಂದಿರ, ಗೋಕುಲಂ 3ನೇ ಹಂತ; ರಾತ್ರಿ 7 ರಿಂದ ಸಮುದಾಯ ಭವನ, ಗುರುದ್ವಾರ ಸಮೀಪ, ಬೃಂದಾವನ ಬಡಾವಣೆ.

■ **ಸೌಂಡ್ ಎನ್ ರಿದಂ ಆರ್ಕೇಸ್ಟ್ರಾ :** ಕರ್ನಾಟಕ ರತ್ನ ಡಾ. ವಿಷ್ಣುವರ್ಧನ್ ಅವರ ಜನ್ಮೋತ್ಸವ ಅಂಗವಾಗಿ ಚಿತ್ರಗೀತೆ ಗಾಯನ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.

■ **ಶ್ರೀ ಮನ್ಮಹಾರಾಜ ಸಂಸ್ಕೃತ ಪಾಠಶಾಲೆ :** ಚತುರ್ವೇದ ಸಂಹಿತಾ ಸ್ವಾಹಾಕಾರ ಯಜ್ಞ, ಸ್ಥಳ: ಪಾಠಶಾಲೆ ಆವರಣ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ದಸರಾ ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ: ಪ್ರೊ.ಸಿ.ನಾಗಣ್ಣ, ನಿರ್ಮಾಣ–ಜಿ. ಶಾಂತಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಕೆ.ಟಿ. ಉದಯ್ ಕಿರಣ್ ಹಾಗೂ ಕೆ.ಬಿ. ಸುನೀತಾ ಆಚಾರ್ಯ, ವ್ಯಾಖ್ಯಾನ–ಡಾ. ಜ್ಯೋತಿ ಶಂಕರ್, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ : ಶಾಂತಕುಮಾರ್ .ಜಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಭಾರತ ಹಾಗೂ ದಕ್ಷಿಣ ಆಫ್ರಿಕಾ ತಂಡಗಳ ನಡುವೆ ವಿಶಾಖಪಟ್ಟಣ, ಡಾ.ವೈ.ಎಸ್. ರಾಜಶೇಖರ ರೆಡ್ಡಿ ಎಸಿಎವಿಡಿಸಿಎ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯುವ ಐಸಿಸಿ ವಿಶ್ವಕಪ್ ಮಹಿಳಾ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ, 6.50 ಕೃಷಿರಂಗ–ಕಿಸಾನ್‌ವಾಣಿ, ಪ್ರಾಯೋಜಕರು –ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಭಾರತೀಯ ಆಹಾರ ನಿಗಮದ ಕಾರ್ಯಚಟುವಟಿಕೆಗಳನ್ನು ಕುರಿತು ಮೈಸೂರಿನ ಭಾರತೀಯ ಆಹಾರ ನಿಗಮದ ವಿಭಾಗೀಯ ಕಚೇರಿಯ ವ್ಯವಸ್ಥಾಪಕರಾದ ಕೆ.ವಿ.ಎಸ್. ಭಕ್ತವತ್ಸಲಂ ಹಾಗೂ ತಾಂತ್ರಿಕ ಸಹಾಯಕರಾದ ಎನ್.ಟಿ. ಶೀತಲ್ ಅವರೊಂದಿಗೆ ಸಂವಾದ, ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ ಮುಂದುವರಿಕೆ.


ದೈನಂದಿನ ಆಕರ್ಷಣೆಗಳು

ಮ. 1, 4 ಮತ್ತು ಸಂಜೆ 7	: ಜೆಮಿನಿ ಸರ್ಕಸ್, ಹಾರ್ಸ್ ಪಾರ್ಕ್ ಮೈದಾನ, ಕಾರಂಜಿ ಕೆರೆ ಸಮೀಪ (3 ಪ್ರದರ್ಶನ)
ಸಂಜೆ 6,7,8 ಮತ್ತು ರಾ.9	: ಅಂಬಾರಿ ಡಬ್ಬಲ್ ಡೆಕ್ಕರ್ ಬಸ್ ರೈಡ್ (1 ಗಂಟೆ, ದಿನ 4 ಟ್ರಿಪ್)
ಬೆ. 10 ರಿಂದ ರಾ.10 ರವರೆಗೆ	: ದಸರಾ ವಸ್ತುಪ್ರದರ್ಶನ.

ಚಾಮುಂಡಿಬೆಟ್ಟದಲ್ಲಿ ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯ ತೆಪ್ಪೋತ್ಸವ

- ಅಲಂಕೃತ ತೆಪ್ಪದಲ್ಲಿ ತಾಯಿ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ತೆಪ್ಪೋತ್ಸವ ಸೇವೆ
- ಬೆಟ್ಟದ ದೇವಿಕೆರೆಯಲ್ಲಿ ನಡೆದ ಉತ್ಸವದಲ್ಲಿ ಭಕ್ತಿಯ ಪರಾಕಾಷ್ಠೆ ಮೆರೆದ ಭಕ್ತರು





ಚಾಮುಂಡಿಬೆಟ್ಟದ ದೇವಿಕೆರೆಯಲ್ಲಿ ಬುಧವಾರ ರಾತ್ರಿ ಅಲಂಕೃತ ತೆಪ್ಪದಲ್ಲಿ ತಾಯಿ ಚಾಮುಂಡೇಶ್ವರಿಯ ತೆಪ್ಪೋತ್ಸವ ವಿಜೃಂಭಣೆಯಿಂದ ನಡೆಯಿತು. ಮತ್ತೊಂದು ಚಿತ್ರದಲ್ಲಿ ಅಪಾರ ಸಂಖ್ಯೆಯ ಭಕ್ತರು ತೆಪ್ಪೋತ್ಸವದಲ್ಲಿ ಪಾಲ್ಗೊಂಡಿರುವುದನ್ನು ಕಾಣಬಹುದು.

ಮೈಸೂರು, ಅ.8(ಪಿಎಂ)– ಚಾಮುಂಡಿಬೆಟ್ಟದ ದೇವಿಕೆರೆಯಲ್ಲಿ ಶ್ರೀ ಚಾಮುಂಡೇಶ್ವರಿ ತಾಯಿಯ ಉತ್ಸವ ಮೂರ್ತಿ ತೆಪ್ಪೋತ್ಸವ ಬುಧವಾರ ಅಪಾರ ಸಂಖ್ಯೆಯ ಭಕ್ತರ ಸಮ್ಮುಖದಲ್ಲಿ ಶ್ರದ್ಧಾ–ಭಕ್ತಿಯೊಂದಿಗೆ ವಿಜೃಂಭಣೆಯಿಂದ ನೆರವೇರಿತು. ವಿದ್ಯುತ್ ದೀಪಗಳಿಂದ ಅಲಂಕೃತಗೊಂಡ ತೆಪ್ಪದಲ್ಲಿ ತಾಯಿಯ ಉತ್ಸವ ಮೂರ್ತಿಗೆ ತೆಪ್ಪೋತ್ಸವ ಸೇವೆ ನಡೆಯುತ್ತಿದ್ದರೆ, ಮತ್ತೊಂದೆಡೆ ಭಕ್ತ ಸಮೂಹ, ಚಾಮುಂಡೇಶ್ವರಿ ದೇವಿಗೆ ಜೈಕಾರ ಹಾಕುತ್ತಾ ಭಕ್ತಿಯ ಪರಾಕಾಷ್ಠೆ ಮೆರೆಯಿತು.

ತೆಪ್ಪದಲ್ಲಿ ಸಿಂಹದ ಆಕೃತಿಯೊಂದಿಗೆ ಇದ್ದ ಆಸನದಲ್ಲಿ ದೇವಿಯ ಉತ್ಸವ ಮೂರ್ತಿಯನ್ನಿರಿಸಿ ದೇವಿಕೆರೆಯಲ್ಲಿ 3 ಸುತ್ತು ಪ್ರದಕ್ಷಿಣೆ ಹಾಕಲಾಯಿತು. ಈ ವೇಳೆ ಕೆರೆಯ ಸುತ್ತಲೂ ನೆರೆದಿದ್ದ ಭಕ್ತರು ದೇವಿಯ ದರ್ಶನ ಪಡೆದು ಪುನೀತರಾದರು. ತೆಪ್ಪೋತ್ಸವ ಸೇವೆ ವೇಳೆ ಒಂದೆಡೆ ಪೊಲೀಸ್ ಬ್ಯಾಂಡ್ ಸಂಗೀತ ಮೊಳಗಿದರೆ, ಮತ್ತೊಂದೆಡೆ ಮಂಗಳವಾದ್ಯದ ನಿನಾದ ಸೂಸಿತು.

ಇದೇ ವೇಳೆ ಹಲವು ಬಾರಿ ಸಿಡಿಮದ್ದು ಸಿಡಿಸಿ ಚಾಮುಂಡೇಶ್ವರಿ ತಾಯಿಗೆ ಗೌರವ ಸಲ್ಲಿಸಲಾಯಿತು. ಇದಕ್ಕೂ ಮುನ್ನ ತೆಪ್ಪೋತ್ಸವ ಪ್ರಯುಕ್ತ ಇಂದು ಬೆಳಗ್ಗೆಯಿಂದಲೇ ಚಾಮುಂಡೇಶ್ವರಿ ದೇವಿಯ ಸನ್ನಿಧಿಯಲ್ಲಿ ಧಾರ್ಮಿಕ ವಿಧಿ–ವಿಧಾನಗಳು ನಡೆದವು. ಪಲ್ಲಕ್ಕಿ ಉತ್ಸವದೊಂದಿಗೆ ಅಮ್ಮನವರ ಉತ್ಸವ ಮೂರ್ತಿಯ ಮೆರವಣಿಗೆ ಜರುಗಿತು. ವಿವಿಧ ಪೂಜಾ ಕೈಂಕರ್ಯದೊಂದಿಗೆ ದೇವಸ್ಥಾನದಿಂದ ಹೊರಟ ಮೆರವಣಿಗೆಯು ರಥದ ಬೀದಿಯ ಮೂಲಕ ಸಾಗಿ ದೇವಿಕೆರೆ ಅಂಗಳಕ್ಕೆ ಆಗಮಿಸಿತು.

ಕೆರೆ ಆವರಣದಲ್ಲಿರುವ ಗುಡಿಯಲ್ಲಿ ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕ ಶಶಿಶೇಖರ ದೀಕ್ಷಿತ್ ಅವರ ನೇತೃತ್ವದಲ್ಲಿ ಉತ್ಸವ ಮೂರ್ತಿಗೆ ವಿವಿಧ ಪೂಜಾ ವಿಧಿವಿಧಾನಗಳನ್ನು ನೆರವೇರಿಸಲಾಯಿತು. ಬಳಿಕ ಸುಮಾರು ರಾತ್ರಿ 7 ಗಂಟೆಗೆ ಬಣ್ಣಬಣ್ಣದ ವಿದ್ಯುತ್ ದೀಪಗಳಿಂದ ಅಲಂಕೃತಗೊಂಡು ಕಂಗೊಳಿಸುತ್ತಿದ್ದ ತೆಪ್ಪದಲ್ಲಿ ಅಮ್ಮನವರ ಮೂರ್ತಿಯನ್ನಿರಿಸಿ ದೇವಿಕೆರೆಯಲ್ಲಿ ಪ್ರದಕ್ಷಿಣೆ ಹಾಕಲಾಯಿತು.

ಈ ವೇಳೆ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಭಕ್ತರು ಉತ್ಸವ ಮೂರ್ತಿಗೆ ಕೈ ಮುಗಿದು ಭಕ್ತಿ ಸಮರ್ಪಿಸಿದರಲ್ಲದೆ, ತಮ್ಮ ಮೊಬೈಲ್‌ಗಳಲ್ಲಿ ತೆಪ್ಪದಲ್ಲಿದ್ದ ತಾಯಿ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ಚಿತ್ರೀಕರಿಸಿ ಸಂಭ್ರಮಿಸಿದರು. ಪ್ರದಕ್ಷಿಣೆ ನಂತರ ಅಮ್ಮನವರ ಮೂರ್ತಿಯನ್ನು ತೆಪ್ಪದಿಂದ ತಂದು ಪಲ್ಲಕ್ಕಿಯಲ್ಲಿರಿಸಿ, ಪೂಜೆ ನೆರವೇರಿಸಲಾಯಿತು. ಬಳಿಕ ಅಲ್ಲಿಂದ ಪಲ್ಲಕ್ಕಿ ಉತ್ಸವದ ಮೆರವಣಿಗೆ ಮೂಲಕ ಸ್ವಸ್ಥಾನವಾದ ದೇಗುಲಕ್ಕೆ ಅಮ್ಮನವರ ಉತ್ಸವ ಮೂರ್ತಿ ಕೊಂಡೊಯ್ಯಲಾಯಿತು. ದಸರಾ ಪ್ರಯುಕ್ತ ಬೆಟ್ಟದಲ್ಲಿ ಮಾಡಿರುವ ವಿದ್ಯುತ್ ದೀಪಾಲಂಕಾರದ ತಪ್ಪೋತ್ಸವದ ಮೆರಗು ಹೆಚ್ಚಿಸಿತು. ಕೆರೆಯ ಸುತ್ತಲೂ ಜಮಾಯಿಸಿದ್ದ ಭಕ್ತಾದಿಗಳು ಚಾಮುಂಡೇಶ್ವರಿ ತಾಯಿಗೆ ಜಯಘೋಷ ಮೊಳಗಿಸಿದರಲ್ಲದೆ, ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ಮೊಬೈಲ್‌ನಲ್ಲಿ ಫೋಟೋ–ವಿಡಿಯೋ ತೆಗೆದುಕೊಂಡು ಸಂಭ್ರಮಿಸಿದರು. ಮುನ್ನೆಚ್ಚರಿಕೆ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ಪ್ರದಕ್ಷಿಣೆ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕ ಶಶಿಶೇಖರ ದೀಕ್ಷಿತ್, ರಥೋತ್ಸವದ ಬಳಿಕ ಒಂದು ದಿನ ಬಿಟ್ಟು ತೆಪ್ಪೋತ್ಸವ ನಡೆಸುವ ಪರಂಪರೆ ನಡೆದು ಬಂದಿದೆ. ಅಂತೆಯೇ ಇಂದು ತೆಪ್ಪೋತ್ಸವ ಜರುಗುತ್ತಿದೆ. ಸಂಪ್ರದಾಯ ನಡೆದು ಬಂದಿರುವಂತೆ ಪೂಜೆ ನೆರವೇರಿಸಿ ದೇವಿಕೆರೆಗೆ ಚಾಮುಂಡೇಶ್ವರಿ ಅಮ್ಮನವರ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಮೆರವಣಿಗೆ ಮೂಲಕ ತರಲಾಯಿತು. ಬಳಿಕ ಅಮ್ಮನವರ ಉತ್ಸವ ಮೂರ್ತಿಗೆ ತೀರ್ಥಸ್ನಾನ ಮಾಡಿಸಿ ತೆಪ್ಪೋತ್ಸವಕ್ಕೆ ಚಾಲನೆ ನೀಡಲಾಯಿತು ಎಂದು ತಿಳಿಸಿದರು.

ಈ ಉತ್ಸವಕ್ಕೆ ಸಂವತ್ಸರೋತ್ಸವ ಎಂದು ಕರೆಯುತ್ತೇವೆ. ಅಂದರೆ ರಥೋತ್ಸವ ಹಾಗೂ ತೆಪ್ಪೋತ್ಸವ ಎರಡೂ ಒಳಗೊಂಡಂತೆ ವರ್ಷದಲ್ಲಿ ಒಮ್ಮೆ ಮಾತ್ರ ನಡೆಸುವುದಾಗಿದೆ. ಪುರಾಣ ಪ್ರಸಿದ್ಧ ದೇವಸ್ಥಾನವಾಗಿರುವ ಹಿನ್ನೆಲೆ ರಾಜರ ಕಾಲದಿಂದ ಯಾವ ಪ್ರತೀತಿಯಲ್ಲಿ ಆಚರಣೆ ಮಾಡಿಕೊಂಡು ಬರಲಾಗಿದೆಯೋ ಅಂತೆಯೇ ನಡೆಸಿಕೊಂಡು ಬರಲಾಗುತ್ತಿದೆ. ರಾಷ್ಟ್ರ ಮತ್ತು ರಾಜ್ಯಕ್ಕೆ ಒಳಿತಾಗಲಿ, ಜನತೆ ಸುಭಿಕ್ಷೆಯಿಂದ ಬಾಳಲಿ ಎಂದು ಮಾಡುವಂತಹ ಉತ್ಸವ ಇದು. ಅಂತೆಯೇ ಎಲ್ಲಾ ವಿಧಿವಿಧಾನಗಳನ್ನು ಇಂದು ಸಹ ನೆರವೇರಿಸಲಾಗಿದೆ ಎಂದು ವಿವರಿಸಿದರು.

ಅಮ್ಮನವರ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಇಲ್ಲಿಂದ ಮೆರವಣಿಗೆ ಮೂಲಕ ದೇವಸ್ಥಾನದ ಬಾಗಿಲಿಗೆ ತೆಗೆದುಕೊಂಡು ಹೋಗುತ್ತೇವೆ. ದೇವಸ್ಥಾನ ಒಳಗೆ ಅಮ್ಮನವರ ಮೂರ್ತಿ ತೆಗೆದುಕೊಂಡು ಹೋದ ನಂತರ ಮಹಾದ್ವಾರ ಮುಚ್ಚಲಾಗುತ್ತದೆ. ಆ ಬಳಿಕ ಸಾರ್ವಜನಿಕರಿಗೆ ದರ್ಶನದ ವ್ಯವಸ್ಥೆ ಇರುವುದಿಲ್ಲ. ಧಾರ್ಮಿಕ ವಿಧಿವಿಧಾನ ಮುಂದುವರೆಯುತ್ತದೆ ಎಂದು ತಿಳಿಸಿದರು.


ರಾಜವಂಶಸ್ಥರು ಗೈರು: ನಾಡಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ತೆಪ್ಪೋತ್ಸವಕ್ಕೆ ರಾಜವಂಶಸ್ಥರು ಗೈರಾಗಿದ್ದರು. ಅವರು ಬರಲೇಬೇಕೆಂಬ ಸಂಪ್ರದಾಯ ಇಲ್ಲ. ಕಾರಣಾಂತರಗಳಿಂದ ಅವರು ಇಂದು ಪಾಲ್ಗೊಂಡಿಲ್ಲ ಎನ್ನಲಾಗಿದ್ದು, ರಾಜವಂಶಸ್ಥರಿಗಾಗಿ ಆಸನಗಳನ್ನು ವ್ಯವಸ್ಥೆ ಸಹ ಮಾಡಲಾಗಿತ್ತು. ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪಾ ಮತ್ತಿತರ ಗಣ್ಯರು ಹಾಜರಿದ್ದರು.

ಡಿ.ಮಾದೇಗೌಡರಿಗೆ ಗೌರವ ಡಾಕ್ಟರೇಟ್



ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ವತಿಯಿಂದ ವಿಧಾನಪರಿಷತ್ ಮಾಜಿ ಸದಸ್ಯ, ಮೈಸೂರಿನ ಡಿ.ಮಾದೇಗೌಡರಿಗೆ ಗೌರವ ಡಾಕ್ಟರೇಟ್ ನೀಡಿ, ಗೌರವಿಸಲಾಯಿತು. ಈ ವೇಳೆ ರಾಜ್ಯಪಾಲ ಥಾವ್‌ಚಂದ್ ಗೆಹ್ಲೋಟ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಬೆಂಗಳೂರು ವಿವಿ ಕುಲಪತಿ ಜಯಕರ್ ಇನ್ನಿತರರಿದ್ದರು.

ಮಾಜಿ ಪ್ರಧಾನಿ ದೇವೇಗೌಡರ ಆರೋಗ್ಯ ವಿಚಾರಿಸಿದ ಶಾಸಕ ಜಿ.ಟಿ.ದೇವೇಗೌಡ





ಹೆಚ್.ಡಿ.ದೇವೇಗೌಡರು ಜಿ.ಟಿ. ದೇವೇಗೌಡರು

ಬೆಂಗಳೂರು, ಅ.8– ಅನಾರೋಗ್ಯ ದಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ರಾಷ್ಟ್ರಾಧ್ಯಕ್ಷ ರಾದ ಹೆಚ್.ಡಿ. ದೇವೇಗೌಡರನ್ನು ಇಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು ಭೇಟಿಯಾಗಿ, ಅವರ ಆರೋಗ್ಯ ವಿಚಾರಿಸಿದರು.

ಐಸಿಯುನಲ್ಲಿದ್ದ ದೇವೇಗೌಡರ ಆರೋಗ್ಯ ಸ್ಥಿತಿ ಸುಧಾರಣೆ ಹಿನ್ನೆಲೆಯಲ್ಲಿ ಇಂದು ವಾರ್ಡ್‌ಗೆ ಶಿಫ್ಟ್ ಮಾಡಲಾಗಿದೆ. ಆಗಷ್ಟೇ ಅವರ ಭೇಟಿಯಾಗಲು ಆಸ್ಪತ್ರೆಗೆ ಹೋದ ಜಿ.ಟಿ.ದೇವೇಗೌಡರು ಕಣ್ಣಿಗೆ ಬೀಳುತ್ತಿದ್ದಂತೆ ನಗುಮೊಗದಿಂದ 'ಬಾರಪ್ಪಾ... ಬಾ, ಇಂದು... ನಿನ್ನೆ... ಮೊನ್ನೆಯದಲ್ಲ. ನಮ್ಮದು 35 ವರ್ಷದ ಸ್ನೇಹ... ಹೇಗಿದ್ದೀರಾ' ಎಂದು ಮೆಲು ದನಿಯಲ್ಲೇ ವಿಚಾರಿಸುವಾಗಲೇ ಮಧ್ಯೆ ಪ್ರವೇಶಿಸಿದ ಜಿಟಿಡಿ, ಹೆಚ್ಚು ಮಾತನಾಡಿ ಆಯಾಸ ಮಾಡಿಕೊಳ್ಳಬೇಡಿ ಎಂದು ಹೇಳಿ, ಅವರ ಆರೋಗ್ಯ ವಿಚಾರಿಸಿದ್ದಾರೆ. ಕೊನೆಗೆ, ಎಲ್ಲವೂ ನಿಮಗೇ ಗೊತ್ತಿದೆಯಲ್ಲಾ ಎಂದು ಹೇಳಿ. ಅತೀ ಶೀಘ್ರ ನೀವು ಚೇತರಿಸಿಕೊಳ್ಳುವ ವಿಶ್ವಾಸ ನಮಗಿದೆ ಎಂದು ಹೇಳಿದ್ದಾರೆ. ಈ ವೇಳೆ ದೇವೇಗೌಡರ ಪುತ್ರ ಡಾ. ರಮೇಶ್ ಉಪಸ್ಥಿತರಿದ್ದರು.

ದೇವೇಗೌಡರ ಆರೋಗ್ಯದಲ್ಲಿ ಚೇತರಿಕೆ; ಐಸಿಯುನಿಂದ ವಾರ್ಡ್‌ಗೆ ಶಿಫ್ಟ್

ಬೆಂಗಳೂರು, ಅ.8– ಅನಾರೋಗ್ಯದ ಹಿನ್ನೆಲೆಯಲ್ಲಿ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿರುವ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಅವರು ಚೇತರಿಸಿಕೊಂಡಿದ್ದು, ಬುಧವಾರ ಅವರನ್ನು ವಾರ್ಡ್‌ಗೆ ಸ್ಥಳಾಂತರಿಸಲಾಗಿದೆ, ತಜ್ಞರ ತಂಡವು ಅವರ ಆರೋಗ್ಯದ ಮೇಲ್ವಿಚಾರಣೆ ಮಾಡುತ್ತಿದೆ. ಮಣಿಪಾಲ್ ಆಸ್ಪತ್ರೆ ಇಂದು ದೇವೇಗೌಡರ ಆರೋಗ್ಯದ ಬಗ್ಗೆ ಹೆಲ್ತ್ ಬುಲೆಟಿನ್ ಬಿಡುಗಡೆ ಮಾಡಿದ್ದು, ಮಾಜಿ ಪ್ರಧಾನಿಯ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ. ಹೀಗಾಗಿ ಅವರನ್ನು ವಾರ್ಡ್‌ಗೆ ಶಿಫ್ಟ್ ಮಾಡಲಾಗಿದೆ. ಅವರ ಆರೋಗ್ಯದ ಮೇಲೆ ವೈದ್ಯಕೀಯ ತಜ್ಞರ ತಂಡ ನಿಗಾ ವಹಿಸಿದೆ ಎಂದು ಮಾಹಿತಿ ನೀಡಿದೆ. ಚಳಿ ಜ್ವರ ಹಾಗೂ ಯೂರಿನ್ ಇನ್ಫೆಕ್ಷನ್‌ನಿಂದ ಬಳಲುತ್ತಿದ್ದ ದೇವೇಗೌಡ ಅವರನ್ನು ಸೋಮವಾರ ತಡರಾತ್ರಿ ಮಣಿಪಾಲ್ ಆಸ್ಪತ್ರೆಯ ತೀವ್ರ ನಿಗಾ ಘಟಕಕ್ಕೆ ದಾಖಲಿಸಲಾಗಿತ್ತು. ಡಾ.ಸುದರ್ಶನ್ ಬಲ್ಲಾಳ್ ಅವರ ನೇತೃತ್ವದಲ್ಲಿ ಚಿಕಿತ್ಸೆ ನೀಡಲಾಗಿದ್ದು, ಇಂದು ವಾರ್ಡ್‌ಗೆ ಶಿಫ್ಟ್ ಮಾಡಲಾಗಿದೆ ಎಂದು ಆಸ್ಪತ್ರೆ ತಿಳಿಸಿದೆ.

ಪರಪ್ಪನ ಅಗ್ರಹಾರ ಜೈಲಿನಲ್ಲಿ ರೌಡಿ ಶೀಟರ್ ಹುಟ್ಟುಹಬ್ಬ: 7 ಜೈಲು ಅಧಿಕಾರಿಗಳ ಅಮಾನತು

ಬೆಂಗಳೂರು, ಅ.8– ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ರೌಡಿಶೀಟರ್ ಗುಬ್ಬಚ್ಚಿ ಸೀನಾ ಹುಟ್ಟುಹಬ್ಬ ಆಚರಣೆ ಪ್ರಕರಣ ಸಂಬಂಧ 7 ಜೈಲು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ.

ಸರ್ಜಾಪುರದ ರೌಡಿಶೀಟರ್ ಶ್ರೀನಿವಾಸ್ ಅಲಿಯಾಸ್ ಗುಬ್ಬಚ್ಚಿ ಸೀನ ಜೈಲಿನ ಬ್ಯಾರಕ್‌ನಲ್ಲಿ ತನ್ನ ಸಹಚರರ ಜತೆ ಕೇಕ್ ಕತ್ತರಿಸಿ ಸೇಬಿನ ಹಾರ ಹಾಕಿಸಿಕೊಂಡು ಭರ್ಜರಿಯಾಗಿ ಹುಟ್ಟುಹಬ್ಬ ಆಚರಿಸಿಕೊಂಡಿದ್ದ. ಜೊತೆಗೆ ಮೊಬೈಲ್‌ನಲ್ಲಿ ಬರ್ತ್‌ಡೇ ಪಾರ್ಟಿಯ ವಿಡಿಯೋ, ಫೋಟೋ ತೆಗೆದು ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡಿಕೊಂಡಿದ್ದ. ಬರ್ತ್‌ಡೇ ಆಚರಣೆಯ ವಿಡಿಯೋ ಹೊರಗಡೆ ಬಂದಿದ್ದೇ ತಡ, ಎಫ್‌ಐಆರ್ ದಾಖಲಾಗಿತ್ತು. ಇದೀಗ ಎಡಿಜಿಪಿ ದಯಾನಂದ್ ಅವರು ಇಲಾಖಾ ತನಿಖೆಯ ಬಳಿಕ 7 ಅಧಿಕಾರಿಗಳನ್ನು ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ.

ಆತುರಾತುರ ಜಾತಿಗಣತಿ; ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟ

ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಟೀಕೆ

ಬೆಂಗಳೂರು, ಅ. 8(ಕೆಎಂಶಿ)–ಯಾರದೋ ಒತ್ತಡಕ್ಕೆ ಮಣಿದು ಆತುರಾತುರವಾಗಿ ಜಾತಿಗಣತಿ ಸಮೀಕ್ಷೆ ಮಾಡುತ್ತಿರುವ ರಾಜ್ಯ ಸರ್ಕಾರ ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟವಾಡುತ್ತಿದೆ ಎಂದು ಜೆಡಿಎಸ್ ಯುವಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಟೀಕಿಸಿದ್ದಾರೆ.

ಕಾಂಗ್ರೆಸ್ ಸರ್ಕಾರ ಪೂರ್ವ ತಯಾರಿ ಇಲ್ಲದೆ ನಡೆಸುತ್ತಿರುವ ಸಮೀಕ್ಷೆಯಿಂದ ದಿನದಿಂದ ದಿನಕ್ಕೆ ಗೊಂದಲಮಯವಾಗಿದೆ. ಸರ್ಕಾರಕ್ಕೆ ವಿದ್ಯಾರ್ಥಿಗಳ ಭವಿಷ್ಯವಲ್ಲ ಜಾತಿ ಮುಖ್ಯ ಎಂಬಂತಾಗಿದೆ. ಕರ್ನಾಟಕದ 2 ಕೋಟಿ ಮನೆಗಳಲ್ಲಿ ವಾಸಿಸುವ 7 ಕೋಟಿ ಜನರ ಸಮೀಕ್ಷೆಯನ್ನು ಕೇವಲ 15 ದಿನಗಳಲ್ಲಿ ನಡೆಸಲು ಸಾಧ್ಯವಿಲ್ಲ ಎಂಬುದು ಮೊದಲೇ ಸ್ಪಷ್ಟವಾಗಿತ್ತು.



ಸರ್ಕಾರಿ ಶಾಲೆಗಳು ದೀಪಾವಳಿ ನಂತರವೇ ಪುನರಾರಂಭವಾಗಲಿವೆ. ಇದರಿಂದ ಲಕ್ಷಾಂತರ ಶಾಲಾ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಪರಿಣಾಮ ಬೀರಲಿದೆ, ಆದರೆ, ಖಾಸಗಿ ಶಾಲೆಗಳು ರಜೆ ಇಲ್ಲದೆ ನಡೆಯುವುದರಿಂದ ವಿದ್ಯಾಭ್ಯಾಸದಲ್ಲಿ ಸರ್ಕಾರಿ ಶಾಲಾ ಮಕ್ಕಳಿಗಿಂತ ಮುಂದಿರುತ್ತಾರೆ ಎಂದರು.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಸಮೀಕ್ಷೆ ನಿಜವಾಗಿಯೂ ಸಾಮಾಜಿಕ ಕಲ್ಯಾಣದ ಬಗ್ಗೆ ಆಗಿದ್ದರೆ, ಬೇಸಿಗೆ ರಜೆ ಸಮಯದಲ್ಲಿ ಶಿಕ್ಷಣಕ್ಕೆ ಅಡ್ಡಿಪಡಿಸದೆ ವ್ಯವಸ್ಥಿತವಾಗಿ ನಡೆಸಬಹುದಿತ್ತು ಎಂದಿದ್ದಾರೆ.

ರಾಜಕೀಯದ ತೆವಲಿಗೋಸ್ಕರ ಸಾರ್ವಜನಿಕರ ತೆರಿಗೆ ಹಣ ವ್ಯರ್ಥ ಮಾಡುವ ಜೊತೆಗೆ ವಿದ್ಯಾರ್ಥಿಗಳ ಶಿಕ್ಷಣಕ್ಕೂ ಅಡ್ಡಿಯಾಗುತ್ತಿದ್ದು ಸರ್ಕಾರದ ನಿಲುವನ್ನು ಖಂಡಿಸುವುದಾಗಿ ತಿಳಿಸಿದ್ದಾರೆ.

ಸ್ಮರಣೀಯ ಸೇವೆಗಾಗಿ ಅರಣ್ಯ ಸಿಬ್ಬಂದಿಗೆ ಮುಖ್ಯಮಂತ್ರಿಗಳ ಚಿನ್ನದ ಪದಕ









ಪಶುವೈದ್ಯ ಡಾ.ಹೆಚ್.ರಮೇಶ್, ಅಂತರಸಂತೆ ಆರ್‌ಎಫ್‌ಓ ಎಸ್.ಎಸ್.ಸಿದ್ದರಾಜು, ದಸರಾ ಆನೆ ಭೀಮನ ಮಾವುತ ಗುಂಡಣ್ಣ, ಸಂಗಮ ವಲಯದ ಡಿಆರ್‌ಎಫ್‌ಓ ಸಿ.ಅನಿಲ್ ಕುಮಾರ್ ಸಿಎಂ ಚಿನ್ನದ ಪದಕ ಸ್ವೀಕರಿಸುತ್ತಿರುವುದು.

ಮೈಸೂರು,ಅ.8(ಎಂಟಿವೈ)– ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಕಾವೇರಿ ಹಾಗೂ ಮಲೆ ಮಹದೇಶ್ವರಬೆಟ್ಟ ವನ್ಯಧಾಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಐವರಿಗೆ ಬುಧವಾರ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ವನ್ಯಜೀವಿ ಸಪ್ತಾಹ ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಿಎಂ ಚಿನ್ನದ ಪದಕ ನೀಡಿ ಗೌರವಿಸಿದರು.

ರಾಜ್ಯದ ವಿವಿಧ ವೃತ್ತಗಳಲ್ಲಿ ಸೇವೆ ಸಲ್ಲಿಸುತ್ತಿರುವ 25 ಮಂದಿ ಅರಣ್ಯ ಸಿಬ್ಬಂದಿ ಅತ್ಯುತ್ತಮ ಸೇವೆ ಪರಿಗಣಿಸಿ 2024ನೇ ಸಾಲಿನ ಮುಖ್ಯಮಂತ್ರಿಗಳ ಚಿನ್ನದ ಪದಕಕ್ಕೆ ಆಯ್ಕೆ ಮಾಡಲಾಗಿತ್ತು. ವಿಧಾನಸೌಧದ ಬಾಂಕ್ವೆಂಟ್ ಹಾಲ್‌ನಲ್ಲಿ ಇಂದು ಬೆಳಗ್ಗೆ ನಡೆದ 71ನೇ ವನ್ಯಜೀವಿ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಅತ್ಯುತ್ತಮ ಸೇವೆ, ವನ್ಯ ಮತ್ತು ಅರಣ್ಯ ಸಂಪತ್ತಿನ ಸಂರಕ್ಷಣೆಯಲ್ಲಿ ಅವಿಸ್ಮರಣೀಯ ಸೇವೆ ಸಲ್ಲಿಸಿದ 25 ಮಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಅರಣ್ಯ ಇಲಾಖೆಯ ರಾಯಭಾರಿ, ಕ್ರಿಕೆಟಿಗ ಅನಿಲ್ ಕುಂಬ್ಳೆ ಉಪಸ್ಥಿತಿಯಲ್ಲಿ ಸಿಎಂ ಚಿನ್ನದ ಪದಕ ನೀಡಿ, ಗೌರವಿಸಿದರು.

ನಾಗರಹೊಳೆ ವ್ಯಾಪ್ತಿಯ ಮೂವರಿಗೆ ಸಿಎಂ ಪದಕ: ಈ 25 ಮಂದಿಯಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಮೂವರಿಗೆ ಸಿಎಂ ಚಿನ್ನದ ಪದಕ ಲಭಿಸಿದೆ.

ಪಶುವೈದ್ಯ ಡಾ.ಹೆಚ್.ರಮೇಶ್: ಏಕೈಕ ಪಶುವೈದ್ಯ ಎನಿಸಿರುವ ಡಾ.ಹೆಚ್. ರಮೇಶ್ ನಾಗರಹೊಳೆ ಭಾಗದ ಮತ್ತಿಗೋಡು, ಬಳ್ಳೆ, ಭೀಮನಕಟ್ಟೆ ಆನೆ ಕ್ಯಾಂಪ್‌ಗಳಲ್ಲಿರುವ ಆನೆಗಳ ಆರೋಗ್ಯ ನೋಡಿಕೊಳ್ಳುತ್ತಿದ್ದಾರೆ. ಅಲ್ಲದೆ, ಇದುವರೆಗೆ 71 ಕಾಡಾನೆ ಸೆರೆ ಹಿಡಿದು, 30 ಆನೆಗಳಿಗೆ ರೇಡಿಯೋ ಕಾಲರ್ ಅಳವಡಿಸಿ ಕಾಡಿಗೆ ಬಿಡುಗಡೆ ಮಾಡಿದ್ದಾರೆ. 14 ಹುಲಿ ಸೆರೆ ಹಿಡಿದು, 4 ಹುಲಿಗಳಿಗೆ ರೇಡಿಯೋ ಕಾಲರ್ ಅಳವಡಿಸಿದ್ದಾರೆ. 51 ಆನೆ, 20 ಹುಲಿ, 20 ಚಿರತೆ ಸೇರಿದಂತೆ ಹಲವು ಪ್ರಾಣಿಗಳ ಮರಣೋತ್ತರ ಪರೀಕ್ಷೆ ಮಾಡಿದ್ದಾರೆ. ಬನ್ನೇರುಘಟ್ಟದಲ್ಲಿ ಸೇವೆ ಸಲ್ಲಿಸುವ ವೇಳೆ ಆನೆ, ಹುಲಿ, ಸಿಂಹ, ಇತರೆ ಪ್ರಾಣಿಗಳಿಗೆ ಶಸ್ತ್ರಚಿಕಿತ್ಸೆ, ಲೇಸರ್ ಚಿಕಿತ್ಸೆ ಇನ್ನಿತರ ಚಿಕಿತ್ಸಾ ವಿಧಾನದ ಮೂಲಕ ಪ್ರಾಣಿಗಳ ಆರೋಗ್ಯ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅವರಿಗೆ ಈಗ ಸಿಎಂ ಪದಕ ಲಭಿಸಿದೆ.

ಭೀಮನ ಮಾವುತ ಗುಂಡಣ್ಣ: ದಸರಾ ಗಜಪಡೆಯ ಕಿರಿಯ ಗಂಡಾನೆ ಹಾಗೂ ಸೋಶಿಯಲ್ ಮೀಡಿಯಾದಲ್ಲಿ ಹವಾ ಎಬ್ಬಿಸಿ ಅಪಾರ ಜನರ ಪ್ರೀತಿಗೆ ಪಾತ್ರವಾಗಿರುವ ಭೀಮನ ಮಾವುತ ಗುಂಡಣ್ಣ (ಗುಂಡು) ಅವರಿಗೆ ಸಿಎಂ ಚಿನ್ನದ ಪದಕ ಲಭಿಸಿದೆ. ಕಳೆದ 16 ವರ್ಷದಿಂದ ಮಾವುತರಾಗಿ ಸೇವೆ ಸಲ್ಲಿಸುತ್ತಿರುವ ಇವರು 12 ವರ್ಷದಿಂದ ವರಲಕ್ಷ್ಮೀ, ಜೂನಿಯರ್ ದ್ರೋಣ ಹಾಗೂ ಭೀಮನೊಂದಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. 100ಕ್ಕೂ ಹೆಚ್ಚು ಕಾಡಾನೆ ಸೆರೆ ಹಾಗೂ ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಧೈರ್ಯದಿಂದ ಪಾಲ್ಗೊಂಡಿರುವ ಗುಂಡಣ್ಣ ಅವರ ಸೇವೆಗೆ ಸಿಎಂ ಚಿನ್ನದ ಪದಕ ದೊರೆತಿದೆ.

ಕಾಕನಕೋಟೆ ಆರ್‌ಎಫ್‌ಓ: ನಾಗರಹೊಳೆ ಅರಣ್ಯದ ಅಂತರಸಂತೆ ವಲಯದ ಆರ್‌ಎಫ್‌ಓ ಎಸ್.ಎಸ್.ಸಿದ್ದರಾಜು ಅವರಿಗೆ ಸಿಎಂ ಚಿನ್ನದ ಪದಕ ಲಭಿಸಿದೆ. 100 ಅಡಿ ಆಳದ ತೆರೆದ ಬಾವಿಗೆ ಬಿದ್ದಿದ್ದ ಚಿರತೆ ರಕ್ಷಿಸಲು ಬೋನಿನೊಳಗೆ ಕುಳಿತು ಬಾವಿಗೆ ಇಳಿದಿದ್ದ ಇವರು, ಮನ್ರೇಗಾ ಯೋಜನೆಯಡಿ 365 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಲಂಟಾನಾ ಕಳೆ ಗಿಡ ತೆರವು ಮಾಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅಲ್ಲದೆ, ಕಳ್ಳಬೇಟೆ ತಡೆಗೆ ಹೆಚ್ಚಿನ ಆದ್ಯತೆ ನೀಡಿರುವುದಕ್ಕೆ ಈಗ ಪದಕ ಲಭಿಸಿದೆ.

ಸಿ.ಅನಿಲ್ ಕುಮಾರ್: ಕಾವೇರಿ ವನ್ಯಧಾಮದ ಸಂಗಮ ವಲಯದ ಪ್ರಭಾರ ಆರ್‌ಎಫ್‌ಓ ಆಗಿರುವ ಸಿ.ಅನಿಲ್ ಕುಮಾರ್‌ಗೆ, 7 ಅರಣ್ಯ ಅಪರಾಧ ಪ್ರಕರಣಗಳ ಪತ್ತೆ ಹಾಗೂ ವನ್ಯಜೀವಿ ಸಂರಕ್ಷಣೆಗೆ ಸಲ್ಲಿಸಿದ ಸೇವೆಗೆ ಸಿಎಂ ಚಿನ್ನದ ಪದಕ ಲಭಿಸಿದೆ. ಇವರು, ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಶೆಡ್ಯೂಲ್–1ರ ವಾಟರ್ ಮಾನಿಟರ್ ಪ್ರಾಣಿಯನ್ನು ಬೇಟೆಯಾಡುತ್ತಿದ್ದ ನಾಲ್ವರನ್ನು ಆಟೋರಿಕ್ಷಾ ವಾಹನ ಸಹಿತ ಹಿಡಿದು ಸಾಹಸ ಪ್ರದರ್ಶಿಸಿದ್ದರು. ಅಲ್ಲದೆ, ಜಿಂಕೆ, ಮುಳ್ಳಂದಿ, ಕಾಡುಮೊಲ ಬೇಟೆಗಾರರು ಹಾಗೂ ಮಾಂಸ ಸಾಗಾಟ ಪ್ರಕರಣ ಭೇದಿಸಿದ್ದರು. ಅಲ್ಲದೆ, ಕಾವೇರಿ ನದಿಯಲ್ಲಿ ಅಪಾಯಕಾರಿ ಡೈನಾಮೆಟ್ ಸ್ಫೋಟಿಸಿ ಮೀನುಗಾರಿಕೆ ಮಾಡುತ್ತಿದ್ದ ಕೆಲವರನ್ನು ಬಂಧಿಸಿದ್ದರು. ಅರಣ್ಯಕ್ಕೆ ಬೆಂಕಿ ಇಟ್ಟ ಇಬ್ಬರನ್ನು ಪತ್ತೆ ಮಾಡಿದ್ದರು. ಈ ಎಲ್ಲಾ ಸೇವೆಗೆ ಅವರಿಗೆ ಸಿಎಂ ಪದಕ ನೀಡಿ ಗೌರವಿಸಲಾಗಿದೆ.

ಮಲೆ ಮಹದೇಶ್ವರ ವನ್ಯಧಾಮದ ಅರಣ್ಯ ರಕ್ಷಕ: ಚಾಮರಾಜನಗರ ವೃತ್ತದ ಮಲೆ ಮಹದೇಶ್ವರ ವನ್ಯಧಾಮದಲ್ಲಿ ಅರಣ್ಯ ರಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ವಿಠಲ್ ಭೀರಪ್ಪ ಶಿರಗಾವಿ ಅವರಿಗೆ ಸಿಎಂ ಚಿನ್ನದ ಪದಕ ಲಭಿಸಿದೆ. ಅರಣ್ಯ ಅಪರಾಧಗಳನ್ನು ಭೇದಿಸುವ ಹಾಗೂ ವನ್ಯಜೀವಿ ಸಂರಕ್ಷಣೆಯಲ್ಲಿ ತೋರಿದ ಸಾಹಸಕ್ಕೆ ಸಿಎಂ ಚಿನ್ನದ ಪದಕ ಲಭಿಸಿದೆ. ಶ್ರೀಗಂಧ ಚೋರರ ಕೃತ್ಯ ಪತ್ತೆ ಮಾಡಿ, ಆರೋಪಿಗಳಿಗೆ 7 ವರ್ಷ ಜೈಲು ಶಿಕ್ಷೆ ಕೊಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಇದುವರೆಗೆ 167 ಕೆಜಿ ಶ್ರೀಗಂಧ ಜಪ್ತಿ ಮಾಡಿದ್ದಾರೆ. ಅದರಲ್ಲಿ 120 ಕೆಜಿ ಶ್ರೀಗಂಧವನ್ನು ಕಾರಿನಲ್ಲಿ ಐವರು ಸಾಗಿಸುತ್ತಿದ್ದಾಗ ಅವರನ್ನು ಬಂಧಿಸಿ, ಕಾರು ಹಾಗೂ ಶ್ರೀಗಂಧ ವಶಪಡಿಸಿಕೊಂಡು ಹಿರಿಯ ಅಧಿಕಾರಿಗಳ ಮೆಚ್ಚುಗೆಗೆ ಪಾತ್ರವಾಗಿದ್ದಾರೆ. 15ಕ್ಕೂ ಹೆಚ್ಚು ಉರುಳು ಪತ್ತೆ, ಡ್ರೋನ್ ಬಳಸಿ ಕಪ್ಪು ಚಿರತೆ, ರಣಹದ್ದು ಇರುವಿಕೆ ಪತ್ತೆ ಮಾಡಿದ್ದಾರೆ. ಸತತ ಐದು ವರ್ಷ ತಮ್ಮ ಗಸ್ತು ವ್ಯಾಪ್ತಿಯಲ್ಲಿ ಬೆಂಕಿ ಪ್ರಕರಣ ಸಂಭವಿಸದಂತೆ ನೋಡಿಕೊಂಡಿದ್ದಾರೆ. ಇದಕ್ಕಾಗಿ ಸಿಎಂ ಚಿನ್ನದ ಪದಕ ಲಭಿಸಿದೆ.

ಸಾರ್ವಜನಿಕ ಪ್ರಕಟಣೆ

ಅದಾಗಿ ನಮ್ಮ ಕಕ್ಷಿದಾರರಾದ ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಕಬ್ಬರೆ ಗ್ರಾಮದಲ್ಲಿ ವಾಸವಾಗಿರುವ ಶ್ರೀ ಕೆ.ಜಿ. ಸಿದ್ದರಾಜು ರವರ ಮಗ ಶ್ರೀ ಚೇತನ್ ಕುಮಾರ್ ಎಸ್. ರವರು ಷೆಡ್ಯೂಲ್ ಸ್ವತ್ತಿನ ಸಂಪೂರ್ಣ ಮಾಲೀಕರಾಗಿದ್ದು, ಸದರಿಯವರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ತಮ್ಮಲ್ಲಿದ್ದ ದಿನಾಂಕ: 22–01–1994 ರ ಮೂಲ ನೋಂದಾಯಿತ ಶುದ್ಧಕ್ರಯ ಪತ್ರವನ್ನು ಮತ್ತು ದಿನಾಂಕ: 04–05–1994 ರ ಮೂಲ ನೋಂದಾಯಿತ ವಿಲ್ ಪತ್ರವನ್ನು ದಿನಾಂಕ: 01–02–2025 ರಂದು ಮಂಡ್ಯ ಬಸ್ ನಿಲ್ದಾಣದಲ್ಲಿ ಕಳೆದುಕೊಂಡಿರುತ್ತಾರೆ. ಸದರಿ ದಿನಾಂಕ: 22–01–1994 ರ ಕ್ರಯಪತ್ರವು ಮಂಡ್ಯ ಉಪನೋಂದಣಾಧಿಕಾರಿಯವರ ಕಛೇರಿಯ 1ನೇ ಪುಸ್ತಕದ ಸಂಪುಟ ಸಂಖ್ಯೆ 3402, 78–80 ನೇ ಪುಟಗಳಲ್ಲಿ 1993–94 ನೇ ಸಾಲಿನಲ್ಲಿ 4813ನೇ ನಂಬರಾಗಿ ದಿನಾಂಕ: 22–01–1994 ರಂದು ನೋಂದಾಯಿಸಲ್ಪಟ್ಟಿರುತ್ತದೆ. ಸದರಿ ಪತ್ರವನ್ನು ಶ್ರೀ ಜೆ.ಲಕ್ಷ್ಮಣರವರು ಶ್ರೀಮತಿ ರುದ್ರಮ್ಮ ರವರಿಗೆ ಬರೆದುಕೊಟ್ಟಿರುತ್ತಾರೆ. ಅದೇ ರೀತಿ ಸದರಿ ದಿನಾಂಕ: 04–05–1994 ರ ವಿಲ್ ಪತ್ರವು ಮಂಡ್ಯ ಉಪನೋಂದಣಾಧಿಕಾರಿಯವರ ಕಛೇರಿಯ 3ನೇ ಪುಸ್ತಕದ ಸಂಪುಟ ಸಂಖ್ಯೆ 48, ಪುಟ ಸಂಖ್ಯೆ 94–95, 1994–95 ನೇ ಸಾಲಿನಲ್ಲಿ 17 ನೇ ನಂಬರಾಗಿ ದಿನಾಂಕ: 04–05–1994 ರಂದು ನೋಂದಾಯಿಸಲ್ಪಟ್ಟಿರುತ್ತದೆ. ಸದರಿ ಪತ್ರವನ್ನು ಶ್ರೀಮತಿ ರುದ್ರಮ್ಮರವರು ಇವರ ಮೊಮ್ಮಗನಾದ ಶ್ರೀ ಎಸ್. ಮಹಂತೇಶರವರಿಗೆ ಬರೆದುಕೊಟ್ಟಿರುತ್ತಾರೆ.

ಸದರಿ ಅಸಲು ಕ್ರಯಪತ್ರ ಮತ್ತು ಅಸಲು ವಿಲ್‌ಪತ್ರ ಯಾರಿಗಾದರೂ ಸಿಕ್ಕಿದಲ್ಲಿ ಅದನ್ನು ಈ ಕೆಳಕಂಡ ವಕೀಲರಿಗೆ ಹಿಂತಿರುಗಿಸಬೇಕೆಂತಲೂ ಹಾಗೂ ಈ ಸಂಬಂಧ ಈ ಕೆಳಕಂಡಂತೆ ಸಾರ್ವಜನಿಕ ಪ್ರಕಟಣೆಯನ್ನು ನೀಡುತ್ತಿದ್ದಾರೆ. ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ/ವ್ಯಕ್ತಿಗಳು/ಸಂಘ ಸಂಸ್ಥೆಗಳು ಅಥವಾ ಷೆಡ್ಯೂಲ್ ಸ್ವತ್ತಿನ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಹಕ್ಕು, ವಾರಸು, ಮಾಲೀಕತ್ವ ಹಾಗೂ ಇನ್ನಿತರೆ ಯಾವುದೇ ರೀತಿಯ ಮಾಲೀಕತ್ವವನ್ನು ಹೊಂದಿದ್ದಂತಹ ಪಕ್ಷದಲ್ಲಿ ಅಂತಹ ವ್ಯಕ್ತಿಗಳು ಈ ಕೆಳಗೆ ಸಹಿ ಮಾಡಿರುವ ವಕೀಲರ ವಿಳಾಸಕ್ಕೆ ಸೂಕ್ತ ದಾಖಲಾತಿಗಳ ಸಮೇತ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಈ ಸಾರ್ವಜನಿಕ ಪ್ರಕಟಣೆ ಪ್ರಕಟವಾದಂತಹ ಹದಿನೈದು (15) ದಿನಗಳೊಳಗಾಗಿ ಲಿಖಿತವಾಗಿ ಸಲ್ಲಿಸುವಂತೆ ಈ ಮೂಲಕ ಸೂಚಿಸಲಾಗಿದೆ. ಆನಂತರ ಬರುವಂತಹ ಯಾವುದೇ ಆಕ್ಷೇಪಣೆಗಳಿಗೆ ನಮ್ಮ ಕಕ್ಷಿದಾರರು ಜವಾಬ್ದಾರರಲ್ಲವೆಂತಲೂ ಈ ಮೂಲಕ ತಿಳಿಯಪಡಿಸಲಾಗುತ್ತಿದೆ.

ಷೆಡ್ಯೂಲ್ ಸ್ವತ್ತಿನ ವಿವರ : ಮಂಡ್ಯ, ಉದಯಗಿರಿ, ವಾರ್ಡ್ ನಂ. 25, ಸ್ವತ್ತಿನ ನಂ. 25–3–541–3ಎ, ನಿರ್ಧರಣಾ ಸಂಖ್ಯೆ ಡಿ7/3288/3033/6207, ಸ್ವತ್ತಿನ ಹಳೆಯ ನಂ. 6207 ರ ಅಳತೆ ಪೂರ್ವ–ಪಶ್ಚಿಮ: 15.240030 ಮೀಟರ್ ಹಾಗೂ ಉತ್ತರ–ದಕ್ಷಿಣ : 6.096012 ಮೀಟರ್ ಇರುವ ಒಟ್ಟು 92.9030 ಚದರ ಮೀಟರ್ ಅಳತೆಯ ಮಂಡ್ಯ ನಗರಸಭೆ ವ್ಯಾಪ್ತಿಗೆ ಸೇರಿದ ಖಾಲಿ ನಿವೇಶನಕ್ಕೆ ಚೆಕ್ಕುಬಂದಿ:

ಪೂರ್ವಕ್ಕೆ: ಸ್ವತ್ತಿನ ನಂ. 25–3–543–307 ; ಪಶ್ಚಿಮಕ್ಕೆ: ರಸ್ತೆ 541 ; ಉತ್ತರಕ್ಕೆ: ಸ್ವತ್ತಿನ ನಂ. 25–3–541–300ಬಿ ; ದಕ್ಷಿಣಕ್ಕೆ: ಸ್ವತ್ತಿನ ನಂ. 25–3–541–298.

Sd/- S. Pradeep Kumar, M.B.A., LL.B. Roll No. KAR/1332/2012, Advocate, #2917/A, 1st Floor, Opp. TTL College, Kantharaja Urs Road, Saraswathipuram, Mysuru-570 009. Mob: 9740315184

ದಿನಾಂಕ: 13–05–2025. ಸ್ಥಳ: ಮಂಡ್ಯ

ರಿಟರ್ನಿಂಗ್ ಅಫೀಸರ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಹೆಡಿಯಾಲ, ನಂಜನಗೂಡು ತಾಲ್ಲೂಕು ರವರ ಕಾರ್ಯಾಲಯ.

ಪತ್ರಿಕಾ ಪ್ರಕಟಣೆ

ರಿಟರ್ನಿಂಗ್ ಆಫೀಸರ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಹೆಡಿಯಾಲ, ನಂಜನಗೂಡು ತಾಲ್ಲೂಕು ರವರ ಕಾರ್ಯಾಲಯ. ಈ ಸಂಘದ ಆಡಳಿತ ಮಂಡಳಿಗೆ ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಗೆ ಚುನಾವಣೆ ನಡೆಸಲು ದಿನಾಂಕ: 25–10–2025ರ ಶನಿವಾರ ಬೆಳಿಗ್ಗೆ 09–00 ಗಂಟೆಯಿಂದ ಸಂಜೆ 4–00 ಗಂಟೆಯವರೆಗೆ ಸಂಘದ ಕಛೇರಿ ಆವರಣ ಇಲ್ಲಿ ನಡೆಸಲು ನಿಗಧಿಪಡಿಸಲಾಗಿರುತ್ತದೆ. ಚುನಾವಣೆಗೆ ಸ್ಪರ್ಧಿಸಲು ನಾಮಪತ್ರಗಳನ್ನು ದಿನಾಂಕ: 11–10–2025 ರಿಂದ 17–10–2025 ರವರೆಗೆ ಬೆಳಿಗ್ಗೆ 11–00 ಗಂಟೆಯಿಂದ ಮಧ್ಯಾಹ್ನ 2–00 ಗಂಟೆಯವರೆಗೆ ಸಂಘದ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ಚುನಾವಣಾ ವೇಳಾ ಪಟ್ಟಿಯನ್ನು ಎಲ್ಲಾ ಅರ್ಹ ಸದಸ್ಯರುಗಳಿಗೂ ರವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಸಂಘದ ಕಾರ್ಯದರ್ಶಿ ಹಾಗೂ ರಿಟರ್ನಿಂಗ್ ಅಧಿಕಾರಿಯನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– ಅವಿನಾಶ್.ಜಿ.ಎಸ್
ರಿಟರ್ನಿಂಗ್ ಅಧಿಕಾರಿ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಹೆಡಿಯಾಲ, ನಂಜನಗೂಡು ತಾಲ್ಲೂಕು

ನಕ್ಕರೆ ಅದೇ ಸ್ವರ್ಗ

ಮಹಿಳೆ : ಲಾಯರ್ ಸರ್ ನನಗೆ ಗಂಡ ಬೇಕು.
ಲಾಯರ್ : ಡೈವೋರ್ಸ್ ಆಗಿ ಆರು ತಿಂಗಳಾಗಿಲ್ಲ ಮತ್ತೆ ಗಂಡ ಬೇಕು ಅಂತೀಯಲ್ಲಮ್ಮ?
ಮಹಿಳೆ : ಅವನ ಖುಷಿನಾ ನನ್ನ ಕೈಯಲ್ಲಿ ನೋಡೋಕ್ಕೆ ಆಗ್ತಾ ಇಲ್ಲ?

ಮೈಸೂರು ಮಿತ್ರ

ಗುರುವಾರ, 9 ಅಕ್ಟೋಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ......

ಸಮಯ ಓಡುತ್ತಿದೆ, ನೀನು ನಡೆಯುತ್ತಿದ್ದೀಯಾ, ಅನ್ನೋದನ್ನ ಅರ್ಥ ಮಾಡಿಕೊಂಡ ಕ್ಷಣ ನಿನ್ನಲ್ಲಿ ಸಾಧಿಸುವ ಛಲ ಬರುತ್ತೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪೀತಾಂಬರ ಉಟ್ಟರೂ ಕೊತ್ತಂಬರಿ ಮಾರೋದು ತಪ್ಪಲಿಲ್ಲ.

ನಿಮ್ಮ ಪತ್ರಗಳು

■ ಔಷಧದ ವಿಚಾರದಲ್ಲಿ ಸರಕಾರ ಕಠಿಣ ಮುನ್ನೆಚ್ಚರಿಕೆ ಕ್ರಮ ವಹಿಸಲಿ

ಮಾನ್ಯರೆ,

ಕಳಪೆ ಗುಣಮಟ್ಟದ ಕೆಮ್ಮಿನ ಸಿರಪ್ ಸೇವನೆಯಿಂದ ಮಧ್ಯಪ್ರದೇಶ, ರಾಜಸ್ಥಾನದಲ್ಲಿ ಹತ್ತಾರು ಮಕ್ಕಳು ಪ್ರಾಣ ಕಳೆದುಕೊಂಡಿರುವುದು ಒಂದು ದುರಂತವೇ ಸರಿ. ಈ ಘಟನೆಯಿಂದಾಗಿ ದೇಶದ ಆರೋಗ್ಯ ವ್ಯವಸ್ಥೆಯ ವಿಶ್ವಾಸರ್ಹತೆಗೆ ದೊಡ್ಡ ಪೆಟ್ಟು ನೀಡಿದೆ. ಜನಸಾಮಾನ್ಯರಲ್ಲಿ ಒಂದು ರೀತಿಯ ಗೊಂದಲ ಮತ್ತು ಭಯದ ವಾತಾವರಣ ನಿರ್ಮಾಣವಾಗಿದೆ. ಮತ್ತೊಂದು ದುರಂತ ಅಂದರೆ ರಾಜಸ್ಥಾನ ಪ್ರಕರಣದಲ್ಲಿ ನೀಡಲಾದ ಸಿರಪ್ ಸರಕಾರದ ಉಚಿತ ಔಷದ ಯೋಜನೆಯದ್ದು ಎನ್ನುವುದು ದುರ್ದೈವವೆ ಸರಿ. ಇದು ಔಷಧ ತಯಾರಕ ಕಂಪನಿ ನಿರ್ಲಕ್ಷ್ಯ ಮಾತ್ರವಲ್ಲದೆ ಆಡಳಿತ ಯಂತ್ರದ ವೈಫಲ್ಯದ ಕೈಗನ್ನಡಿಯಾಗಿದೆ ಅಂದರೆ ತಪ್ಪಾಗಲಾರದು. ಅಲ್ಲದೆ ಕೆಲವೊಂದು ಕಳಪೆ ಗುಣಮಟ್ಟದ ಔಷಧಗಳಿಗೆ ಸರಕಾರ ನಿಷೇಧ ಹೇರಿದರೂ ವೈದ್ಯರು ಅದನ್ನು ಶಿಫಾರಸು ಮಾಡುತ್ತಾರೆ. ಔಷಧಿ ಅಂಗಡಿಗಳಲ್ಲಿ ರಾಜಾರೋಷವಾಗಿ ಮಾರಲಾಗುತ್ತದೆ. ಆಡಳಿತ ವ್ಯವಸ್ಥೆ ಮತ್ತು ವೈದ್ಯರ ಕರ್ತವ್ಯ ಲೋಪ, ನಿರ್ಲಕ್ಷ್ಯ ಭ್ರಷ್ಟಾಚಾರ ಇದಕ್ಕೆಲ್ಲ ಕಾರಣ. ಔಷಧ ಸರಬರಾಜು ಮಾಡುವಾಗ ಅನುಸರಿಸಬೇಕಾದ ಗುಣಮಟ್ಟ ಪರಿಶೀಲನೆ (Quality Control) ಪ್ರಕ್ರಿಯಲ್ಲಿ ದೊಡ್ಡ ದೊಡ್ಡ ಭ್ರಷ್ಟ ಕೈವಾಡಗಳು ನಡೆದಿರುವುದು ಈ ಘಟನೆಗಳು ನಡೆಯಲು ನೇರ ನಿದರ್ಶನವಾಗಿದೆ. ಕಳಪೆ ಗುಣಮಟ್ಟದ ಔಷಧಗಳನ್ನು ವಿತರಿಸಿದ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಔಷಧದ ಗುಣಮಟ್ಟ ನಿಯಂತ್ರಣ ಇಲಾಖೆಯಲ್ಲಿನ ಅಧಿಕಾರಿಗಳು ಮತ್ತು ಖರೀದಿ ಪ್ರಕ್ರಿಯೆಯಲ್ಲಿ ಭಾಗಿಯಾದವರು ಎಲ್ಲರನ್ನು ಕಾನೂನಿನ ವ್ಯಾಪ್ತಿಗೆ ತರಬೇಕು. ಮಕ್ಕಳು ಸೇರಿದಂತೆ ರೋಗಿಗಳಿಗೆ ನೀಡುವ ಯಾವುದೇ ಔಷಧದ ಗುಣಮಟ್ಟದ ವಿಚಾರದಲ್ಲಿ ರಾಜಿ ಮಾಡಿಕೊಳ್ಳದಂತೆ ಸರಕಾರ ಎಚ್ಚೆತ್ತುಕೊಂಡು ಕಠಿಣವಾಗಿ ರವಾನಿಸಬೇಕು. ನಮ್ಮ ರಾಜ್ಯದಲ್ಲಿಯೂ ಕೂಡ ಇಂತಹ ಮುನ್ನಚ್ಚರಿಕೆಯ ಕಠಿಣ ಕ್ರಮ ಕೈಗೊಳ್ಳುವ ಮೂಲಕ ಮಕ್ಕಳು ಮತ್ತು ರೋಗಿಗಳ ಆರೋಗ್ಯ ಕಾಪಾಡುವ ಹಿತದೃಷ್ಟಿಯಿಂದ ಸ್ವಾಸ್ಥ್ಯ ಕಾಪಾಡಬೇಕು.

–ಪ್ರಕಾಶ್ ಸಿ ಅಲಗೂಡು, ತಿ ನರಸೀಪುರ



■ ಕಸ ತೆರವುಗೊಳಿಸಿ


ಮಾನ್ಯರೆ,

ಮೈಸೂರಿನ ಚಾಮರಾಜಪುರ ರೈಲ್ವೆ ನಿಲ್ದಾಣದಿಂದ ರೈಲ್ವೆ ಹಳಿಯ ಸಮೀಪ ಸರಸ್ವತಿಪುರಂ ಅಗ್ನಿಶಾಮಕ ಠಾಣೆಗೆ ಸಾಗುವ ಹಾದಿಯ ಎರಡು ಬದಿಯಲ್ಲಿ ಕಸದ ರಾಶಿಯೇ ಇದೆ. ಇದರಿಂದ ಸಾಂಕ್ರಾಮಿಕ ರೋಗಗಳು ಹರಡಿ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಸಂಬಂಧಪಟ್ಟ ಮಹಾನಗರಪಾಲಿಕೆಯ ಅಧಿಕಾರಿಗಳು ಕಸದ ರಾಶಿಯನ್ನು ತೆರವುಗೊಳಿಸಬೇಕಾಗಿ ಈ ಮೂಲಕ ಮನವಿ.

–ಸ್ಥಳೀಯ ನಿವಾಸಿಗಳು, ಮೈಸೂರು

■ ಮಾದೇಗೌಡರಿಗೆ ಅಭಿನಂದನೆಗಳು

ಮಾನ್ಯರೆ,



'ಮನೆ ಮನೆ ಮಾದೇಗೌಡ' ಎಂದೇ ಖ್ಯಾತರಾಗಿರುವ ವಿಧಾನ ಪರಿಷತ್ ಮಾಜಿ ಸದಸ್ಯ, ಹಿರಿಯ ಗಾಂಧಿವಾದಿ, ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯ (ಸಿಐಟಿಬಿ) ಮಾಜಿ ಅಧ್ಯಕ್ಷ ಡಿ.ಮಾದೇಗೌಡರಿಗೆ ಬೆಂಗಳೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪ್ರದಾನ ಮಾಡಿರುವುದು ಸಂತೋಷಕರ ಸಂಗತಿ.

ಶ್ರೀಯುತರು ಸಮಾಜಕ್ಕೆ ಸಲ್ಲಿಸಿರುವ ಸೇವೆಗಳನ್ನು ಪರಿಗಣಿಸಿ, ಅವರಿಗೆ ಗೌರವ ಡಾಕ್ಟರೇಟ್ ನೀಡಲಾಗುತ್ತಿದೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ. ಮಾದೇಗೌಡರ ಕರ್ಮಭೂಮಿ ಅಥವಾ ಕಾರ್ಯಕ್ಷೇತ್ರ ಮೈಸೂರು ಆಗಿರುವುದರಿಂದ ಅವರಿಗೆ ಮೈಸೂರು ವಿಶ್ವವಿದ್ಯಾನಿಲಯವೇ ಗೌರವ ಡಾಕ್ಟರೇಟ್ ನೀಡಿದ್ದರೆ ಹೆಚ್ಚು ಔಚಿತ್ಯಪೂರ್ಣವಾಗಿರುತ್ತಿತ್ತು. ಎಷ್ಟಾದರೂ 'ಹಿತ್ತಲಗಿಡ ಮದ್ದಲ್ಲ' ಎನ್ನುವ ಗಾದೆಯೇ ಇದೆಯಲ್ಲ. ಇರಲಿ ಬಿಡಿ, ಕಡೆಯ ಪಕ್ಷ ದೂರದ ಬೆಂಗಳೂರು ವಿವಿಯಾದರೂ ನಮ್ಮ ಮಾದೇಗೌಡರನ್ನು ಗುರುತಿಸಿದೆಯಲ್ಲಾ, ಅಷ್ಟೇ ಸಾಕು.

ಡಿ.ಮಾದೇಗೌಡರು 80ರ ದಶಕದ ಮಧ್ಯಭಾಗದಲ್ಲಿ ಮೈಸೂರಿನ ಸಿಐಟಿಬಿಯ ಅಧ್ಯಕ್ಷರಾಗಿದ್ದ ಸಮಯದಲ್ಲಿ ಅತ್ಯಂತ ಜನಪ್ರಿಯ ಯೋಜನೆಯಾಗಿದ್ದ 'ಆಶಾ ಮಂದಿರ' ಯೋಜನೆಯಡಿಯಲ್ಲಿ ಸೂರಿಲ್ಲದವರಿಗೆ ಸೂರನ್ನು ನೀಡುವ ಮೂಲಕ ವಸತಿ ಕ್ಷೇತ್ರದಲ್ಲಿ ಒಂದು ದೊಡ್ಡ ಕ್ರಾಂತಿಯನ್ನೇ ಮಾಡಿದರು. ಸದರಿ ಯೋಜನೆಯ ಮೂಲಕ ಜನರಿಗೆ ಕಡಿಮೆ ಬೆಲೆಯಲ್ಲಿ ಮನೆಗಳನ್ನು ನೀಡುವ ಮೂಲಕ ಸಹಸ್ರಾರು ಮಂದಿಗೆ ಆಶ್ರಯದಾತರಾದರು. ಇಂದಿಗೂ ಸಹ ಮಾದೇಗೌಡರನ್ನು ಮನೆ ದೇವರಂತೆ ಪೂಜಿಸುವ ಅನೇಕ ಫಲಾನುಭವಿಗಳನ್ನು ನಾವು ಕಾಣಬಹುದು. ಅತ್ಯಂತ ಶಿಸ್ತುಬದ್ಧ, ಅಷ್ಟೇ ಪ್ರಾಮಾಣಿಕ ವ್ಯಕ್ತಿಯಾಗಿರುವ ಮಾದೇಗೌಡರು, ಸಚ್ಚಾರಿತ್ರ್ಯ ಹೊಂದಿದಂತಹ ವ್ಯಕ್ತಿ. ಇಂತಹ ವ್ಯಕ್ತಿಗೆ ಗೌರವ ಡಾಕ್ಟರೇಟ್ ದೊರಕಿರುವುದು ಮೈಸೂರಿಗರಿಗೆ ಹೆಮ್ಮೆಯ ವಿಚಾರವೇ ಸರಿ. ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

■ ಕೋಟೆಹುಂಡಿಗೆ ಮೂಲ ಸೌಕರ್ಯ ಕಲ್ಪಿಸಿ

ಮಾನ್ಯರೆ,

ಮೈಸೂರಿನ ರಿಂಗ್ ರೋಡ್‌ಗೆ ಹತ್ತಿರವಿರುವ ಕೋಟೆಹುಂಡಿ ಗ್ರಾಮದಲ್ಲಿ ಸೂಕ್ತವಾದ ಚರಂಡಿ ಹಾಗೂ ರಸ್ತೆಯ ವ್ಯವಸ್ಥೆಯೇ ಇಲ್ಲವಾಗಿದೆ. ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧಿಕಾರಿಗಳು ಮೂಲ ಸೌಕರ್ಯಗಳನ್ನು ಕಲ್ಪಿಸದೆ ಕಣ್ಣು ಮುಚ್ಚಿ ಕುಳಿತಿರುವುದು ಬೇಸರದ ಸಂಗತಿ. ಕೋಟೆಹುಂಡಿ ಪಕ್ಕದಲ್ಲಿ ಖಾಸಗಿ ಬಡಾವಣೆಗಳು ಯಥೇಚ್ಛವಾಗಿ ನಿರ್ಮಾಣವಾಗಿವೆ. ಅದರಿಂದ ಸಂಗ್ರಹವಾದ ತೆರಿಗೆ ಹಣವನ್ನು ಬಳಸಿ ಮೂಲ ಸೌಕರ್ಯಗಳನ್ನು ಕಲ್ಪಿಸದೇ ಇರುವುದು ಬೇಜವಾಬ್ದಾರಿತನವಾಗಿದೆ. ಸಂಬಂಧಪಟ್ಟ ಅಧಿಕಾರಿ ವರ್ಗದವರು ಇನ್ನಾದರೂ ಗ್ರಾಮದ ಜನರಿಗೆ ಮೂಲಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕಾಗಿ ಕಳಕಳಿಯ ಮನವಿ.

–ಮಂಜೇಶ್ ದೇವಗಳ್ಳಿ, ಮೈಸೂರು



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಮಹಾರಾಜ ಕಾಲೇಜು
ಮೈಸೂರು.

ಮಂಥನ

ಹಳೆ ಬೇರು ಹೊಸ ಚಿಗುರು ಕೂಡಿರಲೇಬೇಕು

ಒಂದು ಕತೆ ನೆನಪಾಯಿತು. ಒಂದು ರಾಜ್ಯದಲ್ಲಿ ಒಬ್ಬ ಯುವಕ ರಾಜನಾದ. ಬಿಸಿರಕ್ತದ ಅವನು, ತನ್ನ ರಾಜ್ಯದಲ್ಲಿ ಮುದುಕ್ರ್ಯಾರೂ ಇರಬಾರದೆಂದು ಫರ್ಮಾನು ಹೊರಡಿಸಿ, ತನ್ನ ತಂದೆಯನ್ನೂ ಕಾಡಿಗೆ ಬಿಟ್ಟು ಬಂದ. ತನ್ನಂತೆಯೇ ಎಲ್ಲರೂ ಮಾಡಬೇಕೆಂದು ತಾಕೀತು ಮಾಡಿದ. ಎಲ್ಲರೂ ಹೆದರಿ ಅವನ ಆಜ್ಞೆಯಂತೆಯೇ ಮಾಡಿದರು. ಕೆಲವರು ಖುಷಿಯಿಂದ ಮಾಡಿದರೆ ಮತ್ತೊಂದಷ್ಟು ಜನ ಒಲ್ಲದ ಮನಸ್ಸಿನಿಂದ ತಮ್ಮ ತಮ್ಮ ಮನೆಯಲ್ಲಿದ್ದ ಹಿರಿಯರನ್ನು ಕಾಡಿಗೆ ಕರೆದೊಯ್ದುಬಿಟ್ಟರು.

ಆ ಯುವರಾಜನಿಗೆ ಹಳೆಯ ಹಿರಿಯ ಮಂತ್ರಿಯ ಮಗನೇ ಮಂತ್ರಿಯಾಗಿ ನೇಮಕವಾಗಿದ್ದ. ಯುವಮಂತ್ರಿಗೆ ತನ್ನ ತಂದೆಯೆಂದರೆ ಅತೀವ ಗೌರವ, ಪ್ರೀತಿ ಮತ್ತು ಅಕ್ಕರೆ. ತನ್ನ ತಂದೆಯನ್ನು ಕಾಡಿಗೆ ಕಳಿಸಲು ಮನಸಾಗದೆ ಮನೆಯಲ್ಲಿಯೇ ರಹಸ್ಯವಾಗಿ ನೆಲಮಾಳಿಗೆಯೊಂದನ್ನು ಸಿದ್ಧಪಡಿಸಿ ಅಲ್ಲಿ ತನ್ನ ತಂದೆಯನ್ನಿರಿಸಿ ಪೋಷಿಸತೊಡಗಿದ್ದ. ಒಮ್ಮೆ ರಾಜ್ಯಕ್ಕೆ ಬಹು ಸಂದಿಗ್ಧ ಪರಿಸ್ಥಿತಿ ಬಂದೊದಗಿತು. ಎಲ್ಲ ಯುವಕರೂ ಎಷ್ಟು ಪ್ರಯತ್ನಿಸಿದರೂ ಆ ಸಮಸ್ಯೆಯನ್ನು ಪರಿಹರಿಸಲಾಗಲಿಲ್ಲ. ಯುವ ಮಂತ್ರಿಯೂ ಬಹಳ ಖೇದ ಗೊಂಡಿದ್ದ. ತನ್ನ ಮಗನ ಅನ್ಯಮನಸ್ಕತೆಯನ್ನು ಗಮನಿಸಿದ ಹಿರಿಯ ಮಂತ್ರಿ ಮಗನನ್ನು ಕೇಳಿ ಸಮಸ್ಯೆಯನ್ನು ತಿಳಿದುಕೊಂಡು ಅದಕ್ಕೆ ಪರಿಹಾರವನ್ನು ಸೂಚಿಸಿದ.

ಮಾರನೆಯ ದಿನ ಪರಿಹಾರದೊಂದಿಗೆ ರಾಜನನ್ನು ಭೇಟಿಯಾದ ಯುವಮಂತ್ರಿ ರಾಜ್ಯವನ್ನು ಬಹುದೊಡ್ಡ ಸಮಸ್ಯೆಯಿಂದ ಪಾರು ಮಾಡಿದ. ಸಂತಸಗೊಂಡ ರಾಜ ಯುವಮಂತ್ರಿಗೆ ಇದು ಹೇಗೆ ಸಾಧ್ಯವಾಯಿತು ನಮಗೇಕೆ ಈ ಪರಿಹಾರ ಇಷ್ಟು ದಿನ ಹೊಳೆಯಲಿಲ್ಲ ಎಂದು ಕೇಳಿದಾಗ, ಮಂತ್ರಿ ಹೇಳಿದ, ಮಹಾರಾಜ, ಬಿಸಿರಕ್ತ ಮಾತ್ರದಿಂದ ನಾವು ಬದಲಾವಣೆ ತರಲಾಗುವುದಿಲ್ಲ. ಅನುಭವವೆಂಬ ಅಮೂಲ್ಯ ನಿಧಿ ಯುವಕರ ಹುಮ್ಮಸ್ಸಿನೊಂದಿಗೆ ಮಿಳಿತವಾದರೆ ಮಾತ್ರ ಪ್ರಗತಿ ಸಾಧ್ಯ ಎಂದು ಹೇಳಿ ತನ್ನ ತಂದೆಯನ್ನು ಕಾಡಿಗೆ ಕಳಿಸದಿರುವ ಬಗ್ಗೆ ಹೇಳಿದ. ಆಗ ಯುವರಾಜನಿಗೆ ತನ್ನ ತಪ್ಪಿನ ಅರಿವಾಯಿತು. ತನ್ನ ಆದೇಶವನ್ನು ಹಿಂತೆಗೆದುಕೊಂಡ. ಕಾಡುಪ್ರಾಣಿಗಳಿಗೆ ಆಹಾರವಾಗದೇ ಅದೃಷ್ಟವಶಾತ್ ಬದುಕುಳಿದಿದ್ದ ಎಲ್ಲ ಹಿರಿಯರನ್ನು ಮರಳಿ ಮನೆಗೆ ಕರೆತರುವ ಕೆಲಸವನ್ನು ಉತ್ಸಾಹದಿಂದ ಮಾಡಿದ. ಹಳೆಬೇರು ಹೊಸ ಚಿಗುರು ಕೂಡಿರಲು ಮಾತ್ರ ನಿಜ ಸೊಬಗು ಎಂದು ಅರ್ಥ ಮಾಡಿಕೊಂಡ.

ಮತ್ತೆ ಇನ್ನೊಂದು ಘಟನೆ. ಜಪಾನಿನಲ್ಲಿ ಕಾರ್ಯನಿಮಿತ್ತ ಸ್ವಲ್ಪ ವರ್ಷಗಳ ಕಾಲ ವಾಸಿಸಿ ಬಂದ ಸ್ನೇಹಿತರೊಬ್ಬರು ಕಣ್ಣಾರೆ ಕಂಡದ್ದು. ಜಪಾನಿನಲ್ಲಿ ಎಲ್ಲರಿಗೂ ಗೊತ್ತಿರುವ ಹಾಗೆ ವೃದ್ಧರ ಸಂಖ್ಯೆ ಹೆಚ್ಚು, ಶತಾಯುಷಿಗಳೂ ಸಾಕಷ್ಟಿದ್ದಾರೆ. ಅಲ್ಲಿ ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ಹಿರಿಯ ವೃದ್ಧ ಜೀವಗಳು ಕಾಣಿಸಿದರೆ, ಅವರಿಗೇ ಮೊದಲ ಆದ್ಯತೆ ಕೊಡುತ್ತಾರಂತೆ. ಬಸ್‌ಗಳಲ್ಲಿ ಸೀಟು ಬಿಟ್ಟುಕೊಡುವುದು, ಎಲ್ಲಿಯೂ ಸರತಿ ಸಾಲಿನಲ್ಲಿ ಕಾಯುವ ಕಷ್ಟ ಕೊಡದಿರುವುದು, ರಸ್ತೆ ದಾಟಲು ಮತ್ತು ಇನ್ನಿತರ ಕೆಲಸಗಳಿಗೆ ತಾವೇ ಮುಂದಾಗಿ, ಅವರು ಕೇಳದಿದ್ದರೂ ಸಹಾಯ ಮಾಡುತ್ತಾರಂತೆ. ನರ್ಸರಿಗೆ ಹೋಗುವ ಚಿಕ್ಕ ಮಕ್ಕಳಿಂದ ಹಿಡಿದು ದೊಡ್ಡವರೂ ಈ ಸಹೃದಯತೆಯನ್ನು ಸಹಜವಾಗಿ ಮೈಗೂಡಿಸಿಕೊಂಡಿದ್ದಾರಂತೆ. ನನ್ನ ಸ್ನೇಹಿತರು ಹೀಗೇಕೆ ಎಂದು ವಿಚಾರಿಸಿದಾಗ ಅವರಿಗೆ ದೊರೆತ ಉತ್ತರ, ಅವರು ಯೌವ್ವನದಲ್ಲಿ ದೇಶಕ್ಕಾಗಿ ದುಡಿದಿದ್ದಾರೆ, ಹಲವಾರು ತ್ಯಾಗಗಳನ್ನು ಮಾಡಿದ್ದಾರೆ. ಅದಕ್ಕಾಗಿ ಅವರ ಜೀವನ ಸಂಧ್ಯೆಯಲ್ಲಿ ಈ ಗೌರವ ಎಂದು ತಿಳಿಸಿದರಂತೆ.


ಹೌದಲ್ಲವೇ, ಒಂದು ಸಮಾಜದ ಸಮತೋಲನ ಕಾಪಾಡಲು ಯುವಶಕ್ತಿ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಹಿರಿಯ ಜೀವಗಳ ಅನುಭವ ಬಾಹುಳ್ಯ. ಜೀವನದ ಎಲ್ಲ ಮಜಲುಗಳನ್ನು ದಾಟಿ ಒಂದು ಹಂತದಲ್ಲಿ ನಿಂತಿರುವ ಹಿರಿಯರ ಜೀವನಾನುಭವವನ್ನು ಯಾವ ವಿಶ್ವವಿದ್ಯಾಲಯವೂ ಕಲಿಸಲು ಸಾಧ್ಯವಿಲ್ಲ. ಆದರೆ ಇಂದು ಏನಾಗುತ್ತಿದೆ? ಒಂದಷ್ಟು ಅದೃಷ್ಟವಂತರನ್ನು ಹೊರತುಪಡಿಸಿದರೆ ಸಮಾಜದಲ್ಲಿ ಉಪೇಕ್ಷೆಗೆ ಒಳಗಾಗಿರುವವರೆಂದರೆ ಈ ಹಿರಿಯ ಜೀವಗಳೇ.

ಹೊಸ ಜೀವನದ ಕನಸು ಕಾಣುತ್ತಿರುವ ಹೊಸ ಪೀಳಿಗೆಗೆ ವೃದ್ಧರು ಭಾರವೆನಿಸಿದ್ದಾರೆ. ಅವರ ಇರುವಿಕೆಯೇ ಅಸಹ್ಯವಾಗಿದೆ. ದಿನಬೆಳಗಾದರೆ ವೃದ್ಧರನ್ನು ಕಾಡಿಸುತ್ತಿರುವ, ಪೀಡಿಸುತ್ತಿರುವ, ಅವಮಾನಿಸುತ್ತಿರುವ ಸುದ್ದಿಗಳು, ವಿಡಿಯೋಗಳು ವೈರಲ್ ಆಗುತ್ತಿವೆ. ಜೀವನ ಪೂರ್ತಿ ಮಕ್ಕಳ ಅಭ್ಯುದಯಕ್ಕಾಗಿ ದುಡಿದ ಹಿರಿಯರಿಗೆ ಅವರ ವಿಶ್ರಾಂತಿಯ ದಿನಗಳಲ್ಲಿ ಮಾನಸಿಕ ವೇದನೆಯಷ್ಟೇ ಸಿಗುತ್ತಿರುವುದು.

ಅಚ್ಚರಿ ಮೂಡಿಸುವ ಸಂಗತಿಯೆಂದರೆ, ಭಾರತದಲ್ಲಿ ವೃದ್ಧರ ಸ್ಥಿತಿ ಶೋಚನೀಯವಾಗಿರುವುದು. ಹೌದು ಸೌಜನ್ಯ ಸಂಸ್ಕೃತಿಗಳ ನೆಲೆಬೀಡು ಎನಿಸಿಕೊಂಡಿರುವ ಈ ನೆಲದಲ್ಲಿಯೇ ವೃದ್ಧರ ಸ್ಥಿತಿ ಚಿಂತಾಜನಕವಾಗಿದೆ. ಹಿಂದಿನ ಕಾಲದಲ್ಲಿ ಹಿರಿಯರು ತಮ್ಮ ಕರ್ತವ್ಯಗಳೆಲ್ಲಾ ಮುಗಿದ ಮೇಲೆ ವಾನಪ್ರಸ್ಥಕ್ಕೆಂದು ತೆರಳುತ್ತಿದ್ದರು. ಅದು ಸ್ವ ಇಚ್ಛೆಯಿಂದ. ಜಪತಪಗಳಲ್ಲಿ ಕೊನೆಗಾಲವನ್ನು ಕಳೆಯಬೇಕೆಂಬ ಉದ್ದೇಶದಿಂದ. ಆದರೆ ಕಾಲ ಬದಲಾದಂತೆ ವಾನಪ್ರಸ್ಥಕ್ಕೆ ಹೋಗುವ ಅಭ್ಯಾಸ ಇಲ್ಲವಾಯಿತು. ಆದರೆ ಈಗ ಹಿರಿಯರು ವಾನಪ್ರಸ್ಥಕ್ಕೆ ಹೋಗದಿದ್ದರೂ, ವೃದ್ಧಾಶ್ರಮಗಳನ್ನು ಬಲವಂತವಾಗಿ ಸೇರುವ ಪರಿಸ್ಥಿತಿಯೊದಗಿದೆ.

ಸಮಾಜ ಬದಲಾಗುತ್ತದೆ ಎಂಬುದು ನಿಜವೇ. ಓಡುತ್ತಿರುವ ಜಗತ್ತಿನೊಂದಿಗೆ ನಾವು ದಾಪುಗಾಲು ಹಾಕಲೇ ಬೇಕು. ಆದರೆ ಹಾಗೆಂದ ಮಾತ್ರಕ್ಕೆ ಮಾನವೀಯತೆಯನ್ನು ಕಳೆದುಕೊಳ್ಳಬೇಕು ಎಂದೇನಿಲ್ಲವಲ್ಲ.

ಏಕೆ ಹೀಗೆ ಎಂದು ಯೋಚಿಸಿದರೆ ಮತ್ತದೇ ಆಧುನಿಕತೆ, ಅಭಿವೃದ್ಧಿ, ಹೆಚ್ಚುತ್ತಿರುವ ಹಣದ ಅವಶ್ಯಕತೆ, ಅವಕಾಶಗಳ ಬಾಹುಳ್ಯ, ವಿಘಟಿತ ಕೂಡು ಕುಟುಂಬಗಳು. ಎಂದೆಲ್ಲಾ ಪಟ್ಟಿ ಮಾಡುತ್ತಾ ಹೋಗಬಹುದು.



ಇಂದು ಕೂಡು ಕುಟುಂಬಗಳಿಲ್ಲ, ಗಂಡ ಹೆಂಡತಿ ಇಬ್ಬರೂ ದುಡಿಯುತ್ತಾರೆ, ಖರ್ಚು ಹೆಚ್ಚಿದೆ ಇವುಗಳಿಗಿಂತಾ ಹೆಚ್ಚಾಗಿ, ಮಾನಸಿಕತೆಯಲ್ಲಿ ಆದ ಬದಲಾವಣೆಯೇ ಮೂಲ ಕಾರಣ ಎಂದು ಹೇಳಬೇಕು.

ಹಿಂದೆಲ್ಲಾ ಮನೆಯಲ್ಲಿ ಹಿರಿಯರ ಯಜಮಾನಿಕೆ ನಡೆಯುತ್ತಿತ್ತು. ಮೊಮ್ಮಕ್ಕಳಾದರೂ ಮನೆಯಲ್ಲಿ ಅವರದೇ ಅಧಿಕಾರವಿರುತ್ತಿತ್ತು. ಮತ್ತು ಅದನ್ನು ಎಲ್ಲರೂ ಸಂತೋಷದಿಂದ ಒಪ್ಪಿಕೊಂಡಿದ್ದರು ಸಹ. ಕಾಲ ಬದಲಾದಂತೆ, ಮಗ ಅಪ್ಪನ ಕೈಕೆಳಗಿರಲು ಬಯಸಲಿಲ್ಲ, ದುಡಿಯುವ ಸೊಸೆ ಅತ್ತೆಯ ಛತ್ರಛಾಯೆಯಲ್ಲಿ ಇರಲು ಇಷ್ಟಪಡಲಿಲ್ಲ. ಆದರೆ ಅಂದು ಮನೆ ತುಂಬಾ ಮಕ್ಕಳಿರುತ್ತಿದ್ದರು. ಹೇಗೋ ಒಬ್ಬರಲ್ಲ ಒಬ್ಬರು ತಂದೆ–ತಾಯಿ ಅಜ್ಜ–ಅಜ್ಜಿಯರ ಜವಾಬ್ದಾರಿಗಳನ್ನು ತೆಗೆದುಕೊಂಡು ಅವರ ಕೊನೆಗಾಲವನ್ನು ಸಹ್ಯವಾಗಿಸುತ್ತಿದ್ದರು.

> “ ಬಹುತೇಕ ವೃದ್ಧರ ಜೀವನ ದಿನದಿಂದ ದಿನಕ್ಕೆ ಕಷ್ಟಕರವಾಗುತ್ತಿದೆ ಎಂಬುದಷ್ಟೇ ನಿಜ. ಹಾಲು ತರಬೇಕೆಂದರೂ ಅವರೇ ಹೋಗಬೇಕು, ಆಸ್ಪತ್ರೆಗೆ ತೋರಿಸಿಕೊಳ್ಳಬೇಕು ಎಂದರೂ ಅವರೇ ಹೋಗಬೇಕು. ಮಕ್ಕಳು ಇದ್ದಾರೆ ನೋಡಿಕೊಳ್ಳುತ್ತಾರೆ ಎಂದು ನಿಶ್ಚಿಂತೆಯಿಂದ ಕಾಲುಚಾಚುವ ಸುಖವೇ ಇಲ್ಲದಾಗಿದೆ. ಅದರಲ್ಲೂ ಸಂಗಾತಿ ಕಳೆದುಕೊಂಡವರ ಪಾಡು ಅಸಹನೀಯ.

ಆದರೆ ಇಂದು!

ವೃದ್ಧರ ಸಮಸ್ಯೆಗಳು ಸಾಕಷ್ಟಿವೆ....;

● ಮಕ್ಕಳು ಬೇರೆಯಾಗಿ ಇರುತ್ತಾರೆ. ಸಮಯ ಸಿಕ್ಕಾಗ ಬಂದು ಹೋಗುತ್ತಾರೆ. ಆದರೆ ಜವಾಬ್ದಾರಿಗಳನ್ನು ಮರೆಯದೆ ನಿಭಾಯಿಸಿ ಚೆನ್ನಾಗಿ ನೋಡಿಕೊಳ್ಳುತ್ತಾರೆ.

● ಚೆನ್ನಾಗಿ ಓದಿ ದೂರದ ದೇಶಗಳಲ್ಲಿ ನೆಲೆಯಾಗಿ ಹೇರಳವಾಗಿ ಹಣ ಕಳಿಸುತ್ತಾರೆ. ಆದರೆ ಎಲ್ಲವೂ ಇದ್ದು ಏನೂ ಇರದಂತಹ ಅನಾಥ ಭಾವ ಹಿರಿಯರನ್ನು ಕಾಡುತ್ತದೆ.

● ಒಟ್ಟಾಗಿ ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರ ಜೊತೆ ಸುಖವಾಗಿ ಇರುವವರ ಸಂಖ್ಯೆಗಿಂತ, ಅವಜ್ಞೆಗೊಳಗಾಗಿ, ದಂಡ ಪಿಂಡಗಳೆಂದು ಅನ್ನಿಸಿಕೊಂಡು ದುಃಖ–ಅವಮಾನಗಳಲ್ಲಿ ಬೇಯುತ್ತಿರುವವರು. ಮನೆಯಲ್ಲಿ ಕೆಲಸ ಮಾಡಿಕೊಂಡು ಎಲ್ಲರ ಬೇಕು ಬೇಡಗಳನ್ನು ನೋಡಿಕೊಂಡು ಮೊಮ್ಮಕ್ಕಳಿಗೆ ಆಯಾಗಳಾಗಿರುವುದು ಮಾತ್ರ ಮನೆಯ ಯಾವ ವಿಷಯಗಳಲ್ಲಿಯೂ ಅವರು ತಲೆಹಾಕುವಂತಿಲ್ಲ.

● ರಕ್ಕೆ ಬಲಿತ ಮೇಲೆ ಹಾರಿಹೋಗುವ ಕೆಲವರು, ತಮ್ಮ ಗುರಿ ಸಾಧನೆಗಾಗಿ ಅಪ್ಪ ಅಮ್ಮಂದಿರನ್ನು ಬರಿಗೈ ಮಾಡಿರುತ್ತಾರೆ. ಆದರೆ ಲವಲೇಷವೂ ಪಾಪಪ್ರಜ್ಞೆ ಇಲ್ಲದೆ ತಾವು ಸುಖವಾಗಿ ಇದ್ದು ಹಿರಿಯ ಜೀವಗಳ ಬವಣೆಗಳೆಡೆಗೆ ಜಾಣ ಕುರುಡರಾಗಿರುತ್ತಾರೆ.

● ಅಪ್ಪ–ಅಮ್ಮ ಹಣಕಾಸಿಗೆ ಮಕ್ಕಳನ್ನು ಆಶ್ರಯಿಸಿರುವುದಿಲ್ಲ. ಆದರೆ ಅವರಿಂದ ಎಲ್ಲ ರೀತಿಯ ಸಹಾಯ ಪಡೆದ ಮತ್ತು ಪಡೆಯುತ್ತಿರುವ ಮಕ್ಕಳು ಅವರ ನೋವುಗಳಿಗೂ ಕಿವಿಯಾಗುವುದಿಲ್ಲ. ಭಾವನಾತ್ಮಕವಾದ ಸಂಬಂಧವನ್ನೇ ಕಡಿದುಕೊಂಡುಬಿಡುತ್ತಾರೆ.

● ದುಷ್ಟರು ಎಂದು ಹೇಳಬಹುದಾದ ಈ ವಿಧದಲ್ಲಿ, ಹಿರಿಯರು ಮಾಡಿಟ್ಟ ಎಲ್ಲ ಆಸ್ತಿ ಪಾಸ್ತಿಗಳನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡು ಯಾವುದೋ ವೃದ್ಧಾಶ್ರಮಕ್ಕೋ ಅಥವಾ ಬೀದಿಗೋ ಬಿಡುವ ಪರಮಪಾಪಿ ಮಕ್ಕಳು.

● ಯಾವುದೋ ಒತ್ತಾಯಕ್ಕೆ ಕಟ್ಟುಬಿದ್ದು ಜೊತೆಯಲ್ಲಿಟ್ಟುಕೊಂಡು ಅವರಿಗೆ ಕೊಡಬಾರದ ಹಿಂಸೆಗಳನ್ನು ಕೊಟ್ಟು ಬೇಗ ಇಹಲೋಕ ತ್ಯಜಿಸುವಂತೆ ಮಾಡುವ ಮಕ್ಕಳು.

ಹೀಗೆ... ಹೇಳುತ್ತಾ ಹೋದರೆ ಬೇಕಾದಷ್ಟಿವೆ.

ಎತ್ತ ಸಾಗುತ್ತಿದ್ದೇವೆ! ಈ ರೀತಿ ಹಿರಿಯ ಜೀವಗಳನ್ನು ಕಡೆಗಾಣಿಸುವ ಮಕ್ಕಳು, ತಮ್ಮ ಮಕ್ಕಳಿಗಾಗಿ ತಮ್ಮ ತಂದೆತಾಯಿ ಪಟ್ಟ ಕಷ್ಟವನ್ನೇ ಪಡುತ್ತಿರುತ್ತಾರೆ, ತಮ್ಮ ಮಕ್ಕಳಿಗಾಗಿ ಇವರ ಹೃದಯ ಮಿಡಿಯುತ್ತದೆ. ಅವರನ್ನು ಕಷ್ಟದಲ್ಲಿ ಅಪ್ಪಿತಪ್ಪಿಯೂ ನೋಡಲು ಇಷ್ಟಪಡುವುದಿಲ್ಲ. ತಮ್ಮ ಮಕ್ಕಳ ಪದತಲದಲ್ಲಿ ಎಲ್ಲ ಸುಖ ಸಂತೋಷಗಳನ್ನು ತಂದು ಒಟ್ಟುತ್ತಾರೆ.

ತಮ್ಮ ತಂದೆ–ತಾಯಿಗಳೂ ಇದೇ ರೀತಿ ತಮ್ಮನ್ನು ಸಾಕಿದ್ದರು ಎಂದು ಇವರಿಗೆ ಏಕೆ ಹೊಳೆಯುವುದಿಲ್ಲ ಎಂಬುದೇ ಯಕ್ಷ ಪ್ರಶ್ನೆಯೆನಿಸುತ್ತದೆ. ಯಾವುದೋ ಕಾಲಕ್ಕೆ ಇವರಿಗೆ ಜ್ಞಾನೋದಯವಾಗುವ ಹೊತ್ತಿಗೆ ಆ ಹಿರಿಯ ಜೀವಗಳು ಇನ್ನಿಲ್ಲದಂತೆ ನೊಂದು ನವೆದು ಜೀವಬಿಟ್ಟಿರುತ್ತಾರೆ. ಕಾಲ ಮಿಂಚಿ ಹೋಗಿರುತ್ತದೆ.

ಈಗ ಹೊಸತೊಂದು ಟ್ರೆಂಡ್ ಬೆಳೆಯುತ್ತಿದೆ. ಅಪ್ಪನ ಆಸ್ತಿಯೂ ಬೇಡ, ಅವರೂ ಬೇಡ! ತಮ್ಮ ಜೀವನ ತಮ್ಮದು, ಅದರಲ್ಲಿ ಯಾರ ಹಸ್ತಕ್ಷೇಪವೂ ಬೇಡ ಎನ್ನುವ ಮನಸ್ಥಿತಿ. ಒಮ್ಮೆ ಮದುವೆಯಾದರೆ ಅಲ್ಲಿಗೆ ಮುಗಿಯಿತು. ಗಂಡ ಹೆಂಡತಿ ತಮ್ಮದೇ ಪ್ರಪಂಚವನ್ನು ಕಟ್ಟಿಕೊಂಡು ಅಲ್ಲಿ ಮೂರನೆಯವರಿಗೆ ಪ್ರವೇಶ ಇಲ್ಲದಂತೆ ಇದ್ದುಬಿಡುತ್ತಾರೆ. ತಮ್ಮ Indivudualityಗೆ, Privacyಗೆ, Spaceಗೆ, Me Time- Quality Timeಗಳಿಗೆ ಅಡೆತಡೆ ಒಡ್ಡುವ ಯಾವುದೇ ಸಂಬಂಧ ಅವರಿಗೆ ನಿಷಿದ್ಧ. ಇಲ್ಲಿ ಗಂಡ ಹೆಂಡತಿಯರೇ ಎಲ್ಲ. ಹುಡುಗಿಯರು ಗಂಡ ತನ್ನ ಆಸ್ತಿ, ತಂದೆ– ತಾಯಿಗಳಿಗೆ ಅವನ ಮೇಲೆ ಯಾವುದೇ ಹಕ್ಕಿಲ್ಲ ಎಂದು ಸಾಧಿಸುತ್ತಾರೆ. ಇನ್ನು ಗಂಡು ಮಕ್ಕಳು ಅಪ್ಪ–ಅಮ್ಮಂದಿರಿಂದ ಎಲ್ಲವನ್ನೂ ಪಡೆದುಕೊಂಡು ಸ್ವಲ್ಪ ಮೇಲೇರಿದ ತಕ್ಷಣ, ಎಲ್ಲದಕ್ಕೂ ತನ್ನ ಶ್ರಮವೇ ಕಾರಣ ಎಂದು ಬೀಗುತ್ತಾ ತಂದೆ ತಾಯಿಯರನ್ನು ಎಲ್ಲಿಯೂ ಸಲ್ಲದವರಂತೆ ಕಾಣುತ್ತಾ ಅವರಿಗೆ ಅಪಾರ ನೋವು ನೀಡುತ್ತಿದ್ದಾರೆ.

ತಪ್ಪು ಎಲ್ಲಿಯೂ ಆಗುತ್ತಿದೆ ಎಂಬ ವಿಶ್ಲೇಷಣೆ ತುಂಬಾ ಕಷ್ಟ, ಅಪ್ಪ ಅಮ್ಮನನ್ನು ನೋಡಿಕೊಳ್ಳುವ ಜವಾಬ್ದಾರಿ ಹೊರಬೇಕಾದ ಮಗ ಸ್ವಾರ್ಥಿಗುತ್ತಾನೆ ಅಥವಾ ಹೆಂಡತಿಯ ಕೈಗೊಂಬೆಯಾಗುತ್ತಾನೆ. ತನ್ನ ಅಮ್ಮ–ಅಪ್ಪನ ಕಷ್ಟಗಳಿಗೆ ಮಿಡಿಯುವ ಹನಿಗಣ್ಣಾಗುವ ಹುಡುಗಿ ಅತ್ತೆ–ಮಾವಂದಿರ ಪಾಲಿಗೆ ಕಲ್ಲೆದೆಯವಳಾಗುತ್ತಾಳೆ. ಒಂದಷ್ಟು ದುಡ್ಡು ಬಿಸಾಕಿದರೆ ಕರ್ತವ್ಯ ಮುಗಿಯಿತು ಎಂದುಕೊಳ್ಳುವ ಮಕ್ಕಳು ಒಂದೆಡೆಯಾದರೆ, ಹುಟ್ಟಿಸಿದ್ದಕ್ಕೆ ಎಲ್ಲ ಅಪ್ಪ–ಅಮ್ಮಂದಿರೂ ಮಾಡುವ ಕರ್ತವ್ಯವನ್ನೇ ಅವರೂ ಮಾಡಿದ್ದಾರೆ. ಅದರಲ್ಲಿ ವಿಶೇಷವೇನಿಲ್ಲ ಎಂದು ಭಂಡತನ ತೋರುವವರೂ ಇದ್ದಾರೆ.

ಒಟ್ಟಿನಲ್ಲಿ ಬಹುತೇಕ ವೃದ್ಧರ ಜೀವನ ದಿನದಿಂದ ದಿನಕ್ಕೆ ಕಷ್ಟಕರವಾಗುತ್ತಿದೆ ಎಂಬುದಷ್ಟೇ ನಿಜ. ಹಾಲು ತರಬೇಕೆಂದರೂ ಅವರೇ ಹೋಗಬೇಕು, ಆಸ್ಪತ್ರೆಗೆ ತೋರಿಸಿಕೊಳ್ಳಬೇಕು ಎಂದರೂ ಅವರೇ ಹೋಗಬೇಕು. ಮಕ್ಕಳು ಇದ್ದಾರೆ ನೋಡಿಕೊಳ್ಳುತ್ತಾರೆ ಎಂದು ನಿಶ್ಚಿಂತೆಯಿಂದ ಕಾಲುಚಾಚುವ ಸುಖವೇ ಇಲ್ಲದಾಗಿದೆ. ಅದರಲ್ಲೂ ಸಂಗಾತಿ ಕಳೆದುಕೊಂಡವರ ಪಾಡು ಅಸಹನೀಯ.

ಯಾರೋ ಒಬ್ಬ ದಾರ್ಶನಿಕ ಹೇಳಿದ್ದಾನೆ, ಮಕ್ಕಳು ಅವರಿಗೆ 5 ವರ್ಷವಾಗುವವರೆಗೂ ನಿಮಗೆ ಆ ಸಂತೋಷ ನೀಡುತ್ತಾರಲ್ಲ, ಅದಷ್ಟೇ ನಿಮ್ಮ ಹಕ್ಕಿನದ್ದು, ನಿಮ್ಮ ಪಾಲಿನದ್ದು. ನಂತರ ಅವರಿಂದ ಏನನ್ನಾದರೂ ನಿರೀಕ್ಷಿಸುವುದು ಸ್ವಾರ್ಥ ಎಂದು. ಆದರೆ ಇದು ಎಷ್ಟು ಸರಿ! ಮಕ್ಕಳು ಅಸಹಾಯಕರಾಗಿ ಮುಗ್ಧರಾಗಿದ್ದಾಗ ಕೈ ಹಿಡಿದು ನಡೆಸಿದ ತಂದೆ ತಾಯಿಗಳನ್ನು, ಅವರ ಅಸಹಾಯಕ ಹಂತದಲ್ಲಿ ಕೈಬಿಡುವುದು ಕ್ರೌರ್ಯವಲ್ಲದೆ ಮತ್ತೇನೂ.

ತಂದೆ–ತಾಯಿಯರನ್ನು ಅಕ್ಷರಶಃ ಹೊತ್ತ ಶ್ರವಣಕುಮಾರ, ಪಿತೃವಾಕ್ಯ ಪರಿಪಾಲನೆಗಾಗಿ ವನವಾಸ ಕೈಗೊಂಡ ರಾಮನಂತಹವರು ಇದ್ದ ನಾಡಿನಲ್ಲಿ ಇಂದು ಏನಾಗುತ್ತಿದೆ.

ತಂದೆ–ತಾಯಿಗಳಿಗೆ, ಅತ್ತೆ–ಮಾವಂದಿರಿಗೆ ಹೊಡೆಯುವ, ಉಪವಾಸ ಹಾಕುವ ವಿಡಿಯೋಗಳು ದಿನಬೆಳಗಾದರೆ ಕಾಣ ಸಿಗುತ್ತವೆ. ತಂದೆ ತಾಯಿಯರ ಆಸ್ತಿಗಾಗಿ ಅವರನ್ನೇ ಕೊಲೆ ಮಾಡುವ ಮಕ್ಕಳು, ಕಾಣದ ಊರಿಗೆ ತಂದು ಬಿಟ್ಟು ಪರಾರಿಯಾಗುವ ಮಕ್ಕಳು ಛೇ.

ಈಗ ಇವೆಲ್ಲಾ ಕೌಟುಂಬಿಕ ದುಃಖಗಳು ಸಾಲದು ಎಂಬಂತೆ, ಹಿರಿಯ ನಾಗರಿಕರನ್ನೇ ಗುರಿಯಾಗಿಸಿ ನಡೆಯುತ್ತಿರುವ ಕೊಲೆ, ಸುಲಿಗೆ, ದರೋಡೆಗಳು. ನಿವೃತ್ತರ ಸ್ವರ್ಗ ಎಂದು ಕರೆಯಲ್ಪಡುತ್ತಿದ್ದ ಮೈಸೂರಿನಲ್ಲಿಯೇ ಇತ್ತೀಚೆಗೆ ಹಲವು ಘಟನೆಗಳು ನಡೆದಿವೆ. ವೃದ್ಧಾಪ್ಯ ಎಂಬುದು ಶಾಪವಾಗಿಬಿಟ್ಟಿದೆ ಎಂದು ಹಲುಬುವವರನ್ನು ನೋಡಿದರೆ ಸಂಕಟವಾಗುತ್ತದೆ.

1958ರಲ್ಲಿ 'ಸ್ಕೂಲ್ ಮಾಸ್ಟರ್' ಚಿತ್ರ ಬಂದಾಗ ಆಗಲೂ ಅದು ಸಮಕಾಲೀನ ಸಮಸ್ಯೆಯಾಗಿತ್ತು. ಅದೇ ಚಿತ್ರದ ರಿಮೇಕ್ ಈ ಬಂಧನ 2007ರಲ್ಲಿ ಬಂದಾಗ ಅದೂ Outdated ಎನಿಸಲಿಲ್ಲ! ತಂದೆತಾಯಿಯರನ್ನು ಕಾಡುವ ಮಕ್ಕಳು ಆಗಲೂ ಇದ್ದರು, ಈಗಲೂ ಇದ್ದಾರೆ, ಮುಂದೆ ಇನ್ನೂ ಹೆಚ್ಚಾಗುತ್ತಾರೆ.

ಪಾಶ್ಚಮಾತ್ಯ ದೇಶಗಳಲ್ಲಿ ಸರ್ಕಾರವೇ ಹಿರಿಯರ ಜವಾಬ್ದಾರಿ ವಹಿಸಿಕೊಳ್ಳುತ್ತದೆ. ಭಾರತದಲ್ಲಿ ಇನ್ನೂ ಆ ರೀತಿಯ ಉಪಕ್ರಮಗಳು ಇಲ್ಲದಿದ್ದರೂ ಸಾಕಷ್ಟು ಯೋಜನೆಗಳ ಮೂಲಕ ಸರ್ಕಾರ ಅನುಕೂಲ ಮಾಡಿಕೊಟ್ಟಿದೆ. ಅವರಿಗಾಗಿ ಹಲವು ಕಾರ್ಡ್‌ಗಳು, ಪಾಲಿಯೇಟಿವ್ ಕೇರ್ ಯುನಿಟ್‌ಗಳಿವೆ. ಆದರೆ ಸರ್ಕಾರದ ಸೌಲಭ್ಯ, ಮಕ್ಕಳು ನೀಡುವ ಸೌಖ್ಯ ಒಂದೇನೇ!

ಇಂದು ಸಾಕಷ್ಟು ಹಿರಿಯರು, ನಿವೃತ್ತರು ವೃದ್ಧಾಪ್ಯವನ್ನು ಜೀವನದ ಸೆಕೆಂಡ್ ಇನ್ನಿಂಗ್ಸ್ ಎಂದೇ ಭಾವಿಸಿ ತಮ್ಮ ವೃತ್ತಿನಿರತ ವ್ಯಸ್ತ ಜೀವನದಲ್ಲಿ ಮಾಡಲಾಗದಿದ್ದನ್ನೆಲ್ಲಾ ಅಂದರೆ, ಪ್ರವಾಸ, ಓದು, ಬರವಣಿಗೆ, ಚಲನಚಿತ್ರ ವೀಕ್ಷಣೆ, ಬಂಧು–ಸ್ನೇಹಿತರ ಭೇಟಿ, ಕ್ಲಬ್‌ಗಳ ಚಟುವಟಿಕೆಗಳು, ತೋಟಗಾರಿಕೆ, ಕೃಷಿ ಎಂದೆಲ್ಲಾ ಆನಂದದಿಂದ ತೊಡಗಿಕೊಂಡು ಹೊಸ ಹುರುಪಿನಿಂದ ಹೊಸ ಜೀವನ ಪ್ರಾರಂಭ ಮಾಡಿದ್ದಾರೆ.

ಆದರೆ, ದೈಹಿಕವಾಗಿ ಅಶಕ್ತರಾಗಿ, ಮಾನಸಿಕವಾಗಿ ದುರ್ಬಲರಾಗಿ ನಿಧಾನವಾಗಿ ಆತ್ಮವಿಶ್ವಾಸವನ್ನೇ ಕಳೆದುಕೊಳ್ಳುತ್ತಿರುವ ಅನೇಕ ಹಿರಿಯರಿದ್ದಾರೆ. ಅವರಿಗೆ ಸಮಾಧಾನವನ್ನುಂಟು ಮಾಡುವಂತೆ ನಡೆದುಕೊಳ್ಳುವುದು ಅವರಿಂದ ಉಪಕೃತರಾದ ಎಲ್ಲ ಕಿರಿಯರ ಕಡ್ಡಾಯ ಕರ್ತವ್ಯ. ಪ್ರೀತಿಯನ್ನು ಕೊಡಲಾಗದಿದ್ದರೂ, ಗೌರವದಿಂದ ನಡೆಸಿಕೊಂಡು ಅವರಿಗೆ ತಾವು ಬೇಡವಾದವರಲ್ಲ ಎಂಬ ಭಾವ ಬರುವಂತೆ ನಡೆಸಿಕೊಳ್ಳುವುದು ಮಾನವೀಯತೆ.

ಅ.1ಕ್ಕೆ ವಿಶ್ವ ಹಿರಿಯರ ದಿನಾಚರಣೆ ನಡೆದ ಸುದ್ದಿ ಓದಿದಾಗ ಈ ಎಲ್ಲಾ ವಿಚಾರ ಇವೆಲ್ಲಾ ತಲೆ ತುಂಬಿಕೊಂಡು ನೋವಾಯಿತು.

ಅ.17ಕ್ಕೆ ತಲಕಾಡಲ್ಲಿ 'ಕಾವೇರಿ ಆರತಿ'; ಪೂರ್ವಭಾವಿ ಸಭೆ



ತಲಕಾಡಿನಲ್ಲಿ 5ನೇ ವರ್ಷದ 'ಕಾವೇರಿ ಆರತಿ' ಕಾರ್ಯಕ್ರಮ ಕುರಿತು ಮೈಸೂರು ಜಯನಗರ ಶ್ರೀರಾಮಮಂದಿರದಲ್ಲಿ ಮುಖಂಡರ ಪೂರ್ವಭಾವಿ ಸಭೆ ನಡೆಯಿತು.

ಮೈಸೂರು, ಅ.8(ಎಸ್‌ಪಿಎನ್)– ಮೈಸೂರು ಜಿಲ್ಲೆ ತಿ.ನರಸೀಪುರ ತಾಲೂಕಿನ ತಲಕಾಡಿನಲ್ಲಿ ಶ್ರೀ ಬಾಲಕೃಷ್ಣಾನಂದ ಮಹ ಸಂಸ್ಥಾನಂ ಶುಕ–ಶಂಕರಪೀಠಂ ವತಿಯಿಂದ 5ನೇ ವರ್ಷದ 'ಕಾವೇರಿ ಆರತಿ'ಯನ್ನು ಅ.17ರಂದು ಸಂಜೆ 6.30ಕ್ಕೆ ಹಮ್ಮಿಕೊಳ್ಳಲಾಗಿದೆ.

ಕಾಶಿಯ ಪವಿತ್ರ ಗಂಗಾ ಆರತಿ ಮಾದರಿಯಲ್ಲಿ ಕರುನಾಡ ಜೀವನದಿ ಕಾವೇರಿಗೆ ಕಾವೇರಿ ಆರತಿ ಕಾರ್ಯಕ್ರಮವನ್ನು ತಲಕಾಡಿನ ಶ್ರೀ ಬಾಲಕೃಷ್ಣಾನಂದ ಮಹ ಸಂಸ್ಥಾನಂ ಶುಕ–ಶಂಕರಪೀಠಂ ನೇತೃತ್ವ ವಹಿಸಿದ್ದು, ಈ ಪ್ರಯುಕ್ತ ಮೈಸೂರು ಜಯನಗರ ಶ್ರೀರಾಮಮಂದಿರದಲ್ಲಿ ವಿಪ್ರಮುಖಂಡರ ಪೂರ್ವಭಾವಿ ಸಭೆ ಜರುಗಿತು.

ಕಾವೇರಿ ಆರತಿ ಕಾರ್ಯಕ್ರಮದಲ್ಲಿ ಜಬಲ್‌ಪುರದ ಆರತಿ ತಂಡ ಭಾಗವಹಿಸಲಿದ್ದು, ಅದೇ ಸಂಜೆ 5 ಗಂಟೆಗೆ ಆರಂಭವಾಗುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಐನ್ನೂರು ಕಲಾವಿದರಿಂದ ಐಯಗಿರಿ ನಂದಿನಿ, ಶಿವ ತಾಂಡವ ಗಾಯನ ನಡೆಸಿಕೊಡಲಿದ್ದಾರೆ.

ಈ ಕಲಾವಿದರಿಗೆ ಸೂಕ್ತ ಸೌಕರ್ಯ ಒದಗಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಅಲ್ಲದೆ, ಕಾವೇರಿ ಆರತಿ ಸಮಾರಂಭದಲ್ಲಿ 7 ಸಾವಿರ ಮಂದಿ ಭಕ್ತಾದಿಗಳು ಭಾಗವಹಿಸುವ ಸಾಧ್ಯತೆಯಿದೆ. ಅಲ್ಲದೆ, ಈ ಕಾರ್ಯಕ್ರಮಕ್ಕೆ ಮೈಸೂರು, ಚಾಮರಾಜನಗರ ಭಾಗದ ಜನಪ್ರತಿನಿಧಿಗಳನ್ನು ಆಹ್ವಾನಿಸಲು ನಿರ್ಧರಿಸಲಾಯಿತು.

ಈ ವೇಳೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಿಲ್ಲಾ ಮತ್ತು ನಗರ ಘಟಕದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಸೇರಿದಂತೆ ಇತರೆ ಮುಖಂಡರು ಪಾಲ್ಗೊಂಡು ಪೂರ್ವಭಾವಿ ಸಭೆಯಲ್ಲಿ ಅಗತ್ಯ ಸಲಹೆ–ಸೂಚನೆ ನೀಡಿದರು.

ಈ ವೇಳೆ ವಿಪ್ರ ಮುಖಂಡರಾದ ನವೀನ್ ಕುಮಾರ್, ಸತ್ಯನಾರಾಯಣ್, ಸುದೀಂದ್ರ, ಸೌಭಾಗ್ಯ ಮೂರ್ತಿ, ರಶ್ಮಿ, ಮಠದ ವ್ಯವಸ್ಥಾಪಕ ಸುಹಾಸ್ ಶಾಸ್ತ್ರಿ, ದೀಪಕ್ ಕುಲಕರ್ಣಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಸ್ವಚ್ಛ ದಸರಾ ಅಭಿಯಾನಕ್ಕೆ ಹಿನ್ನಡೆ; ಮೈಗ್ರಾಪ ಬೇಸರ

ಮೈಸೂರು, ಅ.8(ಎಸ್‌ಪಿಎನ್)–ಈ ಬಾರಿ ದಸರಾ ಮಹೋತ್ಸವದಲ್ಲಿ ಪ್ರವಾಸಿಗರು, ಸಾರ್ವಜನಿಕರು ತಮ್ಮ ಜವಾಬ್ದಾರಿ ಮರೆತು 'ಸ್ವಚ್ಛ ದಸರಾ' ಅಭಿಯಾನಕ್ಕೆ ಸ್ಪಂದಿಸದಿರುವುದು ನಮ್ಮ ಉದ್ದೇಶಿತ ಅಭಿಯಾನದ ಹಿನ್ನಡೆಗೆ ಕಾರಣವಾಗಿದೆ ಎಂದು ಮೈಗ್ರಾಪ ಬೇಸರ ವ್ಯಕ್ತಪಡಿಸಿದೆ. ಈ ಸಂಬಂಧ ಅ.12ರಂದು ಸಂಜೆ 4 ಗಂಟೆಗೆ ಯಾದವಗಿರಿ ವಿವೇಕಾನಂದ ರಸ್ತೆಯ ಮೈಗ್ರಾಪ ಕಚೇರಿಯಲ್ಲಿ ಸಂವಾದ ಸಭೆ ಹಮ್ಮಿಕೊಳ್ಳಲಾಗಿದೆ.

ದಸರಾ ಆರಂಭವಾದ ದಿನದಿಂದ ಜಂಬೂ ಸವಾರಿ ಮೆರವಣಿಗೆ, ಪಂಜಿನ ಕವಾಯತ್ ಮುಗಿಯುವರೆಗೆ ಸುಮಾರು 11 ಟನ್ ಕಸ ಶೇಖರಣೆಯಾಗಿದೆ. ಇದರಲ್ಲಿ ಆಹಾರ ಮೇಳದ ಕೊಡುಗೆಯೇ ಹೆಚ್ಚು. ದಸರಾದಲ್ಲಿ ಭಾಗಿಯಾಗಿದ್ದ ಪ್ರವಾಸಿಗರು, ಸಾರ್ವಜನಿಕರು 'ಸ್ವಚ್ಛ ದಸರಾ ಅಭಿಯಾನ'ಕ್ಕೆ ಹೆಚ್ಚು ಸ್ಪಂದಿಸದಿರುವುದು ಬೇಸರದ ಸಂಗತಿ.

ಅಭಿಯಾನಕ್ಕೆ ಅ.11ರಂದು ಮೈಗ್ರಾಪ ಹಾಗೂ ಬಿಎಸ್‌ಎಸ್ ವಿದ್ಯೋದಯ ಶಾಲಾ ಆವರಣದಲ್ಲಿ ಸ್ವಚ್ಛ ದಸರಾ ಕುರಿತು ಬಿಡುಗಡೆಗೊಳಿಸಿದ್ದ 'ನನ್ನ ಊರು, ನನ್ನ ಜವಾಬ್ದಾರಿ' ಪೋಸ್ಟರ್ ಈ ಅಭಿಯಾನದಲ್ಲಿ 19 ಶಾಲಾ ವಿದ್ಯಾರ್ಥಿಗಳು ಭಾಗವಹಿಸಿ ಪೋಸ್ಟರ್ ಅಭಿಯಾನ ಆರಂಭಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಅಭಿಯಾನದಲ್ಲಿ ಪಾಲ್ಗೊಂಡಿದ್ದ 19 ಶಾಲಾ ವಿದ್ಯಾರ್ಥಿಗಳೊಂದಿಗೆ ಮೈಸೂರು ಪಾಲಿಕೆ ಎಇಇ ಮೃತ್ಯುಂಜಯ ಸಂವಾದ ನಡೆಸಲಿದ್ದಾರೆ. ಈ ವೇಳೆ ಮೈಗ್ರಾಪ ಸದಸ್ಯರು ಭಾಗವಹಿಸಲಿದ್ದಾರೆ ಎಂದು ಮೈಗ್ರಾಪ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ. ಆಸ್ತಕರು ಹೆಚ್ಚಿನ ವಿವರಗಳಿಗೆ ದೂ.ಸಂ:0821–2515150 ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ರಾಜ್ಯಾದ್ಯಂತ ಪೊಲೀಸ್ ಕಾರ್ಯವೈಖರಿ ಪರಿಶೀಲನೆ



ಅಲೋಕ್ ಕುಮಾರ್ | ಆರ್.ಹಿತೇಂದ್ರ | ಬಿ.ಕೆ. ಸಿಂಗ್ | ಪಿ.ಹರಿಶೇಖರನ್ | ಎಸ್. ಮುರುಗನ್ | ಸೌಮೇಂದು ಮುಖರ್ಜಿ | ಎಂ. ಚಂದ್ರಶೇಖರ್ | ಡಾ.ತ್ಯಾಗರಾಜನ್ | ಚಂದ್ರ ಗುಪ್ತ | ವಿಕಾಶ್ ಕುಮಾರ್ | ಸಂದೀಪ್ ಪಾಟೀಲ್ | ಸತೀಶ್ ಕುಮಾರ್ | ದೇವಜ್ಯೋತಿ ರೇ | ರವಿಕುಮಾರ್

14 ಹಿರಿಯ ಐಪಿಎಸ್ ಅಧಿಕಾರಿಗಳ ತಂಡ ರಚಿಸಿದ ಡಿಜಿಪಿ

ಬೆಂಗಳೂರು, ಅ.8– ರಾಜ್ಯದ ಎಲ್ಲಾ ಜಿಲ್ಲೆ ಮತ್ತು ನಗರ ಪೊಲೀಸ್ ಘಟಕಗಳ ಸಮಗ್ರ ಪರಿಶಿಲನೆಗೆ 14 ಹಿರಿಯ ಪೊಲೀಸ್ ಅಧಿಕಾರಿಗಳನ್ನು ನೇಮಿಸಿ ಡಿಜಿ ಮತ್ತು ಐಜಿಪಿ ಡಾ ಸಲೀಂ ಅವರು ಆದೇಶ ಹೊರಡಿಸಿದ್ದಾರೆ. ರಾಜ್ಯದ ಪೊಲೀಸ್ ವ್ಯವಸ್ಥೆಯನ್ನು ಚುರುಕುಗೊಳಿಸಿ, ಆಡಳಿತದಲ್ಲಿ ಪಾರದರ್ಶಕತೆ ಮತ್ತು ದಕ್ಷತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ಡಿಜಿ ಮತ್ತು ಐಜಿಪಿ ಅವರ ಪರವಾಗಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು (ಎಡಿಜಿಪಿ) ಮತ್ತು ಪೊಲೀಸ್ ಮಹಾನಿರೀಕ್ಷಕರ (ಐಜಿಪಿ) ಶ್ರೇಣಿಯ 14 ಹಿರಿಯ ಅಧಿಕಾರಿಗಳನ್ನು ಜಿಲ್ಲಾವಾರು ನೇಮಿಸಲಾಗಿದ್ದು, 2025 ರ ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ತಮಗೆ ವಹಿಸಲಾದ ಜಿಲ್ಲೆಗಳಿಗೆ ಭೇಟಿ ನೀಡಿ ಎರಡು ದಿನಗಳ ಕಾಲ ತಪಾಸಣೆ ನಡೆಸುವಂತೆ ನಿರ್ದೇಶನ ನೀಡಲಾಗಿದೆ.

ಅಧಿಕಾರಿಗಳು, ಪರಿಶೀಲನೆಗೆ ನೀಡಿದ ಜಿಲ್ಲೆಗಳು: **ಎಡಿಜಿಪಿ ಅಲೋಕ್ ಕುಮಾರ್:** ಬೆಳಗಾವಿ ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆ, **ಎಡಿಜಿಪಿ ಆರ್.ಹಿತೇಂದ್ರ:** ಹುಬ್ಬಳ್ಳಿ–ಧಾರವಾಡ ನಗರ, ಬೆಳಗಾವಿ ಜಿಲ್ಲೆ, **ಎಡಿಜಿಪಿ ಬಿ.ಕೆ. ಸಿಂಗ್:** ಮಂಗಳೂರು ನಗರ, ಮಂಡ್ಯ ಜಿಲ್ಲೆ, **ಎಡಿಜಿಪಿ ಪಿ.ಹರಿಶೇಖರನ್:** ಕಲಬುರಗಿ ನಗರ, ದಾವಣಗೆರೆ ಜಿಲ್ಲೆ, **ಎಡಿಜಿಪಿ ಎಸ್. ಮುರುಗನ್:** ಉಡುಪಿ, ದಕ್ಷಿಣ ಕನ್ನಡ, **ಎಡಿಜಿಪಿ ಸೌಮೇಂದು ಮುಖರ್ಜಿ:** ಕೋಲಾರ, ತುಮಕೂರು ಜಿಲ್ಲೆ, **ಎಡಿಜಿಪಿ ಎಂ. ಚಂದ್ರಶೇಖರ್:** ಮೈಸೂರು ನಗರ, ಹಾಸನ ಜಿಲ್ಲೆ, **ಐಜಿಪಿ ಡಾ.ತ್ಯಾಗರಾಜನ್ ಕೆ:** ಯಾದಗಿರಿ, ಗದಗ ಜಿಲ್ಲೆ, **ಐಜಿಪಿ ಚಂದ್ರಗುಪ್ತ:** ಹಾವೇರಿ, ಬಳ್ಳಾರಿ ಜಿಲ್ಲೆ, **ಐಜಿಪಿ ವಿಕಾಶ್ ಕುಮಾರ್ ವಿಕಾಶ್:** ಚಿಕ್ಕಮಗಳೂರು, ಧಾರವಾಡ ಜಿಲ್ಲೆ, **ಐಜಿಪಿ ಸಂದೀಪ್ ಪಾಟೀಲ್:** ಚಿಕ್ಕಬಳ್ಳಾಪುರ, ವಿಜಯನಗರ ಜಿಲ್ಲೆ, **ಐಜಿಪಿ ಎನ್. ಸತೀಶ್ ಕುಮಾರ್:** ಮೈಸೂರು ಜಿಲ್ಲೆ, ಕೊಡಗು ಜಿಲ್ಲೆ, **ಐಜಿಪಿ ದೇವಜ್ಯೋತಿ ರೇ:** ಕಲಬುರಗಿ, ಬೀದರ್ ಜಿಲ್ಲೆ, **ಐಜಿಪಿ ವೈ.ಎಸ್. ರವಿಕುಮಾರ್:** ಕೊಪ್ಪಳ, ಕೆ.ಜಿ.ಎಫ್. ಜಿಲ್ಲೆ.

ಅಧಿಕಾರಿಗಳ ತಪಾಸಣೆಯಲ್ಲಿ ಏನೆಲ್ಲಾ ಇರುತ್ತದೆ?: ಪೊಲೀಸ್ ಕಚೇರಿಗಳ ಕಾರ್ಯ ವೈಖರಿ ಪರಿಶೀಲನೆ. ಜಿಲ್ಲಾ ಪೊಲೀಸ್ ವರಿಷ್ಠಾಧಿ ಕಾರಿ ಮತ್ತು ನಗರ ಪೊಲೀಸ್ ಆಯುಕ್ತರ ಕಚೇರಿ ಗಳ ಸ್ವಚ್ಛತೆ ಮತ್ತು ನಿರ್ವಹಣೆ. ಸಿಬ್ಬಂದಿ ಕೊರತೆ, ಬಡ್ತಿ ಪ್ರಕ್ರಿಯೆ ಮತ್ತು ಕಡತಗಳ ನಿರ್ವಹಣೆ. ಪ್ರಯಾಣ ಭತ್ಯೆ, ಕಟ್ಟಡ ದುರಸ್ತಿ, ವಾಹನ ರಿಪೇರಿ ಮತ್ತು ಗೃಹರಕ್ಷಕ ದಳದ ಸಿಬ್ಬಂದಿಯ ವೇತನದ ಬಾಕಿ ಬಿಲ್‌ಗಳ ಪರಿಶೀಲನೆ. ಎಸ್‌ಸಿ/ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ಮತ್ತು ಪೋಕ್ಸೋ ಪ್ರಕರಣಗಳ ತನಿಖೆಯನ್ನು 60 ದಿನಗಳಲ್ಲಿ ಪೂರ್ಣಗೊಳಿಸುವುದು. ಪ್ರಕರಣಗಳ ಉಚಿತ ನೋಂದಣಿ ಜಿಲ್ಲಾ/ನಗರ ಸಾಮಾಜಿಕ ಮಾಧ್ಯಮ ಘಟಕದ ಕಾರ್ಯವೈಖರಿ. ನೂತನ ಅಪರಾಧ ಕಾನೂನುಗಳ ಭಾರತೀಯ ನ್ಯಾಯ ಸಂಹಿತೆ ಅನುಷ್ಠಾನ, ದ್ವೇಷ ಭಾಷಣಗಳ ವಿರುದ್ಧ ಕ್ರಮ ಹಾಗೂ ಅಕ್ರಮ ವಲಸಿಗರ ತಪಾಸಣೆ.

ಪೊಲೀಸ್ ಕಲ್ಯಾಣ ಮಂಟಪದ ನಿರ್ವಹಣೆ ಹಾಗೂ ಸಿಬ್ಬಂದಿಯ ಕುಂದುಕೊರತೆಗಳ ಪರಿಹಾರ. ಅಪರಾಧ ಪರಿಶೀಲನೆ ಮತ್ತು ಪೆರೇಡ್. ಬೆಳಗ್ಗೆ ಜಿಲ್ಲಾ ಸಶಸ್ತ್ರ ಮೀಸಲು ಪಡೆ, ಪೊಲೀಸ್ ಕ್ವಾರ್ಟರ್ಸ್ ಮತ್ತು ಸಾರಿಗೆ ವಿಭಾಗಗಳಲ್ಲಿ ಗೌರವ ವಂದನೆ ಸ್ವೀಕಾರ. ಜಿಲ್ಲಾ/ನಗರದ ಅಪರಾಧ ಪರಿಶೀಲನಾ ಸಭೆ ನಡೆಸುವುದು. ರೌಡಿಸಂ ನಿಯಂತ್ರಣಕ್ಕೆ ಗೂಂಡಾ ಕಾಯ್ದೆ ಮತ್ತು ಗಡಿಪಾರು ಆದೇಶಗಳ ಬಳಕೆ. ಮಾದಕವಸ್ತು ಮತ್ತು ಸಂಘಟಿತ ಅಪರಾಧಗಳ ವಿರುದ್ಧ ತೆಗೆದುಕೊಂಡ ಕ್ರಮ. ರಸ್ತೆ ಅಪಘಾತಗಳನ್ನು ಕಡಿಮೆ ಮಾಡಲು ರೂಪಿಸಿದ ಯೋಜನೆಗಳು. 'ಮನೆ ಮನೆಗೆ ಪೊಲೀಸ್' ಯೋಜನೆಯ ಪರಿಣಾಮಕಾರಿ ಅನುಷ್ಠಾನ. ಕಳುವಾದ ಸೊತ್ತುಗಳ ವಸೂಲಾತಿ ಪ್ರಗತಿ. ಸ್ಥಳ ಪರಿಶೀಲನಾ ಅಧಿಕಾರಿ ಮತ್ತು ಮೊಬೈಲ್ ಫೋರೆನ್ಸಿಕ್ ವಾಹನಗಳ ಬಳಕೆ. ನ್ಯಾಯಾಲಯಗಳಿಂದ, ವಿಶೇಷವಾಗಿ ಹೈಕೋರ್ಟ್‌ನಿಂದ ಬರುವ ಸಮನ್ಸ್ ಮತ್ತು ವಾರಂಟ್‌ಗಳನ್ನು ಜಾರಿಗೊಳಿಸುವುದು.

ಒಳ ಮೀಸಲಾತಿಯನ್ವಯ ಇನ್ನು 'ಪ್ರವರ್ಗ'ದಡಿ ಜಾತಿ ಪ್ರಮಾಣಪತ್ರ ಲಭ್ಯ

ಬೆಂಗಳೂರು, ಅ.8– ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಹಂಚಿಕೆ ಮಾಡಿ ಈಗಾಗಲೇ ಹೊರಡಿಸಿರುವ ಆದೇಶಕ್ಕೆ ಪೂರಕವಾಗಿ ಮೂಲ ಜಾತಿ, ಪ್ರವರ್ಗದಡಿ ಜಾತಿ ಪ್ರಮಾಣಪತ್ರ ಪಡೆಯಲು ಅವಕಾಶ ಕಲ್ಪಿಸಿ ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದೆ.

ಒಳ ಮೀಸಲಾತಿ ಜಾರಿಯಾಗಿದ್ದರೂ ಜಾತಿ ಪ್ರಮಾಣ ಪತ್ರ ನೀಡಲು ತಂತ್ರಾಂಶ ಅಭಿವೃದ್ಧಿಪಡಿಸಿರಲಿಲ್ಲ. ಇದರಿಂದ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಹೊಸತಾಗಿ ಜಾತಿ ಪ್ರಮಾಣಪತ್ರ ಪಡೆಯಲು ಸಾಧ್ಯವಾಗಿರಲಿಲ್ಲ. ಹೀಗಾಗಿ, ನೇಮಕಾತಿ ಪ್ರಕ್ರಿಯೆ ಆರಂಭಿಸಲು ಅಡ್ಡಿಯಾಗಿತ್ತು. ಇದನ್ನು ನಿವಾರಿಸುವತ್ತ ಸರ್ಕಾರ ಮುಂದಡಿ ಇಟ್ಟಿದೆ.

ಪರಿಶಿಷ್ಟ ಜಾತಿಗಳನ್ನು 'ಪ್ರವರ್ಗ–ಎ', 'ಪ್ರವರ್ಗ–ಬಿ', 'ಪ್ರವರ್ಗ–ಸಿ' ಎಂದು ಮೂರು ಪ್ರವರ್ಗಗಳಡಿ ವರ್ಗೀಕರಿಸಿ ಒಳ ಮೀಸಲಾತಿ ಹಂಚಿಕೆ ಮಾಡಲಾಗಿದೆ. ಅದರ ಅನ್ವಯ ಜಾತಿ ಪ್ರಮಾಣಪತ್ರ ಪಡೆಯಲು ಅಗತ್ಯವಿರುವ ನಿಯಮಗಳನ್ನು ಸಮಾಜ ಕಲ್ಯಾಣ ಇಲಾಖೆ ರೂಪಿಸಿದೆ. ಅಲ್ಲದೆ, ಒಳ ಮೀಸಲಾತಿ ಸಮೀಕ್ಷೆಯಲ್ಲಿ ಮೂಲ ಜಾತಿ ತಿಳಿಸದವರಿಗೂ ಜಾತಿ ಪ್ರಮಾಣಪತ್ರ ಪಡೆಯಲು ಇರುವ ಅಡ್ಡಿ, ಆತಂಕಗಳನ್ನು ನಿವಾರಿಸಲಾಗಿದೆ.

ಸುತ್ತೋಲೆಯಲ್ಲಿರುವ ಅಂಶಗಳಂತೆ ಪರಿಶಿಷ್ಟ ಜಾತಿಯವರಿಗೆ ಜಾತಿ ಪ್ರಮಾಣಪತ್ರ ನೀಡಲು ಕ್ರಮ ವಹಿಸಬೇಕು ಎಂದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸಮಾಜ ಕಲ್ಯಾಣ ಇಲಾಖೆ ಸೂಚಿಸಿದೆ.

ಸುತ್ತೋಲೆಯಲ್ಲಿ ಏನಿದೆ: ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳಿಗೆ ಸಂವಿಧಾನದ ವಿಧಿ 15 ಮತ್ತು 16ರ ಅನ್ವಯ ಶಿಕ್ಷಣ ಮತ್ತು ಉದ್ಯೋಗದಲ್ಲಿ ಒಳ ಮೀಸಲಾತಿ ಕಲ್ಪಿಸಲು 'ಪ್ರವರ್ಗ– ಎ' ಪಟ್ಟಿಯಲ್ಲಿ 16 ಜಾತಿಗಳು, 'ಪ್ರವರ್ಗ–ಬಿ' ಪಟ್ಟಿಯಲ್ಲಿ 19 ಜಾತಿಗಳು ಹಾಗೂ 'ಪ್ರವರ್ಗ–ಸಿ' ಪಟ್ಟಿಯಲ್ಲಿ 63 ಜಾತಿಗಳನ್ನು ಸೇರಿಸಿ ವರ್ಗೀಕರಿಸಲಾಗಿದೆ. ಮೂಲ ಜಾತಿ ತಿಳಿಸದೆ ಆದಿ ಆಂಧ್ರ ಆದಿ ದ್ರಾವಿಡ, ಆದಿ ಕರ್ನಾಟಕ ಎಂದು ನಮೂದಿಸಿದ ಮೂರು ಸಮುದಾಯಗಳವರು 'ಪ್ರವರ್ಗ– ಎ' ಅಥವಾ ಪ್ರವರ್ಗ 'ಬಿ' ಅಡಿ ಮೀಸಲಾತಿ ಸೌಲಭ್ಯ ಪಡೆಯಬಹುದು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ ಸಮುದಾಯ ಹೊರತುಪಡಿಸಿ ಉಳಿದ 98 ಜಾತಿಗಳ ಜನರು ಈಗಾಗಲೇ ಜಾತಿಯನ್ನು ನಮೂದಿಸಿ ಜಾತಿ ಪ್ರಮಾಣಪತ್ರ ಪಡೆದಿದ್ದಾರೆ. ಅದೇ ಜಾತಿ ಪ್ರಮಾಣಪತ್ರವನ್ನು ಸಂಬಂಧಪಟ್ಟ ಪ್ರವರ್ಗದೊಂದಿಗೆ ಮೀಸಲಾತಿ ಪಡೆಯಲು ಬಳಸಬಹುದು. ಜಾತಿ ಪ್ರಮಾಣಪತ್ರಗಳನ್ನು ಆಯಾ ಜಾತಿಗಳಿಗೆ ಸಂಬಂಧಿಸಿದ ಪ್ರವರ್ಗದಡಿಯಲ್ಲೇ ಅಟಲ್ ಜೀ ಜನಸ್ನೇಹಿ ಕೇಂದ್ರದ ತಂತ್ರಾಂಶದಲ್ಲಿ ಅಳವಡಿಸಿಕೊಂಡು ಜಾತಿ ಪ್ರಮಾಣಪತ್ರ ನೀಡಬೇಕು ಎಂದು ನಿರ್ದೇಶನ ನೀಡಲಾಗಿದೆ.

ಅಭ್ಯರ್ಥಿಯು ಕೊರಚ ಎಂದು ಜಾತಿ ಪ್ರಮಾಣಪತ್ರ ಪಡೆದಿದ್ದರೆ, ಈ ಸಮುದಾಯವನ್ನು 'ಪ್ರವರ್ಗ–ಸಿ'ಯಲ್ಲಿ ವರ್ಗೀಕರಿಸಿರುವುದರಿಂದ ನಾಡ ಕಚೇರಿ ಅಥವಾ ಅಟಲ್ ಜೀ ಜನಸ್ನೇಹಿ ಕೇಂದ್ರದವರು ಜಾತಿ ಪ್ರಮಾಣಪತ್ರವನ್ನು 'ಕೊರಚ (ಪ್ರವರ್ಗ–ಸಿ)' ಎಂದು ನೀಡಬೇಕು. ಅಭ್ಯರ್ಥಿಯು ಪರೆಯನ್, ಪರೆಯ ಎಂದು ಈಗಾಗಲೇ ಜಾತಿ ಪ್ರಮಾಣಪತ್ರ ಪಡೆದಿದ್ದರೆ, ಈ ಸಮುದಾಯವನ್ನು 'ಪ್ರವರ್ಗ–ಬಿ'ಯಲ್ಲಿ ವರ್ಗೀಕರಿಸಿರುವುದರಿಂದ ಜಾತಿ ಪ್ರಮಾಣಪತ್ರವನ್ನು 'ಪರೆಯನ್, ಪರೆಯ (ಪ್ರವರ್ಗ–ಬಿ)' ಎಂದು ನೀಡಲು ತಂತ್ರಾಂಶದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಲಾಗಿದೆ.


ಈಗಾಗಲೇ ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ ಹೆಸರಿನಲ್ಲಿ ಜಾತಿ ಪ್ರಮಾಣಪತ್ರ ಪಡೆದವರು ತಮ್ಮ ಮೂಲ ಜಾತಿಯನ್ನು ನಮೂದಿಸಿ ಪ್ರವರ್ಗ 'ಎ' ಅಥವಾ ಪ್ರವರ್ಗ 'ಬಿ' ಅಡಿ ಮೀಸಲಾತಿ ಸೌಲಭ್ಯ ಪಡೆಯಬಹುದು. ಉದಾಹರಣೆಗೆ, ಒಬ್ಬ ಅಭ್ಯರ್ಥಿಯು ಆದಿ ಕರ್ನಾಟಕ ಎಂದು ಜಾತಿ ಪ್ರಮಾಣ ಪತ್ರ ಪಡೆದಿದ್ದು, ಮೂಲ ಜಾತಿಯು 'ಹೊಲೆಯ' ಎಂದು ಇದ್ದರೆ, ಹೊಸತಾಗಿ ಪಡೆಯುವ ಜಾತಿ ಪ್ರಮಾಣ ಪತ್ರದಲ್ಲಿ 'ಆದಿ ಕರ್ನಾಟಕ (ಹೊಲೆಯ/ಪ್ರವರ್ಗ ಬಿ)', ಮೂಲಜಾತಿಯು 'ಮಾದಿಗ' ಎಂದು ಇದ್ದರೆ 'ಆದಿ ಕರ್ನಾಟಕ (ಮಾದಿಗ/ಪ್ರವರ್ಗ ಬಿ)' ಎಂದು ಜಾತಿ ಪ್ರಮಾಣ ಪತ್ರ ನೀಡಬೇಕು. ಆದಿ ದ್ರಾವಿಡ ಮತ್ತು ಆದಿ ಆಂಧ್ರ ಅಭ್ಯರ್ಥಿಗಳು ಇದೇ ರೀತಿ ಜಾತಿ ಪ್ರಮಾಣಪತ್ರ ಪಡೆಯಬಹುದು.

ಬಿಗ್‌ಬಾಸ್ ಪುನಾರಂಭಕ್ಕೆ ಡಿಸಿಎಂ ಡಿ.ಕೆ. ಶಿವಕುಮಾರ್ ಗ್ರೀನ್ ಸಿಗ್ನಲ್

ಬೆಂಗಳೂರು, ಅ.8– ನಿಯಮ ಉಲ್ಲಂಘನೆ ಆರೋಪದ ಮೇರೆಗೆ ಸ್ಥಗಿತವಾಗಿದ್ದ ಬಿಗ್ ಬಾಸ್ ಕನ್ನಡ ರಿಯಾಲಿಟಿ ಶೋ



ಅಭಿಮಾನಿಗಳಿಗೆ ಸರ್ಕಾರ ಸಿಹಿ ಸುದ್ದಿ ನೀಡಿದ್ದು, ಶೀಘ್ರದಲ್ಲೇ ಶೋ ಪುನಾರಂಭಗೊಳ್ಳಲಿದೆ. ಸರ್ಕಾರದ ನಿಯಮ ಉಲ್ಲಂಘನೆ ಆರೋಪದ ಮೇಲೆ ಸ್ಥಗಿತಗೊಂಡಿದ್ದ ಬಿಗ್ ಬಾಸ್ ಕನ್ನಡ ಸೀಸನ್ 12 ಶೋಗೆ ಡಿಸಿಎಂ ಡಿಕೆ ಶಿವಕುಮಾರ್ ಮಧ್ಯಸ್ಥಿಕೆ ವಹಿಸಿದ್ದು, ತಪ್ಪು ಸರಿಪಡಿಸಿಕೊಳ್ಳಲು ಜಾಲಿವುಡ್ ಸ್ಟುಡಿಯೋಸ್‌ಗೆ ಮತ್ತೊಂದು ಅವಕಾಶ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ.



ಕಂದಾಯ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿ ನಿಯಮಗಳನ್ನು ಉಲ್ಲಂಘಿಸಿ ಅನಧಿಕೃತವಾಗಿ ಕಾರ್ಯ ನಿರ್ವಹಿಸುತ್ತಿರುವ ಆರೋಪದ ಮೇಲೆ ಬಿಗ್ ಬಾಸ್ ಕನ್ನಡ ಸೀಸನ್ 12 ನಡೆಯುತ್ತಿದ್ದ ಜಾಲಿವುಡ್ ಸ್ಟುಡಿಯೋಸ್ ಮನೆಯನ್ನು ಸರ್ಕಾರದಿಂದ ಸೀಜ್ ಮಾಡಲಾಗಿತ್ತು. ಇದೀಗ ಬಿಗ್‌ಬಾಸ್ ಕಾರ್ಯಕ್ರಮ ನಡೆಯುತ್ತಿದ್ದ ಜಾಲಿವುಡ್ ಸ್ಟುಡಿಯೋಸ್‌ಗೆ ಮತ್ತೊಂದು ಅವಕಾಶ ನೀಡುವಂತೆ ಡಿಸಿಎಂ ಜಿಲ್ಲಾಧಿಕಾರಿಗಳಿಗೆ ಸೂಚನೆ ರವಾನಿಸಿದ್ದಾರೆ.

ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಉದ್ಯೋಗ ಮುಖ್ಯ, ಏನೇ ಇದ್ದರೂ ಅವರಿಗೊಂದು ಅವಕಾಶ ಕೊಡಿ. ಅವರು ಸಮಸ್ಯೆ ಬಗೆ ಹರಿಸಿಕೊಳ್ಳಲಿ ಎಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದೇನೆ. ನಮ್ಮಲ್ಲಿ ಮನೋರಂಜನೆ ಕೂಡ ಮುಖ್ಯ ಎಂದು ಹೇಳಿದ್ದಾರೆ.

ಇದೇ ವೇಳೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ದೂರು ನೀಡಿರುವುದು ವಿಚಾರಣೆಯಿಂದ ತಿಳಿದುಬಂದಿದೆ. ನಾನೇ ಫೋನ್ ಮಾಡಿ ಜಿಲ್ಲಾಧಿಕಾರಿ (ಡಿಸಿ) ಮತ್ತು ಪೊಲೀಸ್ ವರಿಷ್ಠಾಧಿಕಾರಿ (ಎಸ್ಪಿ) ಅವರಿಗೆ ಹೇಳಿದ್ದೇನೆ. ಕಾನೂನನ್ನು ನೋಡಿ ಸಮಸ್ಯೆ ಆಗಿದ್ದರೆ ಅದನ್ನು ಬಗೆ ಹರಿಸಿಕೊಡಲು ಅವಕಾಶ ಕೊಡಬೇಕು ಅಂತ ಹೇಳಿದ್ದೇನೆ ಎಂದು ಸ್ಪಷ್ಟಪಡಿಸಿದರು. ಮನರಂಜನೆಯ ಅಗತ್ಯವನ್ನು ಒತ್ತಿ ಹೇಳಿದ ಅವರು, ಬಿಗ್ ಬಾಸ್ ಆಗಲಿ, ಯಾವುದೇ ಆಗಲಿ ಮನರಂಜನೆ ಇರಬೇಕು. ಖಾಸಗಿಯವರು ಹೂಡಿಕೆ ಮಾಡಿ ಏನೋ ತಪ್ಪು ಮಾಡಿರುತ್ತಾರೆ, ಅದನ್ನು ಸರಿ ಮಾಡಿಕೊಳ್ಳಲು ಅವಕಾಶ ಕೊಡಬೇಕು. ಇದು ನನ್ನ ಸಲಹೆ ಎಂದು ಡಿಕೆ ಶಿವಕುಮಾರ್ ಹೇಳಿದರು.

ಜಿಲ್ಲಾಧಿಕಾರಿಗಳಿಗೆ ಅಧಿಕಾರ ಇಲ್ಲ: ಬಿಡದಿಯ ಜಾಲಿವುಡ್ ಸ್ಟುಡಿಯೋಸ್ ಅಂಡ್ ಅಡ್ವೆಂಚರ್ಸ್ ಪಾರ್ಕ್ ಬೀಗ ಮುದ್ರೆಗೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಆದೇಶ ಹೊರಡಿಸಿದ್ದು, ಅವರಿಗೆ ಸಮಯಾವಕಾಶ ನೀಡುವ ಅಧಿಕಾರ ಜಿಲ್ಲಾಧಿಕಾರಿಗೆ ಇಲ್ಲ ಎಂದು ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರ ಸ್ವಾಮಿ ಸ್ಪಷ್ಟಪಡಿಸಿದರು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಿರುವ ಕಾನೂನು ಅಧಿಕಾರದಂತೆ ಜಾಲಿವುಡ್ ಸ್ಟುಡಿಯೋಸ್‌ಗೆ 2024 ರಿಂದ 3 ನೋಟಿಸ್ ನೀಡಿ, ಅಂತಿಮವಾಗಿ ಬೀಗಮುದ್ರೆಯ ಆದೇಶವನ್ನು ಹೊರಡಿಸಲಾಗಿದೆ. ಈ ಬಗ್ಗೆ, ಸಮಯಾವಕಾಶ ಸೇರಿದಂತೆ ಯಾವುದೇ ರೀತಿಯ ಕ್ರಮವಾಗಬೇಕಿದ್ದರೆ ಮಾಲಿನ್ಯ ನಿಯಂತ್ರಣ ಮಂಡಳಿಯವರೇ ಕೈಗೊಳ್ಳಬೇಕಿದೆ ಎಂದು ತಿಳಿಸಿದರು.

ಸಿಎಂ ಸಿದ್ದರಾಮಯ್ಯರ ಪತ್ನಿಗೆ 14 ನಿವೇಶನ ಪ್ರಕರಣ: ಇಂದು 'ಬಿ' ರಿಪೋರ್ಟ್ ಪ್ರಶ್ನಿಸಿದ್ದ ಅರ್ಜಿ ಆದೇಶ

ಬೆಂಗಳೂರು, ಅ.8– ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಪತ್ನಿಗೆ 14 ಮುಡಾ ನಿವೇಶನ ಹಂಚಿಕೆ ಪ್ರಕರಣ ಸಂಬಂಧ ಲೋಕಾಯುಕ್ತ 'ಬಿ' ರಿಪೋರ್ಟ್ ಪ್ರಶ್ನಿಸಿ ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಪೂರ್ಣಗೊಂಡಿದೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನಾಳೆಗೆ(ಗುರುವಾರ) ಆದೇಶ ಕಾಯ್ದಿರಿಸಿದೆ.

ಬಿ ರಿಪೋರ್ಟ್ ಪ್ರಶ್ನಿಸಿ ದೂರುದಾರ ಸ್ನೇಹಮಯಿ ಕೃಷ್ಣ ಪ್ರೊಟೆಸ್ಟ್ ಅರ್ಜಿ ಹಾಕಿದ್ದರು. ಈ ಹಿಂದೆ ತನಿಖೆ ಪೂರ್ಣವಾದ ಬಳಿಕ 'ಬಿ' ರಿಪೋರ್ಟ್ ಬಗ್ಗೆ ತೀರ್ಮಾನ ಮಾಡುವುದಾಗಿ ಕೋರ್ಟ್ ಹೇಳಿತ್ತು. ಕಳೆದ 6 ತಿಂಗಳಿಂದ ತನಿಖೆಯಲ್ಲಿ ಪ್ರಗತಿ ಆಗದ ಹಿನ್ನೆಲೆಯಲ್ಲಿ ಮತ್ತೊಮ್ಮೆ ಅರ್ಜಿ ಸಲ್ಲಿಸಿ 'ಬಿ' ರಿಪೋರ್ಟ್ ಬಗ್ಗೆ ಆದೇಶ ಮಾಡಲು ಸ್ನೇಹಮಯಿ ಕೃಷ್ಣ ಮನವಿ ಮಾಡಿದ್ದರು. ಇಂದು ಕೋರ್ಟ್ ಕಲಾಪದ ಅವಧಿ ಮುಕ್ತಾಯ ಹಿನ್ನೆಲೆಯಲ್ಲಿ ಆದೇಶ ನಾಳೆಗೆ ಮುಂದೂಡಿಕೆಯಾಗಿದೆ.

'ಯಶಸ್ವಿನಿ' ಇದ್ದರೆ 'ಆಯುಷ್ಮಾನ್'ಗೆ ನಿರ್ಬಂಧ: ಆರೋಗ್ಯ ಇಲಾಖೆ ಆದೇಶ


ಬೆಂಗಳೂರು, ಅ.8– ಯಶಸ್ವಿನಿ ಯೋಜನೆಯ ಫಲಾನುಭವಿಗಳನ್ನು 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' (ಎಬಿ–ಎಆರ್‌ಕೆ) ಯೋಜನೆಯಿಂದ ಹೊರಗಿಡುವಂತೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಸಹಕಾರ ಇಲಾಖೆಯಿಂದ ಯಶಸ್ವಿನಿ ಹಾಗೂ ಆರೋಗ್ಯ ಇಲಾಖೆಯಿಂದ ಎಬಿ–ಎಆರ್‌ಕೆ ಅನುಷ್ಠಾನಗೊಳಿಸಲಾಗಿದೆ. ಅನೇಕ ಕುಟುಂಬಗಳು ಎರಡೂ ಯೋಜನೆಯ ಫಲಾನುಭವಿಗಳಾಗಿದ್ದಾರೆ. ಎರಡೂ ಯೋಜನೆಗಳು ಪ್ರತಿ ಕುಟುಂಬಕ್ಕೆ ವಾರ್ಷಿಕ ತಲಾ 5 ಲಕ್ಷದವರೆಗೆ ಆರೋಗ್ಯ ರಕ್ಷಣೆಯನ್ನು ಒದಗಿಸುತ್ತವೆ. ಆದ್ದರಿಂದ ಎರಡೂ ಯೋಜನೆಗಳ ಫಲಾನುಭವಿಗಳಾಗಿರುವವರು ಯಶಸ್ವಿನಿ ಯೋಜನೆಯಡಿಯೇ ಪ್ರಯೋಜನ ಪಡೆಯಬೇಕು ಎಂದು ತಿಳಿಸಲಾಗಿದೆ.

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಸಾಸ್ಟ್) ಎರಡೂ ಯೋಜನೆಗಳ ಅನುಷ್ಠಾನದ ನಿರ್ವಹಣೆ ಮಾಡುತ್ತಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ಸಂಬಂಧಿಸಿದಂತೆ ಶಿಫಾರಸು ಮಾಡುವಾಗ, ಯಶಸ್ವಿನಿ ಯಡಿ ಚಿಕಿತ್ಸೆ ಪಡೆಯುವಂತೆ ಹಿಂಬರಹ ನೀಡಬೇಕು. ಈ ಎರಡೂ ಯೋಜನೆಯ ಫಲಾನುಭವಿಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದು ಎಂದು ಹೇಳಲಾಗಿದೆ. ರಾಜ್ಯದಲ್ಲಿ 41.51 ಲಕ್ಷ ಮಂದಿ ಯಶಸ್ವಿನಿ ಫಲಾನುಭವಿಗಳಾಗಿದ್ದು, 41.09 ಲಕ್ಷ ಮಂದಿ ಆಧಾರ್ ಹೊಂದಿದ್ದಾರೆ. ಇವರಲ್ಲಿ 35.71 ಲಕ್ಷ ಮಂದಿ ಎರಡೂ ಯೋಜನೆ ಗಳ ಫಲಾನುಭವಿಗಳಾಗಿದ್ದಾರೆ.

ಹೆಚ್.ಡಿ.ದೇವೇಗೌಡರು ಶೀಘ್ರ ಗುಣಮುಖರಾಗಲೆಂದು

ಇಂದು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ



ಹೆಚ್.ಡಿ.ದೇವೇಗೌಡರು

ಮೈಸೂರು,ಅ.8(ಪಿಎಂ)– ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಶೀಘ್ರ ಗುಣಮುಖರಾಗಲೆಂದು ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳ ವತಿಯಿಂದ ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸುವ ಕಾರ್ಯಕ್ರಮವನ್ನು ಅ.9ರಂದು ಬೆಳಗ್ಗೆ 9.30ಕ್ಕೆ ಹಮ್ಮಿಕೊಳ್ಳಲಾಗಿದೆ.

ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಬಿಜೆಪಿ ನಗರಾಧ್ಯಕ್ಷ ಎಲ್. ನಾಗೇಂದ್ರ, ಎರಡು ಪಕ್ಷದ ಮಾಜಿ ಸಚಿವರು, ಸಂಸದರು, ಮಾಜಿ ಸಂಸದರು, ಹಾಲಿ ಶಾಸಕರು, ಮಾಜಿ ಶಾಸಕರು, ಮಾಜಿ ಮೇಯರ್‌ಗಳು, ನಗರ ಪಾಲಿಕೆ ಮಾಜಿ ಸದಸ್ಯರು, ವಿವಿಧ ವಿಧಾನಸಭಾ ಕ್ಷೇತ್ರಗಳ ಅಧ್ಯಕ್ಷರು, ಎಲ್ಲಾ ವಿಭಾಗದ ಅಧ್ಯಕ್ಷರು, ಕಾರ್ಯಕರ್ತರು ಹಾಗೂ ಹೆಚ್.ಡಿ ದೇವೇಗೌಡರ ಅಭಿಮಾನಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಜೆಡಿಎಸ್‌ನ ಚಾಮರಾಜ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಪಿ.ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಜೆಐ ಅವರತ್ತ ಶೂ ತೂರಲೆತ್ನ ಪ್ರಕರಣ

ನ್ಯಾಯಾಂಗ ತನಿಖೆಗೆ ಒತ್ತಾಯ

ಮೈಸೂರು,ಅ.8(ಪಿಎಂ)– ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಅವರತ್ತ ಕೋರ್ಟ್ ಕಲಾಪದಲ್ಲೇ ಶೂ ತೂರಲೆತ್ನಿಸಿದ ವಕೀಲನನ್ನು ಬಂಧಿಸಿ, ಆತನ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಜೊತೆಗೆ ಪ್ರಕರಣ ಸಂಬಂಧ ನ್ಯಾಯಾಂಗ ತನಿಖೆ ನಡೆಸಬೇಕೆಂದು ಮೈಸೂರು ನಗರ (ಜಿಲ್ಲೆ) ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷರೂ ಆದ ಮಾಜಿ ಉಪಮೇಯರ್ ವಿ.ಶೈಲೇಂದ್ರ ಆಗ್ರಹಿಸಿದ್ದಾರೆ.



ಸುಪ್ರೀಂ ಕೋರ್ಟಿನ ಆವರಣದಲ್ಲಿ ಇಂತಹ ಹೇಯ ಕೃತ್ಯ ನಡೆದಿರುವುದು ದೇಶದ 145 ಕೋಟಿ ಭಾರತೀಯರು ತಲೆತಗಿಸುವಂತದ್ದು. ಕಾನೂನು ರಕ್ಷಣೆ ಮಾಡಬೇಕಾದ ಒಬ್ಬ ವಕೀಲನೇ ಕಾನೂನು ಉಲ್ಲಂಘಿಸಿರುವುದು ಆತಂಕಕಾರಿ ಬೆಳವಣಿಗೆ. ಒಬ್ಬ ಹಿರಿಯ ವಕೀಲನ ಈ ವರ್ತನೆಯು ಭಾರತ ದೇಶದ ಸಂವಿಧಾನಕ್ಕೆ ಮಾಡಿದ ಅಪಮಾನ. ಇಂತಹ ಕೃತ್ಯಗಳು ಮರುಕಳಿಸದಂತೆ ಕೇಂದ್ರಗೃಹ ಇಲಾಖೆ ಎಚ್ಚರ ವಹಿಸಬೇಕು ಎಂದು ಪ್ರಕಟಣೆಯಲ್ಲಿ ಅವರು ಒತ್ತಾಯಿಸಿದ್ದಾರೆ

ರಾಜ್ಯೋತ್ಸವ ಪ್ರಶಸ್ತಿಗೆ ಇನ್ನು ಮುಂದೆ ಅರ್ಜಿ ಪ್ರಕ್ರಿಯೆ ಇಲ್ಲ: ಸರ್ಕಾರದಿಂದ ಮಹತ್ವದ ನಿರ್ಧಾರ

ಈ ಬಾರಿ 70 ಮಂದಿ ಅರ್ಹ ಸಾಧಕರಿಗೆ ಪ್ರಶಸ್ತಿ

ಬೆಂಗಳೂರು, ಅ.8– ವರ್ಷದಿಂದ ವರ್ಷಕ್ಕೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಡಿಮ್ಯಾಂಡ್ ಹೆಚ್ಚಾಗುತ್ತಿದ್ದು, ಅರ್ಜಿ ಸಲ್ಲಿಸುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಹೀಗಾಗಿ ಮಹತ್ವದ ನಿರ್ಧಾರ ಕೈಗೊಂಡಿರುವ ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿಗೆ ಅರ್ಜಿ ಹಾಕುವ ಪ್ರಕ್ರಿಯೆಯನ್ನೇ ಕೈಬಿಟ್ಟಿದೆ

ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಹೊಸ ನಿಯಮ ಜಾರಿಗೊಳಿಸಲಾಗುತ್ತಿದ್ದು, ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸುವ ಪ್ರಕ್ರಿಯೆಯನ್ನೇ ಕೈಬಿಟ್ಟಿದೆ. ಈ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಮಾಹಿತಿ ನೀಡಿದ್ದಾರೆ. ರಾಜ್ಯೋತ್ಸವ ಪ್ರಶಸ್ತಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸಲಹಾ ಸಮಿತಿ ಹಾಗೂ ಉನ್ನತ ಆಯ್ಕೆ ಸಮಿತಿ ರಚಿಸಿ ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡಲು ಸರ್ಕಾರ ನಿರ್ಧರಿಸಿದೆ. ಸಮಿತಿ ಯಿಂದ ಆಯ್ಕೆಯಾದ ಸಾಧಕರಿಗೆ ಮಾತ್ರಪ್ರಶಸ್ತಿ ನೀಡಲು ಸರ್ಕಾರ ನಿರ್ಧರಿಸಿದೆ

ಈ ಬಾರಿ 70 ಜನ ಅರ್ಹ ಗಣ್ಯರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಲು ಸರ್ಕಾರದ ನಿರ್ಧಾರ ಮಾಡಿದೆ. ಈಗಾಗಲೇ ಇಲಾಖೆಗೆ ಸಲ್ಲಿಕೆಯಾಗಿರುವ ಸ್ವಯಂ ಅರ್ಜಿಗಳನ್ನು ಸಹ ಪ್ರಶಸ್ತಿ ಸಲಹಾ ಸಮಿತಿ ಮುಂದೆ ಮಂಡಿಸಲು ನಿರ್ಧರಿಸಲಾಗಿದೆ.

15 ದಿನ ಕಾಲಾವಕಾಶ ಕೋರಿದ ಜಾಲಿವುಡ್

ಜಿಲ್ಲಾಧಿಕಾರಿಗೆ ಮನವಿ ಪತ್ರ ಸಲ್ಲಿಕೆ

ರಾಮನಗರ, ಅ.8– ನಿಯಮ ಉಲ್ಲಂಘನೆ ಮೇರೆಗೆ ಬಂದ್ ಆಗಿರುವ ಜಾಲಿವುಡ್ ಸ್ಟುಡಿಯೋಸ್ ಅಂಡ್ ಅಡ್ವೆಂಚರ್ಸ್ ಪಾರ್ಕ್ ಆಡಳಿತ ಮಂಡಳಿ ಯವರು ಬುಧವಾರ ಜಿಲ್ಲಾಧಿಕಾರಿಯನ್ನು ಭೇಟಿ ಮಾಡಿ, ಬೀಗಮುದ್ರೆ ತೆಗೆಯುವಂತೆ ಮನವಿ ಮಾಡಿದರು.

ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಅವರನ್ನು ಭೇಟಿ ಮಾಡಿದ ವ್ಯವಸ್ಥಾಪಕ ಹಾಗೂ ಇತರರು, ತಮ್ಮ ತಪ್ಪು ಸರಿಪಡಿಸಿಕೊಳ್ಳಲು ಹದಿನೈದು ದಿನ ಕಾಲಾವಕಾಶ ನೀಡುವಂತೆ ಕೋರಿದರು. ಸ್ಟುಡಿಯೋದಲ್ಲಿ 400ಕ್ಕೂ ಹೆಚ್ಚು ಜನರು ಕೆಲಸ ಮಾಡುತ್ತಿದ್ದಾರೆ. ಜನಪ್ರಿಯ ರಿಯಾಲಿಟಿ ಷೋ ಬಿಗ್ ಬಾಸ್ ಕೂಡ ನಡೆಯುತ್ತಿದೆ. ಸ್ಟುಡಿಯೋಗೆ ಬೀಗ ಹಾಕಿರುವುದರಿಂದ ಅವರೆಲ್ಲರ ಕೆಲಸಕ್ಕೆ ತೊಂದರೆಯಾಗಲಿದೆ. ಹಾಗಾಗಿ, ಷರತ್ತುಬದ್ದ ಅನುಮತಿ ನೀಡುವಂತೆ ಮನವಿ ಮಾಡಿದರು. ಅದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಆದೇಶವನ್ನು ನಾವು ಪಾಲಿಸಿದ್ದೇವೆ. ಹಾಗಾಗಿ, ಮಂಡಳಿಗೆ ನೀವು ಮನವಿ ಮಾಡಿ. ಅವರು ನೀಡುವ ಆದೇಶದಂತೆ ನಾವು ಮುಂದಿನ ಕ್ರಮ ಕೈಗೊಳ್ಳುತ್ತೇವೆ ಎಂದರು.

ದೇಶ – ವಿದೇಶ

ರಷ್ಯಾ ಸೇನೆ ಸೇರಿದ್ದ ಭಾರತ ಮೂಲದ ವ್ಯಕ್ತಿ ಉಕ್ರೇನ್ ಪಡೆಗೆ ಶರಣು

ಕೀವ್: ರಷ್ಯಾದ ಸೇನೆಗೆ ಸೇರ್ಪಡೆಯಾಗಿದ್ದ ಭಾರತ ಮೂಲದ ವ್ಯಕ್ತಿಯೊಬ್ಬರು ಮಂಗಳವಾರ ಉಕ್ರೇನ್ ಪಡೆಗಳಿಗೆ ಶರಣಾಗಿದ್ದಾರೆ ಎಂದು ಉಕ್ರೇನ್ ಮಾಧ್ಯಮಗಳು ವರದಿ ಮಾಡಿವೆ. ಈ ಕುರಿತು ಭಾರತ ಸರ್ಕಾರಕ್ಕೂ ಮಾಹಿತಿ ನೀಡಿವೆ ಎಂದು ಹೇಳಲಾಗಿದೆ. ಗುಜರಾತ್ ಮೂಲದ ಮಜೋತಿ ಸಾಹಿಲ್ ಮೊಹಮ್ಮದ್ ಹುಸೇನ್ ಎಂಬುವವನನ್ನು ಉಕ್ರೇನ್ ಪಡೆಗಳು ಸೆರೆಹಿಡಿದಿವೆ ಎಂದು ಕೈವ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಖಚಿತಪಡಿಸಿದೆ.



22 ವರ್ಷದ ಹುಸೇನ್ ಕೇವಲ ಮೂರು ದಿನಗಳನ್ನು ಮಾತ್ರ ರಷ್ಯಾ ಸೇನೆಯಲ್ಲಿ ಮುಂಚೂಣಿಯಲ್ಲಿ ಕಳೆದರು. ತಾನು ರಷ್ಯಾಕ್ಕೆ ಅಧ್ಯಯನ ಮಾಡಲು ಬಂದಿದ್ದಾಗಿ ಹೇಳಿಕೊಂಡಿದ್ದ. ಆದರೆ ಬಳಿಕ ಮಾದಕವಸ್ತುಗಳೊಂದಿಗೆ ಸಿಕ್ಕಿಬಿದ್ದಿದ್ದಕ್ಕೆ ಏಳು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಯಿತು. ಇದಾದ ನಂತರ ಆತನನ್ನು ರಷ್ಯಾದ ಪಡೆಗಳೊಂದಿಗೆ ಒಪ್ಪಂದದಂತೆ ನೀಡಲಾಯಿತು ಎಂದು ಹೇಳಲಾಗಿದೆ.

ಪಾಕಿಸ್ತಾನಕ್ಕೆ ಅಪಾಯಕಾರಿ ಕ್ಷಿಪಣಿಗಳನ್ನು ನೀಡಲಿದೆ ಅಮೆರಿಕ

ವಾಷಿಂಗ್ಟನ್: ಆಪರೇಷನ್ ಸಿಂಧೂರ್ ಬಳಿಕ ಅಮೆರಿಕ ಹಾಗೂ ಪಾಕಿಸ್ತಾನ ತೀರಾ ಹತ್ತಿರವಾಗಿವೆ. ಪಾಕ್ ಹಾಗೂ ಅಮೆರಿಕದ ನಡುವೆ ರಹಸ್ಯ ಒಪ್ಪಂದ ನಡೆದಿದೆ. ಪಾಕಿಸ್ತಾನವು ಅಮೆರಿಕದಿಂದ AIM-120 ಅಡ್ವಾನ್ಸ್ಡ್ ಮೀಡಿಯಂ–ರೇಂಜ್ ಏರ್–ಟು–ಏರ್ ಕ್ಷಿಪಣಿಗಳನ್ನು ಪಡೆಯುವ ಸಾಧ್ಯತೆಯಿದೆ. ಅಮೆರಿಕ ಯುದ್ಧ ಇಲಾಖೆಯು ಇತ್ತೀಚಿಗೆ ಮಾಡಿಕೊಂಡಿರುವ ಕೆಲವು ಒಪ್ಪಂದದಲ್ಲಿ ಪಾಕಿಸ್ತಾನವೂ ಸೇರಿದೆ.



ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಪಾಕಿಸ್ತಾನಿ ಪ್ರಧಾನಿ ಶೆಹಬಾಜ್ ಷರೀಫ್ ಮತ್ತು ಸೇನಾ ಮುಖ್ಯಸ್ಥ ಜನರಲ್ ಆಸಿಮ್ ಮುನೀರ್ ನಡುವಿನ ಸಭೆಯ ಕೆಲವೇ ದಿನಗಳ ನಂತರ ಈ ಒಪ್ಪಂದವಾಗಿದೆ. ಭೇಟಿಯ ಸಮಯದಲ್ಲಿ, ಭಾರತ ಮತ್ತು ಪಾಕಿಸ್ತಾನದ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆಯನ್ನು ಕಡಿಮೆ ಮಾಡುವಲ್ಲಿ ತಾವು ಪಾತ್ರ ವಹಿಸಿರುವುದಾಗಿ ಟ್ರಂಪ್ ಹೇಳಿದ್ದಾರೆ.

ಗಾಯಕ ಜುಬಿನ್ ಗಾರ್ಗ್ ಸಾವು ಪ್ರಕರಣ: ಅಸ್ಸಾಂನ ಡಿವೈಎಸ್‌ಪಿ ಬಂಧನ


ಗುವಾಹಟಿ: ಇತ್ತೀಚೆಗೆ ಅನುಮಾನಾಸ್ಪದವಾಗಿ ಸಾವನ್ನಪ್ಪಿದ ಗಾಯಕ ಜುಬಿನ್ ಗಾರ್ಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ಅಸ್ಸಾಂ ಪೊಲೀಸ್ ಡಿವೈಎಸ್‌ಪಿಯನ್ನು ಬಂಧಿಸಲಾಗಿದೆ. ಅಸ್ಸಾಂ ಪೊಲೀಸ್ ಸೇವೆಯ ಅಧಿಕಾರಿ ಮತ್ತು ದಿವಂಗತ ಗಾಯಕ ಜುಬೀನ್ ಗಾರ್ಗ್ ಅವರ ಸೋದರ ಸಂಬಂಧಿ ಸಂದೀಪನ್ ಗಾರ್ಗ್ ಅವರನ್ನು ಅಸ್ಸಾಂ ಪೊಲೀಸರ ವಿಶೇಷ ತನಿಖಾ ತಂಡ (ಎಸ್‌ಐಟಿ) ಬಂಧಿಸಿದೆ. ಸಂದೀಪನ್ ಕಳೆದ ಐದು ದಿನಗಳಿಂದ ಪ್ರತಿದಿನ ಅಸ್ಸಾಂನ ಅಪರಾಧ ತನಿಖಾ ಇಲಾಖೆ (ಸಿಐಡಿ) ಕಚೇರಿಯಲ್ಲಿ ತನಿಖಾಧಿಕಾರಿಗಳ ಮುಂದೆ ವಿಚಾರಣೆಗೆ ಹಾಜರಾಗುತ್ತಿದ್ದರು.



ಬುಧವಾರ ಬೆಳಿಗ್ಗೆ 10:30 ರ ಸುಮಾರಿಗೆ ಸಿಐಡಿ ಕಚೇರಿಗೆ ಬಂದ ಸ್ವಲ್ಪ ಸಮಯದ ನಂತರ ಸಂದೀಪನ್ ಅವರನ್ನು ಬಂಧಿಸಲಾಯಿತು. ಸಿಐಡಿ ಮೂಲಗಳು ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದೆ.

ಜೈಪುರ–ಅಜ್ಮೀರ್ ಹೆದ್ದಾರಿಯಲ್ಲಿ ಟ್ರಕ್‌ಗಳು ಡಿಕ್ಕಿ; 42 ಸಿಲಿಂಡರ್ ಸ್ಫೋಟ: ಚಾಲಕ ಸಾವು

ಜೈಪುರ: ಕಳೆದ ರಾತ್ರಿ ಜನನಿಬಿಡ ಜೈಪುರ–ಅಜ್ಮೀರ್ ಹೆದ್ದಾರಿಯಲ್ಲಿ ರಾಸಾಯನಿಕ ತುಂಬಿದ ಟ್ಯಾಂಕರ್ ನಿಂತಿದ್ದ ಟ್ರಕ್‌ಗೆ ಡಿಕ್ಕಿ ಹೊಡೆದ ನಂತರ 42 ಕ್ಕೂ ಹೆಚ್ಚು ಎಲ್‌ಪಿಜಿ ಸಿಲಿಂಡರ್‌ಗಳು ಒಂದರ ನಂತರ ಒಂದರಂತೆ ಸ್ಫೋಟ ಗೊಂಡವು.



ಘಟನೆಯಲ್ಲಿ ಟ್ಯಾಂಕರ್ ಚಾಲಕ ಜೀವಂತವಾಗಿ ಸುಟ್ಟುಹೋಗಿದ್ದು, ಒಬ್ಬರು ಗಾಯಗೊಂಡಿದ್ದಾರೆ. ಸ್ಫೋಟಗಳು ಮತ್ತು ಬೆಂಕಿಯ ಜ್ವಾಲೆಗಳು ಹಲವಾರು ಕಿಲೋಮೀಟರ್ ದೂರದಿಂದ ಗೋಚರಿಸುತ್ತಿದ್ದವು. ಜೈಪುರ ಕಲೆಕ್ಟರ್ ಡಾ. ಜಿತೇಂದ್ರ ಸೋನಿ, ಹಿಂದೂಸ್ತಾನ್ ಪೆಟ್ರೋಲಿಯಂ ತಂಡವು ಸುರಕ್ಷತಾ ಪ್ರೋಟೋಕಾಲ್ ಅನುಸರಿಸಿ ಎಲ್ಲಾ ಸಿಲಿಂಡರ್‌ಗಳನ್ನು ತೆಗೆದುಹಾಕಲಾಗಿದೆ ಎಂದು ಹೇಳಿದರು. ಪ್ರದೇಶದ ಸುತ್ತಲೂ 42 ಸಿಲಿಂಡರ್‌ಗಳ ತುಂಡುಗಳು ಬಿದ್ದಿವೆ. ಅವೆಲ್ಲವೂ ಸ್ಫೋಟಗೊಂಡ ಸಿಲಿಂಡರ್‌ಗಳಾಗಿದ್ದವು. ಒಟ್ಟು 120 ಸಿಲಿಂಡರ್‌ಗಳು ಸುರಕ್ಷಿತವಾಗಿವೆ.

ಎನ್‌ಕೌಂಟರ್ ವೇಳೆ ಪಾಕ್‌ನ ಲೆಫ್ಟಿನೆಂಟ್ ಕರ್ನಲ್, ಮೇಜರ್ ಸೇರಿದಂತೆ 11 ಸೈನಿಕರ ಹತ್ಯೆ

ಪೇಶಾವರ್: ಪಾಕಿಸ್ತಾನದ ಪ್ರಕ್ಷುಬ್ಧ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ನಿಷೇಧಿತ ಟಿಟಿಪಿಯ 19 ಭಯೋತ್ಪಾದಕರು ಮತ್ತು ಲೆಫ್ಟಿನೆಂಟ್ ಕರ್ನಲ್ ಹಾಗೂ ಮೇಜರ್ ಸೇರಿದಂತೆ 11 ಸೈನಿಕರು ಸಾವನ್ನಪ್ಪಿದ್ದಾರೆ ಎಂದು ಪಾಕ್ ಸೇನೆ ತಿಳಿಸಿದೆ.

ಅ.7–8 ರ ರಾತ್ರಿ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಯಿತು. ಪಾಕ್ ಸೈನಿಕರು ಮತ್ತು ಭಯೋತ್ಪಾದಕರ ನಡುವಿನ ಭೀಕರ ಗುಂಡಿನ ಚಕಮಕಿಯ ಸಂದರ್ಭದಲ್ಲಿ 19 ಭಯೋತ್ಪಾದಕರು ಹತ್ಯೆಗೀಡಾಗಿದ್ದು ಲೆಫ್ಟಿನೆಂಟ್ ಕರ್ನಲ್ ಮತ್ತು ಮೇಜರ್ ಸೇರಿದಂತೆ 11 ಪಾಕಿಸ್ತಾನಿ ಸೈನಿಕರು ಸಾವನ್ನಪ್ಪಿದ್ದಾರೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ನಿಷೇಧಿತ ಟಿಟಿಪಿ 2022ರ ನವೆಂಬರ್‌ನಲ್ಲಿ ಸರ್ಕಾರದೊಂದಿಗೆ ಕದನ ವಿರಾಮ ಕೊನೆಗೊಳಿಸಿದ ನಂತರ ಭದ್ರತಾ ಪಡೆಗಳು, ಪೊಲೀಸರನ್ನು ಗುರಿಯಾಗಿಸಿಕೊಂಡು ಬಲೂಚಿಸ್ತಾನ್ ಪ್ರಾಂತ್ಯಗಳಲ್ಲಿ ಭಯೋತ್ಪಾದಕ ದಾಳಿಗಳು ಹೆಚ್ಚಾಗಿವೆ.

ವಿಪಕ್ಷ ಶಾಸಕರಿಗೆ ಸರಿಯಾಗಿ ಅನುದಾನ ನೀಡುತ್ತಿಲ್ಲ

ಶಾಸಕ ಹೆಚ್.ಟಿ.ಮಂಜು ಗಂಭೀರ ಆರೋಪ



ಬಾಕ್ಸ್ ಡ್ರೈನೇಜ್ ಮತ್ತು ಕಾಂಕ್ರೀಟ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಟಿ.ಮಂಜು ಭೂಮಿ ಪೂಜೆ ನೆರವೇರಿಸಿದರು

ಕೆ.ಆರ್.ಪೇಟೆ, ಅ.8–ರಾಜ್ಯ ಸರ್ಕಾರವು ವಿಪಕ್ಷ ಶಾಸಕರಿಗೆ ಸರಿಯಾಗಿ ಅನುದಾನ ನೀಡುತ್ತಿಲ್ಲ ಎಂದು ಶಾಸಕ ಹೆಚ್.ಟಿ.ಮಂಜು ಗಂಭೀರ ಆರೋಪ ಮಾಡಿದ್ದಾರೆ.

ತಾಲೂಕಿನ ಹಿರೀಕಳಲೆ, ಗಾಂಧೀನಗರ, ಕೃಷ್ಣಾಪುರ ಗ್ರಾಮಗಳಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಲ್ಲಿ ನಿರ್ಮಿಸಲಾಗುತ್ತಿರುವ ಬಾಕ್ಸ್ ಡ್ರೈನೇಜ್ ಮತ್ತು ಕಾಂಕ್ರೀಟ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ರಾಜ್ಯ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ಎರಡೂವರೆ ವರ್ಷಗಳಿಂದ ಒಂದೇ ಒಂದು ಆಶ್ರಯ ಮನೆಯನ್ನು ಮಂಜೂರು ಮಾಡಿಲ್ಲ. ಎಲ್ಲಾ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ಶಾಸಕರಿಗೆ ಅನುದಾನ ನೀಡುತ್ತಿಲ್ಲ. ಇನ್ನು ವಿರೋಧ ಪಕ್ಷದ ಶಾಸಕರ ಸ್ಥಿತಿ ಶೋಚನೀಯವಾಗಿದೆ ಎಂದರು.

ತಾಲೂಕಿನ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದೇನೆ. ಆದರೂ ಬರುವ ಅಷ್ಟೋ, ಇಷ್ಟೋ ಅನುದಾನದಲ್ಲಿ ತಾಲೂಕಿನಲ್ಲಿ ಅಗತ್ಯವಿರುವ ಗ್ರಾಮಗಳಿಗೆ ಅನುದಾನ ಹಂಚಿಕೆ ಮಾಡುವ ಮೂಲಕ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ಮೂಲ ಸೌಲಭ್ಯಗಳಿಗೆ ಅನುದಾನ ನೀಡುವಲ್ಲಿ ಸರ್ಕಾರ ಹಿಂದೇಟು ಹಾಕುತ್ತಿದೆ. ಆದರೂ ಅಧಿಕಾರಿಗಳ ಮತ್ತು ಸಚಿವರ ಬೆನ್ನತ್ತಿ ಅನುದಾನ ತರುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ಎಂದು ತಿಳಿಸಿದರು.

ಮೊನ್ನೆ ನಡೆದ ಟಿಎಪಿಸಿಎಂಎಸ್ ಚುನಾವಣೆಯಲ್ಲಿ ಜೆಡಿಎಸ್ ಪಕ್ಷಕ್ಕೆ ಆಶೀರ್ವಾದ ಮಾಡುವ ಮೂಲಕ ತಾಲೂಕಿನ ಜನತೆ ನನಗೆ ಕೆಲಸ ಮಾಡಲು ಶಕ್ತಿ ತುಂಬಿದ್ದೀರಿ. ಈ ಫಲಿತಾಂಶವು ಮುಂಬರುವ ತಾಪಂ, ಜಿಪಂ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವು ಅಧಿಕಾರಕ್ಕೆ ಬರುವ ವಿಶ್ವಾಸವಿದೆ ಎಂದು ಹೇಳಿಕೊಂಡರು.

ಟಿಎಪಿಸಿಎಂಎಸ್ ನಿರ್ದೇಶಕ ಕಾಯಿ ಮಂಜುನಾಥ್, ಹಿರೀಕಳಲೆ ಗ್ರಾಮ ಪಂಚಾಯಿತಿ ಅಧ್ಯಕ್ಷ ರತ್ನಮ್ಮ ರಾಮಕೃಷ್ಣೇಗೌಡ, ಪಿಡಿಓ ನವೀನ್.ಎಂ.ಆರ್, ಕಾರ್ಯದರ್ಶಿ ರವಿ, ಸದಸ್ಯರಾದ ಪುಷ್ಪಲತಾ, ಗಣೇಶ್, ಕೆಂಪರಾಜು, ಸಣ್ಣನಿಂಗಯ್ಯ, ಗುರುರಾಜ್, ತಮ್ಮಯ್ಯ, ರೋಷನ್, ಮಹೇಶ್, ಗಣೇಶಾಚಾರ್, ಚೌಡೇನಹಳ್ಳಿ ಗ್ರಾ. ಪಂ. ಅಧ್ಯಕ್ಷ, ಧನಲಕ್ಷ್ಮೀ ಶಂಭುಲಿಂಗೇಗೌಡ, ವಿಜಯ್ ಕುಮಾರ್, ಗ್ರಾ.ಪಂ.ಸದಸ್ಯರಾದ ಗಿರೀಶ್, ಅಂಬುಜಮ್ಮ ಗಿರೀಗೌಡ, ಜಯಲಕ್ಷ್ಮಮ್ಮ, ದೇವರಾಜು, ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಗಣಿಗಾರಿಕೆ ಬ್ಲಾಸ್ಟಿಂಗ್‌ನಿಂದ ಸುರಂಗ ಕಾಲುವೆಗೆ ಕಂಟಕ: ಅಧಿಕಾರಿಗಳ ಪರಿಶೀಲನೆ



ಗಣಿ ಮತ್ತು ಭೂ ವಿಜ್ಞಾನದ ಅಧಿಕಾರಿಗಳ ತಂಡ ಪರಿಶೀಲನೆ ನಡೆಸಿತು

ಶ್ರೀರಂಗಪಟ್ಟಣ, ಅ.8–ತಾಲೂಕಿನ ಚೆನ್ನನಕೆರೆ ಮತ್ತು ಆಲಗೂಡು ಗ್ರಾಮಗಳ ನಡುವಿನ ವಿಸಿ ಸಂಪರ್ಕ ಸುರಂಗ ನಾಲೆಯ ಅಕ್ಕ–ಪಕ್ಕಗಳಲ್ಲಿ ತಲೆಯೆತ್ತಿರುವ ಗಣಿಗಾರಿಕೆಗಳ ಬ್ಲಾಸ್ಟಿಂಗ್‌ನಿಂದಾಗಿ ಆತಂಕ ಎದುರಾಗಿರುವ ಹಿನ್ನೆಲೆಯಲ್ಲಿ ಅಧಿಕಾರಿಗಳ ತಂಡ ಇಂದು ಪರಿಶೀಲನೆ ನಡೆಸಿತು

ನೀರಾವರಿ ನಿಗಮದ ಎಕ್ಸಿಕ್ಯೂಟೀವ್ ಎಂಜಿನಿಯರ್ ವಾಸುದೇವ ನೀಡಿದ ದೂರಿನ ಮೇಲೆ ಗಣಿ ಮತ್ತು ಭೂ ವಿಜ್ಞಾನದ ಹಿರಿಯ ಅಧಿಕಾರಿ ಪುಷ್ಪ ನೇತೃತ್ವದ ತಂಡ ಪರಿಶೀಲನೆ ನಡೆಸಿ ಸೂಕ್ತ ಕಾನೂನು ಕ್ರಮ ಜರುಗಿಸುವುದಾಗಿ ಭರವಸೆ ನೀಡಿದರು.

ಸುರಂಗ ನಾಲೆಯ ಅಕ್ಕ–ಪಕ್ಕದಲ್ಲಿ ನಡೆಯುತ್ತಿರುವ ಕ್ರಷರ್ ಮತ್ತು ಕ್ವಾರೆಗಳ ದಾಖಲಾತಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಜೊತೆಗೆ ಕ್ವಾರಿಗಳಲ್ಲಿ ಬ್ಲಾಸ್ಟಿಂಗ್ ನಡೆಸುತ್ತಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಪೋಲೀಸ್ ಇಲಾಖೆಗೆ ಸೂಚನೆ ನೀಡುವುದಾಗಿ ಭರವಸೆ ನೀಡಿದರು.

ಎಕ್ಸಿಕ್ಯುಟೀವ್ ಎಂಜಿನಿಯರ್ ವಾಸುದೇವ ಮಾತನಾಡಿ, ಈ ಭಾಗದಲ್ಲಿ ಸುಮಾರು 1.3 ಕಿ.ಮೀ ವರೆಗೂ ಸುರಂಗದ ಮೂಲಕವೇ ಹಾದು ಹೋಗುವ ವಿಸಿ ಸಂಪರ್ಕ ನಾಲೆಯು ಸುಮಾರು 70 ಸಾವಿರ ಎಕರೆ ಪ್ರದೇಶದ ಜಮೀನುಗಳ ಕೃಷಿ ಚಟುವಟಿಕೆಗಳಿಗೆ ಆಧಾರಸ್ತಂಬವಾಗಿದೆ. ಇಲ್ಲಿನ ಕ್ವಾರಿ ಮತ್ತು ಕ್ರಷರ್‌ಗಳಲ್ಲಿ ನಡೆಯುತ್ತಿರುವ ಬ್ಲಾಸ್ಟ್‌ನಿಂದಾಗಿ ಸುರಂಗ ಕುಸಿಯುವ ಸಾಧ್ಯತೆಯಿದ್ದು, ನಾಲೆಯ ರಕ್ಷಣೆಗಾಗಿ ಅಗತ್ಯ ಕಾನೂನು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಜೇಶ್ ಗೌಡ ಮಾತನಾಡಿ, ಈ ಭಾಗದಲ್ಲಿ ಪ್ರಭಾವಿಗಳು ಹಾಗೂ ರಾಜಕೀಯ ನಾಯಕರುಗಳ ಹಿಂಬಾಲಕರು ಕ್ರಷರ್ ಮತ್ತು ಕ್ವಾರಿಗಳನ್ನು ನಡೆಸುತ್ತಿದ್ದು ಎಗ್ಗಿಲ್ಲದೆ ಬ್ಲಾಸ್ಟಿಂಗ್ ಮಾಡುವ ಮೂಲಕ ಸುರಂಗದ ನಾಲೆಗೆ ಕಂಟಕವಾಗಿದ್ದಾರೆ ಎಂದರು. ಸ್ಥಳೀಯರಾದ ಗಂಜಾಂ ರವಿಚಂದ್ರ, ಕಾಳೇನಹಳ್ಳಿ ಮಹೇಶ್, ಕೋಡಿಶೆಟ್ಟಿಪುರ ತೇಜಸ್, ಅಲ್ಲಾ ಪಟ್ಟಣ ಸಿದ್ದೇಗೌಡ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಸಾಧಕರಿಗೆ ಸನ್ಮಾನ



ಮಹದೇವಪುರ (ಬೋರೆ) ಗ್ರಾಮದ ಹಾಲು ಉತ್ಪಾದಕರ ಪುತ್ರಿ, ರಾಜ್ಯ ಮಟ್ಟದ ಥ್ರೋಬಾಲ್‌ನಲ್ಲಿ ಚಿನ್ನದ ಪದಕ ಗಳಿಸಿದ್ದ ಸೃಷ್ಟಿ ಸೇರಿದಂತೆ ನಾಲ್ವರನ್ನು ಮಹದೇವಪುರ ಹಾಲು ಉತ್ಪಾದಕರ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಸನ್ಮಾನಿಸಲಾಯಿತು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಹುಟ್ಟುಹಬ್ಬ ಸಂಭ್ರಮದ ಆಚರಣೆ



ಶಾಸಕ ದರ್ಶನ್ ಪುಟ್ಟಣ್ಣಯ್ಯ ಹುಟ್ಟುಹಬ್ಬದ ಅಂಗವಾಗಿ ಶಾಲಾ ಮಕ್ಕಳಿಗೆ ಬ್ಯಾಗ್ ಮತ್ತು ಪೌರಕಾರ್ಮಿಕರಿಗೆ ಸಮವಸ್ತ್ರ ವಿತರಣೆ ಮಾಡಿದರು.

ಪಾಂಡವಪುರ, ಅ.8–ಶಾಸಕ ದರ್ಶನ್ ಪುಟ್ಟಣ್ಣಯ್ಯ ಹುಟ್ಟುಹಬ್ಬವನ್ನು ಪಟ್ಟಣದಲ್ಲಿ ರೈತಸಂಘದ ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳು ಬುಧವಾರ ವಿಜೃಂಭಣೆಯಿಂದ ಆಚರಣೆ ಮಾಡಿದರು.

ಪಟ್ಟಣದ ಬನ್ನಾರಿ ಮಾರಿಯಮ್ಮ ದೇವಸ್ಥಾನದಲ್ಲಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದ ಅಭಿಮಾನಿಗಳು ಹಾಗೂ ಕಾರ್ಯಕರ್ತರು ಬಳಿಕ ಸಾರ್ವಜನಿಕ ಆಸ್ಪತ್ರೆಯ ಒಳ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ ಮಾಡಿ ಪುರಸಭೆಯಲ್ಲಿ ಕೆಲಸ ಮಾಡುವ ಪೌರಕಾರ್ಮಿಕರಿಗೆ ಉಚಿತವಾಗಿ ಬಟ್ಟೆ ವಿತರಣೆ ಮಾಡಿದರು. ನಂತರ ಪಟ್ಟಣದ ಫ್ರೆಂಚ್‌ರಾಕ್ಸ್ ಶಾಲೆಯ ಸುಮಾರು 150ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಉಚಿತವಾಗಿ ಬ್ಯಾಗ್ ವಿತರಿಸಿದರು.

ರೈತನಾಯಕಿ ಸುನೀತ ಪುಟ್ಟಣ್ಣಯ್ಯ ಮಾತನಾಡಿ, ಶಾಸಕ ದರ್ಶನ್ ಪುಟ್ಟಣ್ಣಯ್ಯ ಹುಟ್ಟುಹಬ್ಬವನ್ನು ಎಲ್ಲಾ ಕಾರ್ಯಕರ್ತರು ಅಭಿಮಾನಿಗಳು ಸಾಂಕೇತಿಕವಾಗಿ ಆಚರಿಸಿದ್ದಾರೆ ಶಾಸಕರಾಗಿ ಸರಕಾರದಿಂದ ಕೋಟ್ಯಂತರ ರೂ. ಅನುದಾನವನ್ನು ತಂದು ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವ ಕೆಲಸ ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ತಾಯಿ ಚಾಮುಂಡೇಶ್ವರಿ ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿ ಪಡಿಸಲು ಆಯಸ್ಸು ಆರೋಗ್ಯ ದಯಪಾಲಿಸಲಿ ಎಂದು ಹಾರೈಸಿದರು. ಇದೇ ವೇಳೆ ರೈತ ಸಂಘ ಅಧ್ಯಕ್ಷ ಕೆನ್ನಾಳು ವಿಜಿಕುಮಾರ್, ಮಾಜಿ ಅಧ್ಯಕ್ಷ ಚಿಕ್ಕಾಡೆ ಹರೀಶ್, ಕಾರ್ಯದರ್ಶಿ ಮಂಜುನಾಥ್ ಸೇರಿದಂತೆ ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳು ಹಾಜರಿದ್ದರು.

ನಾಳೆ ವಿಶ್ವ ಹಿರಿಯ ನಾಗರಿಕರ ದಿನಾಚರಣೆ

ಮಂಡ್ಯ, ಅ.8–ವಿಶ್ವ ಹಿರಿಯ ನಾಗರೀಕರ ದಿನಾಚರಣೆ ಮತ್ತು ಹಿರಿಯ ನಾಗರೀಕರ ಸಾಧನ ಸಲಕರಣೆಗಳ ವಿತರಣಾ ಕಾರ್ಯಕ್ರಮವನ್ನು ಅ.10 ರ ಬೆಳಿಗ್ಗೆ 10.30ಕ್ಕೆ ನಗರದ ಗಾಂಧಿಭವನದಲ್ಲಿ ಆಯೋಜಿಸಲಾಗಿದೆ. ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಕಾರ್ಯಕ್ರಮ ಉದ್ಘಾಟಿಸುವರು ಶಾಸಕರಾದ ಎ.ಬಿ.ರಮೇಶ ಬಂಡಿಸಿದ್ದೇಗೌಡ, ಪಿ.ಎಂ.ನರೇಂದ್ರಸ್ವಾಮಿ, ದಿನೇಶ್ ಗೂಳಿಗೌಡ ಉಪಸ್ಥಿತಿ ವಹಿಸಲಿದ್ದಾರೆ. ಶಾಸಕ ಪಿ.ರವಿಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿಧಾನಪರಿಷತ್ ಸದಸ್ಯರಾದ ಮಧು ಜಿ.ಮಾದೇಗೌಡ, ಕೆ.ವಿವೇಕಾನಂದ, ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ ಮಂಜು, ಕೆ.ಎಂ.ಉದಯ, ನಗರ ಸಭೆ ಅಧ್ಯಕ್ಷ ಎಂ.ವಿ.ಪ್ರಕಾಶ್, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ, ರಾಜ್ಯ ಆಹಾರ ಆಯೋಗ ಅಧ್ಯಕ್ಷ ಡಾ.ಹೆಚ್ ಕೃಷ್ಣ, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ನಯೀಮ್, ಜಿಲ್ಲಾ ಪಂಚಾಯತ್ ಆಡಳಿತಾಧಿಕಾರಿ ಮನೋಜ್ ಕುಮಾರ್ ಮೀನಾ ಭಾಗವಹಿಸಲಿದ್ದಾರೆ.

ನ.28ರಿಂದ ಕೃಷಿ ಮೇಳ

ಮಂಡ್ಯ, ಅ.8–ಮೂರು ದಿನಗಳ "ಸಮಗ್ರ ಕೃಷಿಯಿಂದ ಸುಸ್ಥಿರತೆ" ಘೋಷ ವಾಕ್ಯದಡಿ ನ.28ರಿಂದ "ಕೃಷಿ ಮೇಳ"ವನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವತಿಯಿಂದ ಆಯೋಜಿಸಲಾಗಿದೆ ಎಂದು ಕೃಷಿ ವಿವಿ ವಿಶೇಷಾಧಿಕಾರಿ ಡಾ.ಹರಿಣಿ ಕುಮಾರ್ ತಿಳಿಸಿದರು.

ಮಂಡ್ಯದ ವಿ.ಸಿ. ಫಾರಂನ ಕೃಷಿ ವಿಜ್ಞಾನ ವಿಶ್ವವಿದ್ಯಾಲಯ ಆವರಣದಲ್ಲಿ ಸಮ್ಮೇಳನ ನಡೆಯಲಿದ್ದು, ವಿವಿ ಅಧೀನದಲ್ಲಿ ಬರುವ ಮೈಸೂರು, ಹಾಸನ, ಕೊಡಗು ಮತ್ತು ಚಾ.ನಗರ ಜಿಲ್ಲೆಗಳ ರೈತರ ಅಭಿವೃದ್ಧಿಗೆ ವಿಶ್ವವಿದ್ಯಾಲಯವು ಶ್ರಮಿಸಲಿದೆ. ಎಂದು ತಿಳಿಸಿದರು.

ಮೈಸೂರು ನಾಗನಹಳ್ಳಿಯಲ್ಲಿ ಸಾವಯವ ಕೃಷಿ ಸಂಶೋಧನಾ ಕೇಂದ್ರ ಮತ್ತು ವಿಸ್ತರಣಾ ಶಿಕ್ಷಣ ಘಟಕವನ್ನು ಈಗ ಕೃಷಿ ಪರಿಸರ ಪ್ರವಾ ಸೋದ್ಯಮ ಕೇಂದ್ರವಾಗಿ ಬದಲಾಯಿಸಲಾಗಿದೆ. ಹಾಸನ ಜಿಲ್ಲೆಯ ಕೃಷಿ ಮಹಾವಿದ್ಯಾಲಯ, ಸಂಶೋಧನಾ ಕೇಂದ್ರ, ಕೃಷಿ ವಿಜ್ಞಾನ ಕೇಂದ್ರ, ಜೈವಿಕ ಉದ್ಯಾನವನ, ಚಾ.ನಗರ ಜಿಲ್ಲೆಯ ಮಹಾವಿದ್ಯಾಲಯ, ವಿಜ್ಞಾನ ಕೇಂದ್ರ, ಮತ್ತು ಕೊಡಗಿನ ಅರಣ್ಯ ಮಹಾವಿದ್ಯಾಲಯ, ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ ಮತ್ತು ವಿಸ್ತರಣಾ ಶಿಕ್ಷಣ ಘಟಕಗಳು ಕೃಷಿ ವಿವಿಅಡಿಯಲ್ಲಿ ಕೆಲಸ ಮಾಡಲಿವೆ ಎಂದರು.

ಗೋಷ್ಠಿಯಲ್ಲಿ ಕೃಷಿ ವಿವಿಯ ಸಂಶೋಧನಾ ನಿರ್ದೇಶಕ ಡಾ.ಜಿ.ಎಂ.ದೇವಗಿರಿ, ವಿಸ್ತರಣಾ ನಿರ್ದೇಶಕ ಡಾ.ರಾಮಚಂದ್ರ, ಶಿಕ್ಷಣ ನಿರ್ದೇಶಕ ಎಂ.ಶಿವಕುಮಾರ್, ಸಹ ನಿರ್ದೇಶಕ ಡಾ ಎ.ಡಿ.ರಂಗನಾಥ್ ಇದ್ದರು.

ಅ.28, ಮಾಲಿನ್ಯ ನಿಯಂತ್ರಣ ಮಂಡಳಿ ಸುವರ್ಣ ಮಹೋತ್ಸವ ಆಚರಣೆ

ಮಂಡ್ಯ, ಅ.8–ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣಮಹೋತ್ಸವವನ್ನು ಅ.28ರಂದು ಆಚರಿಸಲಾಗುವುದೆಂದು ಜಿಲ್ಲಾಧಿಕಾರಿ ಡಾ. ಕುಮಾರ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಕಾರ್ಯಕ್ರಮವನ್ನು ವಿಶ್ವವಿದ್ಯಾನಿಲಯದ ಆವರಣದಲ್ಲಿ ಆಯೋಜಿಸಲಾಗುವುದು. ಉತ್ತಮವಾಗಿ ಮೂಡಿಬರ



ಬೇಕೆಂಬ ನಿಟ್ಟಿನಲ್ಲಿ ಸ್ವಾಗತ ಸಮಿತಿ, ವೇದಿಕೆ ಸಮಿತಿ, ಆಹಾರ ಸಮಿತಿ ಮೊದಲಾದ ವಿವಿಧ ಸಮಿತಿಗಳನ್ನು ರಚಿಸಲಾಗಿರು ತ್ತದೆ. ಅಧಿಕಾರಿಗಳು ತಮ್ಮ ಯಾವುದೇ ಲೋಪವಾಗದಂತೆ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಬೇಕು ಎಂದು ಆದೇಶಿಸಿದರು.

ಜಿಲ್ಲೆಯ ಪ್ರತಿ ತಾಲೂಕುಗಳಲ್ಲೂ ಸುವರ್ಣ ಮಹೋತ್ಸವವನ್ನು ಹಮ್ಮಿಕೊಳ್ಳಲು ತಲಾ 2 ಲಕ್ಷ ರೂ. ಮೊತ್ತವನ್ನು ನೀಡಲಾಗುವುದು. ಇದರಲ್ಲಿ ವಿದ್ಯಾರ್ಥಿಗಳಿಗೆ ಸ್ಪರ್ಧೆಗಳನ್ನು ನಡೆಸಲಾಗುವುದು ಎಂದರು.

ಒಂದನೇ ಪುಟದಿಂದ

ಎರಡು ಸಾವಿರ ಕೋಟಿ ಪರಿಹಾರ ಬಿಡುಗಡೆ

ನೀರಾವರಿ ಬೆಳೆಗೆ 25,500 ರೂ. ಹಾಗೂ ದೀರ್ಘಕಾಲಿಕ ಬೆಳೆ ಹಾನಿಗೆ ಹೆಕ್ಟೇರ್‌ಗೆ 31,000 ರೂ. ಪರಿಹಾರವನ್ನು ರೈತರಿಗೆ ಕೆಲವೇ ದಿನಗಳಲ್ಲಿ ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮಾ ಮಾಡುವುದಾಗಿ ತಿಳಿಸಿದ್ದಾರೆ.

ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಸೆಪ್ಟೆಂಬರ್ ಮೊದಲ ವಾರದಲ್ಲಿ 5.29 ಲಕ್ಷ ಹೆಕ್ಟೇರ್ ಕೃಷಿ ಹಾಗೂ ತೋಟಗಾರಿಕಾ ಬೆಳೆ ಹಾನಿಯಾಗಿತ್ತು. ಮಹಾರಾಷ್ಟ್ರದಲ್ಲಿ ಸುರಿದ ಭಾರೀ ಮಳೆಯಿಂದ ಭೀಮಾ ಜಲಾನಯನ ಪ್ರದೇಶದಲ್ಲಿ ಪ್ರವಾಹ ಉಂಟಾಗಿ 7.24 ಲಕ್ಷ ಹೆಕ್ಟೇರ್ ಬೆಳೆ ನಷ್ಟವಾಗಿದೆ. ಮೊದಲ ಹಂತದಲ್ಲಿ ಅತಿವೃಷ್ಟಿಯಿಂದ ಹಾನಿಗೊಳಗಾದ ಜಿಲ್ಲೆಗಳ ಜಂಟಿ ಸಮೀಕ್ಷೆ ಕಾರ್ಯ ಪೂರ್ಣಗೊಂಡು 5.2 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಕಳೆದುಕೊಂಡ ರೈತರಿಗೆ ಪರಿಹಾರ ನೀಡುವ ಕಾರ್ಯ ಆರಂಭಗೊಂಡಿದೆ.

ಇನ್ನು 10 ದಿನಗಳಲ್ಲಿ ಉಳಿದ ಪ್ರದೇಶಗಳಲ್ಲಿ ಜಂಟಿ ಸಮೀಕ್ಷೆ ಕಾರ್ಯ ಪೂರ್ಣಗೊಂಡ ನಂತರ ಕೇಂದ್ರ ಸರ್ಕಾರ ನಿಗದಿಪಡಿಸಿರುವ ಮೊತ್ತವೂ ಸೇರಿ ರಾಜ್ಯ ಸರ್ಕಾರ ಹೆಚ್ಚುವರಿಯಾಗಿ 8,500 ರೂ. ನೀಡುವುದಾಗಿ ತಿಳಿಸಿದ್ದಾರೆ. ರಾಷ್ಟ್ರದಲ್ಲೇ ರಾಜ್ಯ ಸರ್ಕಾರ ಸಂಪೂರ್ಣ ಪಾರದರ್ಶಕತೆಯೊಂದಿಗೆ ಆಧಾರ್ ಜೋಡಣೆ ಹೊಂದಿದ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಹಾಗೂ ಅತ್ಯಂತ ತ್ವರಿತವಾಗಿ ಹಣ ಜಮಾ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಅ.17, ಕಾವೇರಿ ತೀರ್ಥೋದ್ಭವ

ಕಾವೇರಿ ನೀರಾವರಿ ನಿಗಮದ ವತಿಯಿಂದ ರೂ.2 ಕೋಟಿ ಹಾಗೂ ಜಾತ್ರೆಗೆ ಬರುವ ಭಕ್ತಾದಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಸರ್ಕಾರದ ವತಿಯಿಂದ ಮುಜರಾಯಿ ಇಲಾಖೆಯ ಮೂಲಕ 75 ಲಕ್ಷಗಳ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಈ ವರ್ಷ ಮಧ್ಯಾಹ್ನದ ವೇಳೆ ತೀರ್ಥೋದ್ಭವ ಜರುಗುವುದರಿಂದ ಕಾವೇರಿ ಮಾತೆಯ ದರ್ಶನಕ್ಕಾಗಿ ಅಧಿಕ ಸಂಖ್ಯೆ ಭಕ್ತರು ಆಗಮಿಸುವ ನಿರೀಕ್ಷೆಯಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತದಿಂದ ಪೂರ್ವ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ವೆಂಕಟ್‌ರಾಜಾ ತಿಳಿಸಿದ್ದಾರೆ.

ಶ್ರೀ ಭಗಂಡೇಶ್ವರ ಮತ್ತು ತಲಕಾವೇರಿ ದೇವಾಲಯಗಳಿಗೆ ವಿದ್ಯುತ್ ದೀಪಾಲಂಕಾರ, ಬ್ಯಾರಿಕೇಡ್ ಅಳವಡಿಕೆ, ವೇದಿಕೆ ನಿರ್ಮಾಣ, ಮಳೆಯಿಂದ ರಕ್ಷಣೆಗಾಗಿ ಮೆಟಲ್ ಶೀಟ್, ಪೆಂಡಾಲ್‌ಗಳು, ಹೂವಿನ ಅಲಂಕಾರ, ತೀರ್ಥೋದ್ಭವದ ವೀಕ್ಷಣೆಯ ವೇಳೆ ನೂಕು ನುಗ್ಗಲು ಉಂಟಾಗದಂತೆ ಎಲ್ಲರಿಗೂ ವೀಕ್ಷಣೆಗೆ ಅನುಕೂಲವಾಗುವಂತೆ ಎಲ್‌ಇಡಿ ಪರದೆಗಳು, ಫೋಟೋಗ್ರಫಿ ಮತ್ತು ಭಕ್ತಾದಿಗಳ ಭದ್ರತೆಯ ದೃಷ್ಟಿಯಿಂದ ಅವಶ್ಯವಿರುವ ಕಡೆಗಳಲ್ಲಿ ಸಿ.ಸಿ ಕ್ಯಾಮರಾ ಅಳವಡಿಕೆಗಳಿಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಈಗಾಗಲೇ ಇ–ಟೆಂಡರ್ ಮೂಲಕ ಗುತ್ತಿಗೆದಾರರನ್ನು ಗುರುತಿಸಿ ಕಾರ್ಯಾದೇಶ ನೀಡಲಾಗಿದೆ ಎಂದು ಹೇಳಿದ್ದಾರೆ.

ಭಾಗಮಂಡಲ ಮತ್ತು ತಲಕಾವೇರಿಯಲ್ಲಿ ಅತೀ ಹೆಚ್ಚು ಮಳೆಯಿಂದಾಗಿ ದೇವಾಲಯಗಳ ಗೋಪುರ, ನೆಲಹಾಸು ಅಲಂಕಾರಿಕ ಕಲ್ಲುಗಳ ಶುಚಿತ್ವ, ಸುಣ್ಣ ಬಣ್ಣ ಬಳಿಯುವುದು. ಕಾವೇರಿ ನೀರಾವರಿ ನಿಗಮದ ಮೂಲಕ ತ್ರಿವೇಣಿ ಸಂಗ್ರಮ ಸ್ನಾನಘಟ್ಟದಲ್ಲಿ ಹೂಳೆತ್ತುವುದು, ದೇವಾಲಯದ ಆವರಣಗಳು, ಭಾಗಮಂಡಲಕ್ಕೆ ಸಂಪರ್ಕಿಸುವ ರಸ್ತೆಗಳ ಇಕ್ಕೆಲಗಳಲ್ಲಿ ಕಾಡು ಕಡಿದು ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡುವ ಕೆಲಸ ಪ್ರಗತಿಯಲ್ಲಿದೆ ಎಂದು ಜಿಲ್ಲಾಧಿಕಾರಿ ಮಾಹಿತಿ ನೀಡಿದ್ದಾರೆ.

ಸಾಂಪ್ರದಾಯಿಕ ಉಡುಗೆ ಕಡ್ಡಾಯ

ವಿಐಪಿ ದರ್ಶನಕ್ಕೆ ಸಮಯ ನಿಗದಿ: ಗೋಲ್ಡ್ ಕಾರ್ಡ್ ಪಡೆದವರಿಗೆ ಬೆಳಗ್ಗೆ 7.30ರಿಂದ 10 ಗಂಟೆವರೆಗೆ ಸಮಯ ನಿಗದಿ ಮಾಡಲಾಗಿದೆ.

ವಿಐಪಿಗಳಿಗೆ ಮಾತ್ರ ಬೆಳಿಗ್ಗೆ 10.30ರಿಂದ 12.30ರವರೆಗೆ ದರ್ಶನಕ್ಕೆ ಅವಕಾಶವಿರುತ್ತದೆ. ಶಿಷ್ಟಾಚಾರ ಅನ್ವಯವಾಗುವುದು ಕೇವಲ 5ರಿಂದ 6 ಗಣ್ಯರಿಗೆ ಮಾತ್ರ. ವಿವಿಐಪಿಗಳು ತಮ್ಮ ಜೊತೆಯಲ್ಲಿ ಕೇವಲ ನಾಲ್ಕು ಜನರನ್ನು ಮಾತ್ರ ಕರೆದುಕೊಂಡು ಬರಬಹುದು. ಉಳಿದ ಸಮಯದಲ್ಲಿ ಸಾಮಾನ್ಯ ಭಕ್ತರಿಗೆ ದರ್ಶನಕ್ಕೆ ಅವಕಾಶವಿರುತ್ತದೆ.

ಹೊಸ ವ್ಯವಸ್ಥೆಗಳು: ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಕುಡಿಯುವ ನೀರು, ಮಜ್ಜಿಗೆ ಅಲ್ಲದೆ, ಸುಮಾರು 120 ಶೌಚಾಲಯಗಳ ವ್ಯವಸ್ಥೆ ಮಾಡಲಾಗಿದ್ದು, ಅವುಗಳ ನಿರ್ವಹಣೆಗೆ ಓರ್ವ ಸಿಬ್ಬಂದಿ ನಿಂಯೋಜಿಸಲಾಗಿದೆ. ಆರೋಗ್ಯ ಇಲಾಖೆ, ಅಗ್ನಿಶಾಮಕದಳ, ಪೊಲೀಸ್ ಇಲಾಖೆ ಸೇರಿದಂತೆ ಎಲ್ಲಾ ರೀತಿಯ ಭದ್ರತಾ ವ್ಯವಸ್ಥೆಗಳನ್ನು ಮಾಡಲಾಗಿದೆ.

ಡಿಜಿಟಲ್, ಮನರಂಜನೆ ಆಕರ್ಷಣೆಗಳು: ಆನ್‌ಲೈನ್ ಬುಕ್ಕಿಂಗ್ ಮತ್ತು ವ್ಯಾಟ್ಸಪ್ ಚಾಟ್‌ಬಾಟ್‌ಗಳನ್ನು ಪರಿಚಯಿಸಲಾಗಿದೆ. ಎಐ ಜಾತ್ರೆಯ ಭಾಗವಾಗಿ ವಸ್ತುಪ್ರದರ್ಶನ, ಡಾಗ್ ಶೋ, ಪಾಕ ಸ್ಪರ್ಧೆ, ಹೆಲಿ ಟೂರಿಸಂ ಮತ್ತು ಫಲಪುಷ್ಪ ಪ್ರದರ್ಶನ ಏರ್ಪಡಿಸಲಾಗಿದೆ. ಭಕ್ತರಿಗೆ ಅನುಕೂಲವಾಗುವಂತೆ 12 ಟೂರ್ ಪ್ಯಾಕೇಜ್‌ಗಳನ್ನು ಸಹ ರೂಪಿಸಲಾಗಿದೆ.

ಹಾಸನಾಂಬ ದೇವಾಲಯಕ್ಕೆ ಬರುವವರು ಕಡ್ಡಾಯವಾಗಿ ಸಾಂಪ್ರದಾಯಿಕ ಉಡುಗೆಯಲ್ಲಿ ಬರಬೇಕು. ಅಲ್ಲದೆ, ಸಚಿವರು ಮತ್ತು ವಿಐಪಿಗಳು ತಮ್ಮ ವಾಹನಗಳನ್ನು ಐಬಿಯಲ್ಲಿ ನಿಲ್ಲಿಸಿ, ಜಿಲ್ಲಾಡಳಿತದ ವಾಹನದಲ್ಲಿ ದೇವಾಲಯಕ್ಕೆ ತೆರಳಬೇಕು ಎಂದು ತಿಳಿಸಿದರು. ದೇವಸ್ಥಾನದ ಸುತ್ತಲೂ ಪಾದರಕ್ಷೆಗಳನ್ನು ಬಿಡುವಂತಿಲ್ಲ ಎಂದು ಭಕ್ತಾದಿಗಳಿಗೆ ಜಿಲ್ಲಾಧಿಕಾರಿ ಸೂಚನೆ ನೀಡಿದ್ದಾರೆ.

7 ಮಂದಿ ಸಾವು

ಆತಂಕ ವ್ಯಕ್ತಪಡಿಸಿದ್ದಾರೆ. ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಶಿಕ್ಷಣ ಸಚಿವ ನಾರಾ ಲೋಕೇಶ್ ಈ ಘಟನೆಯನ್ನು ತೀವ್ರ ದುಃಖಕರ ಎಂದು ಬಣ್ಣಿಸಿದ್ದು, ಸರ್ಕಾರ ಈಗಾಗಲೇ ತನಿಖೆ ಆರಂಭಿಸಿದೆ ಎಂದು ತಿಳಿಸಿದ್ದಾರೆ.

ಗಾಯಾಳುಗಳ ಚಿಕಿತ್ಸೆಗೆ ಅಗತ್ಯವಿರುವ ಎಲ್ಲಾ ವ್ಯವಸ್ಥೆಗಳನ್ನು ಮಾಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ ಮತ್ತು ಸರ್ಕಾರವು ಸಂತ್ರಸ್ತರ ಬೆಂಬಲಕ್ಕೆ ನಿಲ್ಲುತ್ತದೆ ಎಂದು ಭರವಸೆ ನೀಡಿದ್ದಾರೆ.

ವೈಎಸ್‌ಆರ್‌ಸಿಪಿ ಅಧ್ಯಕ್ಷ ಮತ್ತು ಮಾಜಿ ಮುಖ್ಯಮಂತ್ರಿ ವೈ.ಎಸ್.ಜಗನ್ ಮೋಹನ್ ರೆಡ್ಡಿ ದುರಂತದ ಬಗ್ಗೆ ತೀವ್ರ ಆಘಾತ ಮತ್ತು ದುಃಖ ವ್ಯಕ್ತಪಡಿಸಿದ್ದಾರೆ. ಮೃತರ ಕುಟುಂಬಗಳಿಗೆ ಅವರು ಹೃತ್ಪೂರ್ವಕ ಸಂತಾಪ ಸೂಚಿಸಿದ್ದಾರೆ ಮತ್ತು ಸಂತ್ರಸ್ತ ಕುಟುಂಬಗಳಿಗೆ ಉದಾರ ಬೆಂಬಲ ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಅಪಘಾತದಲ್ಲಿ ಗಾಯಗೊಂಡವರಿಗೆ ಸಾಧ್ಯವಾದಷ್ಟು ಉತ್ತಮ ವೈದ್ಯಕೀಯ ಆರೈಕೆಯನ್ನು ಖಚಿತಪಡಿಸಿಕೊಳ್ಳುವಂತೆ ಅವರು ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

24 ಗಂಟೆಯಲ್ಲೇ 6 ಮಂದಿ ಸೆರೆ

ವಿಚಾರಣೆಗೊಳಪಡಿಸಿದ್ದಾರೆ. ಆರೋಪಿಗಳೆಲ್ಲರೂ 22ರಿಂದ 28 ವರ್ಷದೊಳಗಿನವರಾಗಿದ್ದಾರೆ. ಕಳೆದ ಮಾರ್ಚ್‌ನಲ್ಲಿ ವರುಣ ಗ್ರಾಮದ ಬಳಿ ಟಿ.ನರಸೀಪುರ ರಸ್ತೆಯಲ್ಲಿರುವ ಲಾಡ್ಜ್‌ವೊಂದರ ಮುಂದೆ ಕೊಲೆಯಾಗಿದ್ದ ಕಾರ್ತಿಕ್ ಸಹಚರನಾಗಿದ್ದ ಈ ವೆಂಕಟೇಶ್‌ನನ್ನು ಹಣಕಾಸು ವೈಷಮ್ಯದ ಹಿನ್ನೆಲೆಯಲ್ಲಿ ಹತ್ಯೆಗೈದಿದ್ದಾರೆ ಎಂಬ ಮಾಹಿತಿ ವಿಚಾರಣೆಯಿಂದ ತಿಳಿದು ಬಂದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.


ಆರೋಪಿಗಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ ಬಳಿಕ ನ್ಯಾಯಾಲಯಕ್ಕೆ ಹಾಜರುಪಡಿಸಲಿದ್ದಾರೆ. ಒಂದು ವೇಳೆ ಹೆಚ್ಚುವರಿ ವಿಚಾರಣೆ ಅಗತ್ಯವಿದ್ದಲ್ಲಿ ಅವರನ್ನು ಪೊಲೀಸ್ ವಶಕ್ಕೆ ನೀಡುವಂತೆ ನ್ಯಾಯಾಧೀಶರಲ್ಲಿ ಮನವಿ ಮಾಡಿಕೊಳ್ಳಲಾಗುವುದು ಎಂದು ತನಿಖಾಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ನಗರ ಪೊಲೀಸ್ ಕಮಿಷನರ್ ಸೀಮಾಲಾಟ್ಕರ್ ಅವರ ನಿರ್ದೇಶನದಂತೆ ಡಿಸಿಪಿಗಳಾದ ಕೆ.ಎಸ್.ಸುಂದರ್ ರಾಜ್, ಆರ್.ಎನ್.ಬಿಂದುಮಣಿ ಮಾರ್ಗದರ್ಶನದಲ್ಲಿ ದೇವರಾಜ ಉಪವಿಭಾಗದ ಎಸಿಪಿ ರಾಜೇಂದ್ರ, ಸಿಸಿಬಿ ಎಸಿಪಿ ಷರೀಫ್ ನೇತೃತ್ವದಲ್ಲಿ ಇನ್ಸ್‌ಪೆಕ್ಟರ್‌ಗಳಾದ ಮಹದೇವಸ್ವಾಮಿ, ಶಬ್ಬೀರ್ ಹುಸೇನ್, ಇತರೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಈ ಪತ್ತೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಮತ್ತೊಂದು ಮೂಲದ ಪ್ರಕಾರ ಎಲ್ಲಾ ಆರೋಪಿಗಳು ಪೊಲೀಸರಿಗೆ ಶರಣಾಗಿದ್ದರು ಎಂದು ಹೇಳಲಾಗಿದೆ.

ಕಾವೇರಿ ತೀರದಲ್ಲಿ ಒತ್ತುವರಿ ತೆರವು

ತೀರದ ಕರಾಬನ್ನು ಗುರುತಿಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಬಫರ್ ಝೋನ್‌ಗಳಲ್ಲಿ ಅಕ್ರಮವಾಗಿ ನಿರ್ಮಾಣಗೊಂಡಿರುವ ಹೋಂ ಸ್ಟೇ ಹಾಗೂ ರೆಸಾರ್ಟ್‌ಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಕಾವೇರಿ ನದಿ ತೀರದಲ್ಲಿ ಪ್ರಭಾವಿಗಳು ರೆಸಾರ್ಟ್, ಹೋಂ ಸ್ಟೇ ನಿರ್ಮಿಸಿ, ಅದನ್ನು ಹೊರ ರಾಜ್ಯದವರಿಗೆ ಲೀಸ್‌ಗೆ ಕೊಟ್ಟು ರಾಜಾರೋಷವಾಗಿ ವ್ಯವಹಾರದಲ್ಲಿ ತೊಡಗಿದ್ದರು. ಮತ್ತೆ ಕೆಲವರಂತೂ ವಾಣಿಜ್ಯ ಮಳಿಗೆಗಳನ್ನೇ ನಿರ್ಮಿಸಿಕೊಂಡು ಬಾಡಿಗೆಗೆ ಬಿಟ್ಟಿದ್ದಾರೆ. ಇಂತಹ ನಿರ್ಮಾಣಗಳಿಗೆ ಸ್ಥಳೀಯ ಸಂಸ್ಥೆಗಳಿಂದ ಅನುಮತಿಯನ್ನೂ ಪಡೆದಿಲ್ಲ. ಅದೇ ವೇಳೆ ಸ್ಥಳೀಯ ಆಡಳಿತವೂ ಕಂಡೂ ಕಾಣದಂತೆ ಇದ್ದರು. ಕೊನೆಗೂ ಉಪ ಲೋಕಾಯುಕ್ತರ ನಿರ್ದೇಶನದ ಮೇರೆಗೆ ಇಂದು ಒತ್ತುವರಿ ತೆರವು ನಡೆದಿದೆಯಾದರೂ, ಇನ್ನೂ ಅನೇಕ ಒತ್ತುವರಿಗಳು ತೆರವುಗೊಳ್ಳಬೇಕಾಗಿದೆ. ಅಧಿಕಾರಿಗಳು ನಾಮ ಕಾವಸ್ಥೆಗಾಗಿ ತೆರವು ಮಾಡಿ ಕೈತೊಳೆದು ಕೊಳ್ಳುತಾರಾ ಇಲ್ಲ ಪೂರ್ಣ ಪ್ರಮಾಣದಲ್ಲಿ ಒತ್ತುವರಿಗಳನ್ನು ತೆರವುಗೊಳಿಸುತ್ತಾರಾ ಕಾದು ನೋಡಬೇಕಿದೆ.

ವಿದೇಶಿ ವಾಹನ ಕಳ್ಳ ಸಾಗಾಣೆ ಪ್ರಕರಣ

ಖ್ಯಾತ ನಟ ಮಮ್ಮುಟ್ಟಿ, ದುಲ್ಕರ್ ಸಲ್ಮಾನ್ ಸೇರಿ ಹಲವರಿಗೆ ಇಡಿ ಸಂಕಷ್ಟ



ದುಲ್ಕರ್ ಸಲ್ಮಾನ್ ಮಮ್ಮುಟ್ಟಿ ಪೃಥ್ವಿರಾಜ್

ಕೊಚ್ಚಿನ್, ಅ.8–ಮಲಯಾಳಂ ಖ್ಯಾತ ನಟರ ಸುತ್ತ ವಿದೇಶಿ ವಾಹನ ಕಳ್ಳಸಾಗಾಣೆ ಪ್ರಕರಣದ ವಿವಾದ ಸುತ್ತಿಕೊಂಡಿದೆ. ಇದೀಗ ಮಲಯಾಳಂ ಚಿತ್ರರಂಗದ ಖ್ಯಾತ ನಟರಾದ ಮಮ್ಮುಟ್ಟಿ, ದುಲ್ಕರ್ ಸಲ್ಮಾನ್, ಪೃಥ್ವಿರಾಜ್ ಮತ್ತು ಅಮಿತ್ ಚಕ್ಕಲಕಲ್ ನಿವಾಸಗಳ ಮೇಲೆ ಇಡಿ ದಾಳಿಯಾಗಿದೆ.

ಭೂತಾನ್‌ನಿಂದ ಐಷಾರಾಮಿ ವಾಹನಗಳ ಕಳ್ಳಸಾಗಣೆ ಮತ್ತು ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ಉಲ್ಲಂಘನೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ತನಿಖೆಯನ್ನು ತೀವ್ರಗೊಳಿಸಿದೆ.

ಈ ಸಂಬಂಧ ಮಲಯಾಳಂ ಚಿತ್ರರಂಗದ ಖ್ಯಾತ ನಟರ ನಿವಾಸಗಳೂ ಸೇರಿದಂತೆ ಕೇರಳ ಮತ್ತು ತಮಿಳುನಾಡಿನ 17 ಸ್ಥಳಗಳಲ್ಲಿ ಶೋಧ ನಡೆಸಲಾಗುತ್ತಿದೆ. ಈ ಕಾರುಗಳ ಅಕ್ರಮ ಆಮದು ಮತ್ತು ನೋಂದಣಿಯಲ್ಲಿ ತೊಡಗಿರುವ ಜಾಲವನ್ನು ಪತ್ತೆಹಚ್ಚುವ ಉದ್ದೇಶದಿಂದ ಈ ಕಾರ್ಯಾಚರಣೆ ನಡೆಯುತ್ತಿದೆ.

ಇಡಿ ಅಧಿಕಾರಿಗಳು ಎರ್ನಾಕುಲಂ, ತ್ರಿಶೂರ್, ಕೋಝಿಕ್ಕೋಡ್, ಮಲಪ್ಪುರಂ, ಕೊಟ್ಟಾಯಂ ಮತ್ತು ಕೊಯಮತ್ತೂರಿನ ವಾಹನ ವ್ಯಾಪಾರಿಗಳನ್ನು ವಿಚಾರಣೆಗೊಳಪಡಿಸಿದ್ದಾರೆ. ಭಾರತ–ಭೂತಾನ್ ಮತ್ತು ಭಾರತ–ನೇಪಾಳ ಮಾರ್ಗಗಳ ಮೂಲಕ ಲ್ಯಾಂಡ್ ಕ್ರೂಸರ್, ಡಿಫೆಂಡರ್ ಮತ್ತು ಮಸೆರಾಟಿ ಮುಂತಾದ ದುಬಾರಿ ಕಾರುಗಳನ್ನು ಅಕ್ರಮವಾಗಿ ತಂದು ನೋಂದಣಿ ಮಾಡುತ್ತಿದ್ದ ಜಾಲವನ್ನು ಬಯಲಿಗೆಳೆಯಲು ಈ ಶೋಧ ನಡೆಸಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಜಾಲವು ನಕಲಿ ದಾಖಲೆಗಳನ್ನು ಸೃಷ್ಟಿಸಿ, ಅರುಣಾಚಲ ಪ್ರದೇಶ, ಹಿಮಾಚಲಪ್ರದೇಶ ಮತ್ತು ಇತರ ರಾಜ್ಯಗಳಲ್ಲಿನ ಆರ್‌ಟಿಒ ನೋಂದಣಿಗಳನ್ನು ಬಳಸಿ ಕಾರುಗಳನ್ನು ಮಾರಾಟ ಮಾಡುತ್ತಿತ್ತು ಎಂದು ತಿಳಿದುಬಂದಿದೆ. ಈ ಹಿಂದೆ ಭೂತಾನ್‌ನಿಂದ ವಾಹನಗಳ ಕಳ್ಳಸಾಗಣೆ ಸಂಬಂಧ ಕಸ್ಟಮ್ಸ್ ಇಲಾಖೆಯೂ ದಾಳಿ ನಡೆಸಿತ್ತು. ಇದೀಗ ಇಡಿ ಅಧಿಕಾರಿಗಳು ಈ ಪ್ರಕರಣದ ತನಿಖೆಯನ್ನು ಮುಂದುವರಿಸಿದ್ದಾರೆ.

ಈ ಹಿಂದೆ, ಸೆ.23ರಂದು ಕಸ್ಟಮ್ಸ್ ಅಧಿಕಾರಿಗಳು ಕೇರಳದಾದ್ಯಂತ ಸುಮಾರು 30 ಕಡೆ ದಾಳಿ ನಡೆಸಿ, ಮೂವರು ನಟರ ನಿವಾಸಗಳೂ ಸೇರಿದಂತೆ 36 ಅತ್ಯಾಧುನಿಕ ಐಷಾರಾಮಿ ವಾಹನಗಳನ್ನು ವಶಪಡಿಸಿಕೊಂಡಿದ್ದರು. ಈ ಪೈಕಿ ದುಲ್ಕರ್ ಸಲ್ಮಾನ್ ಅವರ ಕಾರನ್ನು ಕೂಡ ಸೀಜ್ ಮಾಡಲಾಗಿತ್ತು. ಈ ದಾಳಿಗಳನ್ನು ಫಾರಿನ್ ಎಕ್ಸ್ಚೇಂಜ್ ಮ್ಯಾನೇಜ್‌ಮೆಂಟ್ ಆಕ್ಟ್ ಅಡಿಯಲ್ಲಿ ನಡೆಸಲಾಗುತ್ತಿದೆ. ವಿಶೇಷವಾಗಿ, ಈ ತನಿಖೆಯ ಪ್ರಮುಖ ಕೇಂದ್ರ ಕೇರಳವಾಗಿದೆ. ಆರಂಭಿಕ ತನಿಖೆಗಳ ಪ್ರಕಾರ ಕೋಯಮತ್ತೂರು ಮೂಲದ ಒಂದು ಜಾಲವು ಭಾರತೀಯ ಸೇನೆ, ಯುಎಸ್ ರಾಯಭಾರಿ ಕಚೇರಿ ಮತ್ತು ಎಂಇಎಯಿಂದ ಬಂದಿದೆ ಎಂದು ಹೇಳಲಾಗುವ ನಕಲಿ ದಾಖಲೆಗಳನ್ನು, ಹಾಗೂ ಅರುಣಾಚಲ ಪ್ರದೇಶ, ಹಿಮಾಚಲ ಪ್ರದೇಶ ಮತ್ತು ಇತರ ರಾಜ್ಯಗಳಲ್ಲಿನ ನಕಲಿ ಆರ್‌ಟಿಓ ನೋಂದಣಿಗಳನ್ನು ಬಳಸಿಕೊಂಡಿದೆ. ನಂತರ, ಈ ವಾಹನಗಳನ್ನು ಅವುಗಳ ಮೌಲ್ಯಕ್ಕಿಂತ ಕಡಿಮೆ ಬೆಲೆಗೆ ಚಿತ್ರರಂಗದ ವ್ಯಕ್ತಿಗಳು ಸೇರಿದಂತೆ ಹೆಚ್ಚಿನ ಆದಾಯ ಹೊಂದಿರುವ ವ್ಯಕ್ತಿಗಳಿಗೆ ಮಾರಾಟ ಮಾಡಲಾಗಿದೆ ಎಂದು ಆರೋಪಿಸಲಾಗಿದೆ.

ಇದು ಅನಧಿಕೃತ ವಿದೇಶಿ ವಿನಿಮಯ ವಹಿವಾಟುಗಳು ಮತ್ತು ಹವಾಲಾ ಚಾನೆಲ್‌ಗಳ ಮೂಲಕ ಗಡಿ ದಾಟುವ ಪಾವತಿಗಳನ್ನು ಒಳಗೊಂಡಿದೆ. ಹಣದ ಹಾದಿ ಮತ್ತು ಫಲಾನುಭವಿಗಳ ಜಾಲವನ್ನು ಪತ್ತೆಹಚ್ಚಲು ತನಿಖೆಗಳು ನಡೆಯುತ್ತಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ. ದಾಳಿಗಳಲ್ಲಿ ಕೆಲವು ವಾಹನಗಳನ್ನು ಚಿನ್ನ ಮತ್ತು ಮಾದಕ ದ್ರವ್ಯಗಳ ಕಳ್ಳಸಾಗಣೆಗೆ ಬಳಸಿರಬಹುದು ಎಂಬ ಮಾಹಿತಿಯೂ ಬಹಿರಂಗವಾಗಿದೆ ಎಂದು ಅಂತರಾಷ್ಟ್ರೀಯ ಪಿಟಿಐ ವರದಿ ಮಾಡಿದೆ.

ಮೈಸೂರು ಜಿಲ್ಲೆಯಲ್ಲಿ ಪೌರಕಾರ್ಮಿಕರ ನೇಮಕಾತಿಗೆ ಮನವಿ



ಮೈಸೂರು ಜಿಲ್ಲೆಯಲ್ಲಿ ಖಾಲಿಯಿರುವ ಪೌರಕಾರ್ಮಿಕರ ಹುದ್ದೆಗಳ ನೇಮಕಕ್ಕೆ ಪೌರಕಾರ್ಮಿಕರ ಸಂಘದ ಪದಾಧಿಕಾರಿಗಳು ಡಿಸಿ ಅವರಿಗೆ ಮನವಿ ಸಲ್ಲಿಸಿದರು.

ಮೈಸೂರು, ಅ.8(ಎಸ್‌ಪಿಎನ್)–ರಾಜ್ಯ ಮಹಾನಗರಪಾಲಿಕೆ ಹಾಗೂ ನಗರಸಭೆಗಳಲ್ಲಿ ನೇರಪಾವತಿಯಡಿ ಖಾಲಿ ಇರುವ ಪೌರಕಾರ್ಮಿಕ ಹುದ್ದೆಗಳನ್ನು ನೇಮಕ ಮಾಡುವಂತೆ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದ್ದು, ಮೈಸೂರು ಜಿಲ್ಲೆಯಲ್ಲೂ ಖಾಲಿ ಇರುವ ಪೌರಕಾರ್ಮಿಕರ ನೇಮಕಾತಿಗೆ ಚಾಲನೆ ನೀಡುವಂತೆ ಕರ್ನಾಟಕ ರಾಜ್ಯ ಪೌರಕಾರ್ಮಿಕರ ಸಂಘದ ಪದಾಧಿಕಾರಿಗಳು ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಅವರಿಗೆ ಮನವಿ ಸಲ್ಲಿಸಿದರು.

ಮನವಿ ಸಲ್ಲಿಸಿದ ಬಳಿಕ ಸಂಘದ ಅಧ್ಯಕ್ಷ ಡಿ.ಆರ್.ರಾಜು ಮಾತನಾಡಿ, ರಾಜ್ಯ ಮಹಾನಗರಪಾಲಿಕೆಗಳಲ್ಲಿ ಹಾಗೂ ನಗರ ಸಭೆ, ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿಯಿರುವ ಪೌರಕಾರ್ಮಿಕ ಹುದ್ದೆಗಳನ್ನು ನೇರಪಾವತಿಯಡಿ ಪೌರಕಾರ್ಮಿಕರನ್ನು ನೇಮಕ ಮಾಡುವಂತೆ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಅದರಂತೆ ಪೌರಕಾರ್ಮಿಕರನ್ನು ನೇಮಕ ಮಾಡುವ ಕುರಿತಂತೆ ಮನವಿ ಮಾಡಲಾಗಿದೆ ಎಂದರು.

ರಾಜ್ಯ ಪೌರಕಾರ್ಮಿಕ ಸಂಘದ ಪದಾಧಿಕಾರಿಗಳಾದ ಎಂ.ಮಂಜುನಾಥ್, ಮಂಚಯ್ಯ, ದಿನೇಶ್‌ಕುಮಾರ್, ಹರೀಶ್, ಕಮಲ್, ಅರುಣ್ ಕುಮಾರ್, ಎಲ್‌ಐಸಿ ಮುರುಗೇಶ್, ಬ್ಯಾಂಕ್ ರಂಗಣ್ಣ, ಶಿವು, ಶ್ರೀನಿವಾಸ್ ಸೇರಿದಂತೆ ಹಲವರಿದ್ದರು.

ಅ.17ಕ್ಕೆ ಮೈಸೂರಲ್ಲಿ ವಿಭಾಗೀಯ ಮಟ್ಟದ ಬೃಹತ್ ಉದ್ಯೋಗ ಮೇಳ

- 200ಕ್ಕೂ ಅಧಿಕ ಕಂಪನಿಗಳು ಭಾಗಿ
- ಆನ್‌ಲೈನ್ ಮೂಲಕ ಹೆಸರು ನೋಂದಣಿಗೆ ಅವಕಾಶ



ಮೈಸೂರು ಜಿ.ಪಂ ಸಭಾಂಗಣದಲ್ಲಿ ಜಿ.ಪಂ ಸಿಇಓ ಯುಕೇಶ್‌ಕುಮಾರ್ ಉದ್ಯೋಗ ಮೇಳದ ಸಂಬಂಧ ವಿವಿಧ ಇಲಾಖಾ ಅಧಿಕಾರಿಗಳೊಂದಿಗೆ ಬುಧವಾರ ಪೂರ್ವಾಭಾವಿ ಸಭೆ ನಡೆಸಿದರು.

ಮೈಸೂರು,ಅ.8(ಎಂಟಿವೈ)– ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಅ.17ರಂದು ಆಯೋಜಿಸಿರುವ ಮೈಸೂರು ವಿಭಾಗೀಯ ಬೃಹತ್ ಉದ್ಯೋಗ ಮೇಳದಲ್ಲಿ 200ಕ್ಕೂ ಹೆಚ್ಚು ಕಂಪನಿಗಳು ಪಾಲ್ಗೊಳ್ಳುತ್ತಿದ್ದು, ನಿರುದ್ಯೋಗಿ ಯುವಕ–ಯುವತಿಯರು ಈ ಉದ್ಯೋಗ ಮೇಳದ ಸದುಪಯೋಗ ಮಾಡಿಕೊಳ್ಳಬೇಕು ಎಂದು ಜಿ.ಪಂ ಸಿಇಓ ಯುಕೇಶ್ ಕುಮಾರ್ ಸಲಹೆ ನೀಡಿದ್ದಾರೆ.

ಮೈಸೂರು ಜಿ.ಪಂ ಸಭಾಂಗಣದಲ್ಲಿ ಉದ್ಯೋಗ ಮೇಳದ ಅಂಗವಾಗಿ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಪೂರ್ವಾಭಾವಿ ಸಭೆ ನಡೆಸಿ ಮಾತನಾಡಿದ ಅವರು, ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿರುವ ಉದ್ಯೋಗ ಮೇಳದ ಯಶಸ್ಸಿಗೆ ಅಗತ್ಯ ಕ್ರಮ ಕೈಗೊಳ್ಳಬೇಕು.

ಉದ್ಯೋಗ ಹುಡುಕುತ್ತಿರುವ ನಿರುದ್ಯೋಗಿಗಳಿಗೆ ನೆರವಾಗುವ ನಿಟ್ಟಿನಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿದ್ದು, ಮೈಸೂರು ವಿಭಾಗ ಮಟ್ಟದ ವ್ಯಾಪ್ತಿಯಲ್ಲಿರುವ ನಿರುದ್ಯೋಗಿಗಳು ಮೇಳದಲ್ಲಿ ಸಂದರ್ಶನ ಎದುರಿಸಲು ಆಗಮಿಸಲಿದ್ದಾರೆ. ಈ ಮೇಳದಲ್ಲಿ 200ಕ್ಕೂ ಹೆಚ್ಚು ಕಂಪನಿಗಳು ಪಾಲ್ಗೊಳ್ಳಲಿವೆ ಎಂದರು.

ಮೈಸೂರಲ್ಲಿ ಆಯೋಜಿಸಿರುವ ಈ ಉದ್ಯೋಗ ಮೇಳದಲ್ಲಿ ಸಂದರ್ಶನ ಎದುರಿಸಲು ಈಗಾಗಲೇ ಆನ್‌ಲೈನ್ ಮೂಲಕ 16 ಸಾವಿರ ನಿರುದ್ಯೋಗಿಗಳು ಹೆಸರು ನೋಂದಾಯಿಸಿಕೊಂಡಿದ್ದಾರೆ. ಇನ್ನು ಸಮಯಾವಕಾಶವಿದ್ದು, ನೋಂದಣಿ ಪ್ರಕ್ರಿಯೆಗೆ ಲಿಂಕ್ https://udyogamela.ksdckarnataka.com/user/signup ಅನುಸರಿಸುವಂತೆ ಸಲಹೆ ನೀಡಿದರು.

ಉದ್ಯೋಗ ಮೇಳದಲ್ಲಿ ಪದವಿ, ಸ್ನಾತಕೋತ್ತರ ಪದವಿ, ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಹತೆ ಹೊಂದಿರುವ ನಿರುದ್ಯೋಗಿಗಳು ಪಾಲ್ಗೊಳ್ಳಬಹುದು. ಯುವ ನಿಧಿಯಲ್ಲಿ ನೋಂದಣಿ ಆಗಿರುವವರು ನೋಂದಣಿ ಮಾಡಬಹುದು. ಉದ್ಯೋಗ ಮೇಳದ ಯಶಸ್ಸಿಗೆ ಸಮಿತಿಗಳನ್ನು ರಚಿಸಲಾಗಿದೆ ಎಂದರು.

ಜಿಲ್ಲೆಯಲ್ಲಿ 11 ಸಾವಿರ ನಿರುದ್ಯೋಗಿಗಳು ಯುವನಿಧಿ ಯೋಜನೆಯಡಿ ನೋಂದಣಿ ಆಗಿದ್ದಾರೆ. ಇವರೆಲ್ಲರೂ ಉದ್ಯೋಗ ಮೇಳದಲ್ಲಿ ನೋಂದಣಿ ಮಾಡಿಕೊಳ್ಳುವಂತೆ ಮಾಹಿತಿ ನೀಡಬೇಕು. ಕೇವಲ ನೋಂದಣಿ ಮಾಡಿಕೊಂಡರೆ ಸಾಲದು, ಅವರೆಲ್ಲರೂ ಉದ್ಯೋಗ ಮೇಳದಲ್ಲಿ ಭಾಗವಹಿಸುವಂತೆ ನೋಡಿಕೊಳ್ಳಬೇಕು. ಜಿಲ್ಲೆಯಲ್ಲಿ ಇರುವ ಖಾಸಗಿ ಕಂಪನಿಗಳು ಮೇಳದಲ್ಲಿ ಪಾಲ್ಗೊಳ್ಳುವಂತೆ ಕೈಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರು ಕ್ರಮ ಕೈಗೊಳ್ಳಲು ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರಲ್ಲಿ ಪೊಲೀಸರ ಬಿಗಿ ಗಸ್ತು



ಮೈಸೂರು,ಅ.8(ಆರ್‌ಕೆ)– ಮೈಸೂರಿನ ದಸರಾ ವಸ್ತುಪ್ರದರ್ಶನದ ಬಳಿಯ ಇಟ್ಟಿಗೆಗೂಡಿನಲ್ಲಿ ಮಂಗಳವಾರ ಪೂರ್ವಾಹ್ನ ನಡೆದ ವೆಂಕಟೇಶ್ ಅಲಿಯಾಸ್ ಗಿಲ್ಕಿ ವೆಂಕಟೇಶ್ ಹತ್ಯೆ ಪ್ರಕರಣದ ಹಿನ್ನೆಲೆಯಲ್ಲಿ ಎಚ್ಚೆತ್ತ ಪೊಲೀಸರು ಕಳೆದ ರಾತ್ರಿ ಸೂಕ್ಷ್ಮ ಪ್ರದೇಶಗಳಲ್ಲಿ ವಿಶೇಷ ಗಸ್ತು ಹಮ್ಮಿಕೊಂಡಿದ್ದರು.

ಈ ಕುರಿತು 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿದ ನಗರ ಪೊಲೀಸ್ ಕಮಿಷನರ್ ಸೀಮಾ ಲಾಟ್ಕರ್, ಹಾಡಹಗಲೇ ನಡೆದ ಕೊಲೆಯಿಂದಾಗಿ ಪ್ರತೀಕಾರ ಕೃತ್ಯಗಳು ನಡೆಯದಂತೆ ಮುಂಜಾಗ್ರತಾ ಕ್ರಮವಾಗಿ ಮಂಗಳವಾರ ರಾತ್ರಿ ಮೈಸೂರಿನ ಉದಯಗಿರಿ, ಅಜೀಜ್ ಸೇಠ್‌ನಗರ, ಕ್ಯಾತಮಾರನಹಳ್ಳಿ, ಗಾಯತ್ರಿಪುರಂ, ಎನ್.ಆರ್.ಮೊಹಲ್ಲಾ, ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ ಹಾಗೂ ನಜರ್‌ಬಾದ್‌ನ ಪ್ರಮುಖ ರಸ್ತೆಗಳು, ಜಂಕ್ಷನ್‌ಗಳಲ್ಲಿ ಕಾಲ್ನಡಿಗೆ ಮೂಲಕ ವಿಶೇಷ ಗಸ್ತು ಕಾರ್ಯಾಚರಣೆ ನಡೆಸಿ, ರೌಡಿಗಳು, ಎಂ.ಓ.ಬಿ ಗಳು, ಅನುಮಾನಾಸ್ಪದ ವ್ಯಕ್ತಿಗಳು ಮತ್ತು ವಾಹನಗಳ ತಪಾಸಣೆ ಮಾಡಲಾಯಿತು ಎಂದರು. ಅದೇ ರೀತಿ ಮೈಸೂರಿನ ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಯ ಪಿ.ಜಿ.ಗಳು, ಲಾಡ್ಜ್‌ಗಳು, ಬಾರ್ ಅಂಡ್ ರೆಸ್ಟೋರೆಂಟ್‌ಗಳ ಬಳಿ ತಡರಾತ್ರಿ ಅನುಮಾನಾಸ್ಪದವಾಗಿ ಕಂಡುಬಂದ ವ್ಯಕ್ತಿಗಳನ್ನು ವಿಚಾರಣೆ ನಡೆಸಿ ಮಾಹಿತಿ ಸಂಗ್ರಹಿಸಲಾಗಿದ್ದು, ಎಲ್ಲೆಡೆ ಪೊಲೀಸ್ ಕಣ್ಗಾವಲು ಸಾದರಪಡಿಸಿದ್ದೇವೆ. ಇದರಿಂದ ಅಹಿತಕರ ಘಟನೆಗಳನ್ನು ತಡೆಗಟ್ಟುವುದು ಸಾಧ್ಯವಿದೆ ಎಂದು ಅವರು ತಿಳಿಸಿದರು.

ಸಿಜೆಐ ಮೇಲೆ ಶೂ ಎಸೆಯಲೆತ್ನಿಸಿದ ಪ್ರಕರಣ

ವಕೀಲ ರಾಕೇಶ್ ಕಿಶೋರ್‌ಗೆ ಕಾನೂನಾತ್ಮಕ ಶಿಕ್ಷೆಗೆ ಆಗ್ರಹ

ಮೈಸೂರು, ಅ.8–ದೇಶದ ಅತ್ಯುನ್ನತ ನ್ಯಾಯಪೀಠ ಸರ್ವೋಚ್ಛ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಗವಾಯಿ ಅವರ ಮೇಲೆ ನ್ಯಾಯಾ ಲಯದ ಪ್ರಕ್ರಿಯೆಗಳು ನಡೆಯುವ ಸಂದರ್ಭದಲ್ಲೇ ಹಿರಿಯ ವಕೀಲ ರಾಕೇಶ್ ಕಿಶೋರ್ ಶೂ ತೂರಲೆತ್ನಿಸಿರುವುದು ಅಕ್ಷಮ್ಯ ಅಪರಾಧ. ಇಡೀ ದೇಶವೇ ತಲೆತಗ್ಗಿಸುವಂಥ ಒಂದು ಸಾಂವಿಧಾನಿಕ ಅಪಮಾನದ ವಿಚಾರ ಎಂದು ಭೀಮ ಬಲ ಬಳಗ ಖಂಡಿಸಿದೆ.

ದಲಿತ ಸಮುದಾಯಕ್ಕೆ ಸೇರಿದ ಸರ್ವೋಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ಈ ರೀತಿ ಅವಮಾನ ಮಾಡಿದ ವ್ಯಕ್ತಿ ರಾಕೇಶ್ ಕಿಶೋರ್‌ನನ್ನು ಕಾನೂನಾತ್ಮಕವಾಗಿ ತನಿಖೆಗೆ ಒಳಪಡಿಸಿ ಆತನಿಗೆ ಸೂಕ್ತ ಕಾನೂನಿನಡಿ ಶಿಕ್ಷೆಯನ್ನು ನೀಡಬೇಕೆಂದು ಆಗ್ರಹಿಸಿದೆ.

ಈ ಘಟನೆ ನಡೆದ ನಂತರವೂ ರಾಕೇಶ್ ಕಿಶೋರ್ ನನಗೆ ಆ ವಿಚಾರವಾಗಿ ಯಾವುದೇ ಪಶ್ಚಾತ್ತಾಪವಿಲ್ಲ. ನಾನು ವಿಷ್ಣುವಿನ ಪ್ರೇರಣೆಯಿಂದಲೇ ಈ ಕೃತ್ಯ ಎಸಗಿದೆ ಎಂದು ರಾಜಾರೋಷವಾಗಿ ಸಮರ್ಥಿಸಿಕೊಂಡಿದ್ದಾರೆ. ದೇಶದಲ್ಲಿ ಯಾವುದೇ ಉನ್ನತ ಸ್ಥಾನವನ್ನು ತಮ್ಮ ಯೋಗ್ಯತೆಯ ಮೂಲಕ ಗಳಿಸಿದರೂ ದಲಿತರಿಗೆ ರಕ್ಷಣೆ ಇಲ್ಲ ಎಂಬುದು ಈ ಘಟನೆಯಿಂದ ಸಾಬೀತಾಗಿದೆ. ಇದೇ ಸ್ಥಾನದಲ್ಲಿ ಮೇಲ್ವರ್ಗದ ವ್ಯಕ್ತಿ ಇದ್ದಿದ್ದರೆ ಈ ವಕೀಲನಿಗೆ ಶೂ ಎಸೆಯುವ ಧೈರ್ಯ ಮಾಡಲು ಸಾಧ್ಯವಾಗುತ್ತಿತ್ತೇ? ಎಂದು ಪ್ರಶ್ನಿಸಿರುವ ಬಳಗ, ಈ ಒಂದು ದುಷ್ಕೃತ್ಯವು ದೇಶದ ಅಪರಾಧಿಗಳಿಗೆ ಪ್ರೇರಣೆಯಾಗಿ ಮುಂದಿನ ದಿನಗಳಲ್ಲಿ ನ್ಯಾಯಾಂಗಕ್ಕೆ ಬೆಲೆ ಇಲ್ಲದಂತಾಗಬಹುದು. ಹಲವಾರು ಅಪರಾಧಿಗಳು ತಮ್ಮ ಪರವಾಗಿ ತೀರ್ಪು ಬರಲಿಲ್ಲವೆಂಬ ಕಾರಣಕ್ಕೆ ಈ ರೀತಿಯ ದುಷ್ಕೃತ್ಯಗಳನ್ನು ಮಾಡಲು ಮುಂದಾಗಬಹುದು. ದೇಶದ ಸಾಮಾನ್ಯ ಪ್ರಜೆಗಳು, ನ್ಯಾಯಾಲಯದ ಮೇಲಿರುವ ಗೌರವ ಹಾಗೂ ನಂಬಿಕೆಯನ್ನು ಕಳೆದುಕೊಳ್ಳಬಹುದು. ಹಾಗಾಗಿ ಆತನಿಗೆ ನ್ಯಾಯ ಸಮ್ಮತವಾದ ಉಗ್ರ ಶಿಕ್ಷೆಯನ್ನು ನೀಡಬೇಕೆಂದು ಭೀಮ ಬಲ ಬಳಗವು ಒತ್ತಾಯಿಸಿದೆ.

ಈ ಸಂಬಂಧ ಭೀಮ ಬಲ ಬಳಗದ ಸಂಚಾಲಕ ಪರಮಾನಂದ. ಎಂ.ಎಸ್. ಸಿಂಡಿಕೇಟ್ ಸದಸ್ಯರಾದ ನಟರಾಜ್ ಶಿವಣ್ಣ, ಮಹೇಶ್ ಮದ್ದೂರು, ಗಣೇಶ್ ಮೂರ್ತಿ, ನಿವೃತ್ತ ಪ್ರಾಂಶುಪಾಲರಾದ ಮಲ್ಲಿಕಾರ್ಜುನಸ್ವಾಮಿ, ಕೃಷ್ಣಯ್ಯ ಶರತ್ ಗಾಂಧಿನಗರ, ಕಾರ್ತಿಕ್ ಮರಿಯಪ್ಪ ವೇದಾವತಿ, ಅಶ್ವಿನಿ, ಪುಟ್ಟಮ್ಮಣಿ ಪಲ್ಲವಿ ಬೇಗಂ, ಸುರೇಶ್ ನಾಡನಹಳ್ಳಿ ವಕೀಲ ಉಮಾಶಂಕರ್, ಸಾಮ್ರಾಟ್, ಸಂದೇಶ್ ಮಣಗಳ್ಳಿ, ಹೂವಿನ ಸಿದ್ದು, ಪ್ರತಾಪ್, ಸಿಎಂ ಮಹಾದೇವಯ್ಯ, ಶಿವಯ್ಯ ನವೀನ್ ಮೌರ್ಯ ಪತ್ರಿಕಾ ಪ್ರಕಟಣೆ ಹೊರಡಿಸಿದ್ದಾರೆ.

ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಮೇಲೆ ಶೂ ಎಸೆಯಲೆತ್ನಿಸಿದ ಪ್ರಕರಣ

ಮೈಸೂರಲ್ಲಿ ವಕೀಲರು ಕಲಾಪ ಬಹಿಷ್ಕರಿಸಿ ಪ್ರತಿಭಟನೆ



ಮೈಸೂರಿನಲ್ಲಿ ನ್ಯಾಯಾಲಯದ ಕಲಾಪ ಬಹಿಷ್ಕರಿಸಿ ನ್ಯಾಯಾಲಯ ಮುಂಭಾಗದ ಗಾಂಧಿ ಪುತ್ಥಳಿ ಬಳಿ ಜಮಾವಣೆಗೊಂಡ ವಕೀಲರು ಪ್ರತಿಭಟನೆ ನಡೆಸಿದರು.

ಮೈಸೂರು,ಅ.8(ಜಿಎ)–ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ವಕೀಲರೊಬ್ಬರು ಶೂ ಎಸೆಯಲೆತ್ನಿಸಿರುವುದನ್ನು ಖಂಡಿಸಿ ಜಿಲ್ಲಾ ವಕೀಲರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ನಗರದಲ್ಲಿ ನ್ಯಾಯಾಲಯದ ಕಲಾಪ ಬಹಿಷ್ಕರಿಸಿ ನ್ಯಾಯಾಲಯ ಮುಂಭಾಗದ ಗಾಂಧಿ ಪುತ್ಥಳಿ ಬಳಿ ಜಮಾವಣೆಗೊಂಡ ವಕೀಲರು ಶೂ ತೂರಲೆತ್ನಿಸಿದ ವಕೀಲ ರಾಕೇಶ್ ಕಿಶೋರ್ ಭಾವಚಿತ್ರ ಹರಿದು, ಸುಟ್ಟು ಹಾಕಿ ಆಕ್ರೋಶ ವ್ಯಕ್ತಪಡಿಸಿ, ಕೂಡಲೇ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಈ ವೇಳೆ ವಕೀಲರ ಸಂಘದ ಅಧ್ಯಕ್ಷ ಲೋಕೇಶ್ ಮಾತನಾಡಿ, ಕಲಾಪ ನಡೆಯುತ್ತಿದ್ದ ಸಂದರ್ಭದಲ್ಲಿ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ಮೇಲೆ ಹಿರಿಯ ವಕೀಲ ರಾಕೇಶ್ ಕಿಶೋರ್ ಶೂ ಎಸೆಯಲೆತ್ನಿಸಿರುವುದು ಖಂಡನೀಯ. ವಕೀಲರು ನ್ಯಾಯಾಂಗ ವ್ಯವಸ್ಥೆಯ ಹೃದಯಭಾಗ. ಇದು ನ್ಯಾಯಾಂಗ ವ್ಯವಸ್ಥೆಗೆ, ಸಂವಿಧಾನಕ್ಕೆ ಆಗಿರುವ ಗಾಯ ಎಂದು ಕಿಡಿಕಾರಿದರು. ವಕೀಲರ ಸಂಘದಲ್ಲಿ ಸಭೆ ನಡೆಸಿ ರಾಕೇಶ್ ಕಿಶೋರ್ ಕೃತ್ಯ ಖಂಡಿಸಲಾಗಿದೆ. ನ್ಯಾಯಮೂರ್ತಿ ಗವಾಯಿ ಅವರು ಈ ಘಟನೆಯಿಂದ ಧೃತಿಗೆಡಬಾರದು, ಅವರೊಂದಿಗೆ ನಾವಿದ್ದೇವೆ. ರಾಕೇಶ್ ಕಿಶೋರ್ ಅವರನ್ನು ಕೂಡಲೇ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು. ಈ ಸಂಬಂಧ ರಾಷ್ಟ್ರಪತಿ, ಪ್ರಧಾನಿ, ಗೃಹಸಚಿವರಿಗೆ ಪತ್ರ ಬರೆಯಲಾಗಿದೆ. ಅವರನ್ನು ಯಾರಾದರು ರಕ್ಷಣೆ ಮಾಡಲು ಪ್ರಯತ್ನಿಸಿದರೆ ಉಗ್ರ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಸಂಘದ ಉಪಾಧ್ಯಕ್ಷ ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಚರಣ್ ರಾಜ್‌ಕುಮಾರ್, ಸುಧೀರ್ ಸೇರಿದಂತೆ ನೂರಾರು ವಕೀಲರು ಪಾಲ್ಗೊಂಡಿದ್ದರು.

ಕೆಪಿಎ ಮಹಾ ರಕ್ತದಾನ ಶಿಬಿರ: 130 ಯೂನಿಟ್ ರಕ್ತ ಸಂಗ್ರಹ



ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ರಕ್ತದಾನ ಶಿಬಿರ ನಡೆಯಿತು

ಮೈಸೂರು, ಅ.8(ಎಂಕೆ)– ಮಹಾತ್ಮ ಗಾಂಧೀಜಿ ಹಾಗೂ ಮಹರ್ಷಿ ವಾಲ್ಮೀಕಿ ಜಯಂತಿ ಅಂಗವಾಗಿ ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿ(ಕೆಪಿಎ) ಯಲ್ಲಿ 'ಕೆಪಿಎ ಮಹಾ ರಕ್ತದಾನ ಶಿಬಿರ' ನಡೆಯಿತು.

ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ಬುನಾದಿ ತರಬೇತಿ ಪಡೆಯುತ್ತಿರುವ 46ನೇ ತಂಡದ ಪಿಎಸ್‌ಐ ಪ್ರಶಿಕ್ಷಣಾರ್ಥಿಗಳ ಪ್ರೈಡ್ ಇನ್ ಸರ್ವೀಸ್ ಕ್ಲಬ್ ತಂಡದ ಸದಸ್ಯರು, ಭಾರತೀಯ ರೆಡ್ ಕ್ರಾಸ್ ಸೊಸೈಟಿ ಹಾಗೂ ಕೆ.ಆರ್ ಆಸ್ಪತ್ರೆ ರಕ್ತನಿಧಿ ಸಹಯೋಗದೊಂದಿಗೆ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ 130 ಯೂನಿಟ್ಸ್ (ಸುಮಾರು 45 ಲೀಟರ್) ರಕ್ತ ಸಂಗ್ರಹವಾಯಿತು.

ರಕ್ತದಾನ ಶಿಬಿರ ಉದ್ಘಾಟಿಸಿದ ಕೆಪಿಎ ನಿರ್ದೇಶಕ ಎಸ್.ಎಲ್.ಚನ್ನಬಸವಣ್ಣ ಮಾತನಾಡಿ, ರಕ್ತದಾನದ ಮೂಲಕ ನಾವು ಅಪಘಾತದಲ್ಲಿ ಗಾಯಗೊಂಡವರು ಹಾಗೂ ವಿವಿಧ ಮಾರಣಾಂತಿಕ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಜೀವದಾನ ಮಾಡಿದಂತಾಗುತ್ತದೆ. ಇದು ಮಾನವೀಯತೆ ಎತ್ತಿ ಹಿಡಿಯುವ ಪೊಲೀಸರ ಕರ್ತವ್ಯದ ಒಂದು ಭಾಗವಾಗಿದೆ ಎಂದು ಹೇಳಿದರು.

ಮಹಾತ್ಮ ಗಾಂಧೀಜಿ ಹಾಗೂ ಮಹರ್ಷಿ ವಾಲ್ಮೀಕಿಯವರ ಜಯಂತಿ ಅಂಗವಾಗಿ ಇಂತಹ ಸೇವಾ ಕಾರ್ಯಕ್ರಮ ಆಯೋಜನೆ ಮಾಡಿರುವ ಪ್ರಶಿಕ್ಷಣಾರ್ಥಿಗಳ ಪ್ರೈಡ್ ಇನ್ ಸರ್ವೀಸ್ ಕ್ಲಬ್ ಸದಸ್ಯರ ಕಾರ್ಯ ಶ್ಲಾಘನೀಯವಾದುದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ರೆಡ್ ಕ್ರಾಸ್ ಸೊಸೈಟಿ ಕಾರ್ಯದರ್ಶಿ ವೈದ್ಯನಾಥ ಮಾತನಾಡಿ, ಯಾವುದೇ ತಾರತಮ್ಯವಿಲ್ಲದೆ ನೀಡಬಹುದಾದ ಶ್ರೇಷ್ಠದಾನವೇ ರಕ್ತದಾನ. ಇದರಿಂದ ಅಮೂಲ್ಯ ಜೀವಗಳನ್ನು ಉಳಿಸಬಹುದು ಎಂದರು. ಕೆಪಿಎ ಸಹಾಯಕ ನಿರ್ದೇಶಕ ಎಸ್.ಎನ್. ಸಂದೇಶ್‌ಕುಮಾರ್, ಹೆಚ್.ಎಸ್. ರೇಣುಕಾರಾಧ್ಯ, ಎಸ್.ವೆಂಕಟೇಶ್, ಎಂ.ಹೆಚ್. ಖಾನ್, ಎನ್.ಸುದರ್ಶನ, ಕೆ.ಪಿ.ಎ ವೈದ್ಯ ಡಾ.ಕರುಣಾಕರ ಹಾಗೂ ಕೆ.ಆರ್ ಆಸ್ಪತ್ರೆ ವೈದ್ಯರಾದ ಡಾ.ಕುಸುಮಾ ಇದ್ದರು.

ಬಿ.ಇಡಿ ಕೋರ್ಸ್‌ಗೆ ಅರ್ಜಿ ಆಹ್ವಾನ

ಮೈಸೂರು: 2025–26ನೇ ಸಾಲಿನಲ್ಲಿ 2 ವರ್ಷದ ಬಿ.ಇಡಿ ಕೋರ್ಸ್‌ನ ವ್ಯಾಸಂಗಕ್ಕಾಗಿ ರಾಜ್ಯದ ಸರ್ಕಾರಿ ಮತ್ತು ಮಾನ್ಯತೆ ಪಡೆದ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಬಿ.ಇಡಿ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳ ದಾಖಲಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು https://schooleducation.karnataka.gov.in ಮೂಲಕ ಅ.4 ರಿಂದ ನ.3ರವರೆಗೆ ಅರ್ಜಿ ಸಲ್ಲಿಸಬಹುದು. ಇದರಲ್ಲಿ ಅರ್ಹತೆ, ಮೀಸಲಾತಿ, ಶುಲ್ಕ ಇತ್ಯಾದಿ ವಿವರ ಮತ್ತು ಇದರೊಂದಿಗೆ ಜಿಲ್ಲಾವಾರು ಬಿ.ಇಡಿ ಶಿಕ್ಷಣ ಸಂಸ್ಥೆಗಳ ಪಟ್ಟಿ ಹಾಗೂ ಇತರೆ ಸೂಚನೆಗಳನ್ನು ನೀಡಲಾಗಿದ್ದು, ಕ್ರಮಬದ್ಧವಾಗಿ ಭರ್ತಿ ಮಾಡಿ ಅರ್ಜಿ ಸಲ್ಲಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಾಳೆಯಿಂದ ಶ್ರೀ ಬನ್ನಿ ಮಹಾಕಾಳೇಶ್ವರಿ, ಶ್ರೀ ಆಯಹಳ್ಳಿ ಮಾಕಮ್ಮ, ಮಾಲಮ್ಮ ಜಾತ್ರೆ

ಮೈಸೂರು,ಅ.8(ಎಂಕೆ)–ಮೈಸೂರಿನ ಕುರುಬಾರಹಳ್ಳಿ (ಸಿದ್ಧಾರ್ಥನಗರದ ಸಿಐಟಿಬಿ ಛತ್ರಕ್ಕೆ ಹೊಂದಿಕೊಂಡಂತೆ) ಶ್ರೀ ಬನ್ನಿಮಹಾಕಾಳೇಶ್ವರಿ, ಶ್ರೀ ಆಯರಳ್ಳಿ ಮಾಕಮ್ಮ ಹಾಗೂ ಶ್ರೀ ಮಾಲಮ್ಮನವರ ಜಾತ್ರಾ ಮಹೋತ್ಸವ ಅ.10ರಿಂದ 12ರವರೆಗೆ ನಡೆಯಲಿದೆ. ಅ.10ರ ಶುಕ್ರವಾರ ರಾತ್ರಿ 7 ಗಂಟೆಗೆ ಘಟೆ ಪೂಜೆಯೊಂದಿಗೆ ಜಾತ್ರಾ ಮಹೋತ್ಸವ ಆರಂಭವಾಗಲಿದ್ದು, ಅ.12ರ ಭಾನುವಾರ ಬೆಳಗ್ಗೆ 9 ಗಂಟೆಗೆ ವಾಹನೋತ್ಸವ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಶಾಸಕರು, ಸಂಸದರು, ಜನಪ್ರತಿನಿಧಿಗಳು, ಮುಖಂಡರು ಜಾತ್ರಾ ಮಹೋತ್ಸವ ಭಾಗವಹಿಸಲಿದ್ದಾರೆ ಎಂದು ಶ್ರೀ ಬನ್ನಿಮಹಾಕಾಳೇಶ್ವರಿ, ಆಯರಳ್ಳಿ ಮಾಕಮ್ಮ ದೇವಸ್ಥಾನ ಟ್ರಸ್ಟ್ ಪ್ರಕಟಣೆ ತಿಳಿಸಿದೆ.

ಅಲೆಮಾರಿ 59 ಜಾತಿಗೆ ಮೀಸಲಾತಿ ಕಲ್ಪಿಸಲು ಆಗ್ರಹಿಸಿ ರಾಜ್ಯಾದ್ಯಂತ ಪ್ರತಿಭಟನೆ

ಮೈಸೂರು,ಅ.8(ಜಿಎ)– ಅಲೆಮಾರಿ 59 ಜಾತಿಗಳಿಗೆ ಶೇ.1ರಷ್ಟು ಮೀಸಲಾತಿಗೆ ಆಗ್ರ ಹಿಸಿ ರಾಜ್ಯಾದ್ಯಂತ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರು, ನಾನಾ ಘೋಷಣೆ ಕೂಗಿದರು. ನಂತರ, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅವರಿಗೆ ಮನವಿ ಪತ್ರವನ್ನು ಸಲ್ಲಿಸಿದರು.

59 ಅಲೆಮಾರಿ ಜಾತಿಗಳಿಗೆ ಕೂಡಲೇ ಪ್ರತ್ಯೇಕ ಮೀಸಲಾತಿ ನೀಡಬೇಕು. ಪರಿಶಿಷ್ಟ ಜಾತಿ ಪಟ್ಟಿಯಲ್ಲಿನ ಆದಿ ಕರ್ನಾಟಕ, ಆದಿ ಆಂಧ್ರ, ಆದಿದ್ರಾವಿಡ ಜಾತಿಗಳ ಮೂಲ ಜಾತಿಗಳನ್ನು ಗುರುತಿಸಿ ಆಯಾ ಪ್ರವರ್ಗಕ್ಕೆ ಸೇರಿಸುವ ಮೂಲಕ ಗೊಂದಲ ಸರಿಪಡಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪರಿಶಿಷ್ಟಜಾತಿ, ಪರಿಶಿಷ್ಟ ವರ್ಗದ ಮೀಸಲಾತಿಯನ್ನು ಶೇ.30ಕ್ಕೆ ಹೆಚ್ಚಿಸಬೇಕು. ಎಸ್‌ಸಿ,ಎಸ್‌ಟಿ ವರ್ಗಗಳ ಮೀಸಲಾತಿ ಪಟ್ಟಿಗೆ ಮತ್ತಷ್ಟು ಜಾತಿಗಳನ್ನು ಸೇರಿಸುವ ರಾಜಕೀಯ ಹುನ್ನಾರ ಕೈಬಿಡಬೇಕು. ಮೀಸಲಾತಿಯನ್ನು ಸಂವಿಧಾನದ ಶೆಡ್ಯೂಲ್ 9ರಲ್ಲಿ ಸೇರಿಸಿ ಮೀಸಲಾತಿಯನ್ನು ರಕ್ಷಿಸಬೇಕು. ಖಾಸಗಿ ಔದ್ಯೋಗಿಕ ವಲಯದಲ್ಲಿ ಮೀಸಲಾತಿ ಜಾರಿಯಾಗಲಿ ಎಂದು ಆಗ್ರಹಿಸಿದರು.

ಭ್ರಷ್ಟಾಚಾರದ ರಿಯಲ್ ಎಸ್ಟೇಟ್ ದಂಧೆಯಾಗಿರುವ ಸಿಆರ್‌ಇ ಸೆಲ್‌ನ್ನು ಪರಿಷ್ಕರಿಸಿ ದಲಿತರ ಮೇಲಿನ ದೌರ್ಜನ್ಯ ತಡೆಗಟ್ಟಬೇಕು. ಪಿಟಿಸಿಎಲ್ ಕಾಯ್ದೆಗೆ ಸಮಗ್ರ ತಿದ್ದುಪಡಿ ಮಾಡಿ ದಲಿತರಿಗೆ ಮಂಜೂರಾಗಿರುವ ಜಮೀನನ್ನು ಪರಭಾರೆ ಮಾಡದಂತೆ ಹಾಗೂ ಪರಭಾರೆಯಾಗಿರುವ ಜಮೀನು ಹಿಂತಿರುಗಿಸಬೇಕು. ವರುಣ ಹೋಬಳಿ ವಾಜಮಂಗಲ ಸರ್ವೆ ನಂ.96ರ ಜಮೀನುಗಳಲ್ಲಿ 1946ರಿಂದ ಉಳುಮೆ ಮಾಡುತ್ತಿರುವ ಪರಿಶಿಷ್ಟಜಾತಿ ರೈತರಿಗೆ ಖಾಯಂ ಸಾಗುವಳಿ ಚೀಟಿ ನೀಡಿ, ಮೈಸೂರಿಂದ 10 ಕಿ.ಮೀ ವ್ಯಾಪ್ತಿಯೊಳಗೆ ಬರುವ ಕಾನೂನು ತೊಡಕುಗಳನ್ನು ನಿವಾರಿಸಲು ವಿಶೇಷ ಪ್ರಕರಣವೆಂದು ಪರಿಗಣಿಸುವಂತೆ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಶಂಕರ್, ಗೌರವಾಧ್ಯಕ್ಷ ರಾಯನಹಳ್ಳಿ ಸ್ವಾಮಿ, ಸ್ವಾಮಿ, ಶ್ರೀನಿವಾಸ, ಬಾಲರಾಜು, ಮಂಜುನಾಥ್, ಶಿವಮ್ಮ, ಹನುಮಂತು, ರಾಚಯ್ಯ, ಶಂಕರ್, ಶೇಖರ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಅಲೆಮಾರಿ ಜಾತಿಗಳಿಗೆ ಮೀಸಲಾತಿಗೆ ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲೆತ್ನಿಸಿದ ಪ್ರಕರಣ

ಮೈಸೂರು ಡಿಸಿ ಕಚೇರಿ ಬಳಿ ದಸಂಸ ಪ್ರತಿಭಟನೆ



ದಲಿತ ಸಂಘರ್ಷ ಸಮಿತಿ ವತಿಯಿಂದ ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಅ.8(ಜಿಎ)–ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ವಕೀಲರೊಬ್ಬರು ಶೂ ಎಸೆಯಲೆತ್ನಿಸಿದ ಪ್ರಕರಣ ಖಂಡಿಸಿ ದಲಿತ ಸಂಘರ್ಷ ಸಮಿತಿ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಹಿರಿಯ ವಕೀಲ ರಾಕೇಶ್ ಕಿಶೋರ್ ಮೊಘಲರ ಕಾಲದಲ್ಲಿ ಭಗ್ನಗೊಂಡ ವಿಷ್ಣುಮೂರ್ತಿಯ ಪುನರ್ ನವೀಕರಣಕ್ಕೆ ಆದೇಶ ನೀಡಬೇಕೆಂದು ಅರ್ಜಿ ಸಲ್ಲಿಸಿದ್ದರು. ಈ ವಿಚಾರದಲ್ಲಿ ನ್ಯಾಯಮೂರ್ತಿ ಬಿ.ಆರ್. ಗವಾಯಿ ಈ ಪ್ರಕರಣ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ. ಇದನ್ನು ಆರ್ಕಿಲಾಜಿಕಲ್ ಸರ್ವೆ ಆಫ್ ಇಂಡಿಯಾ ಇಲಾಖೆಯಲ್ಲಿ ಪರಿಹರಿಸಿಕೊಳ್ಳಿ ಎಂದು ಹೇಳಿದ್ದರು. ಇದರಿಂದ ಕುಪಿತಗೊಂಡ ರಾಕೇಶ್ ಕಿಶೋರ್ ದುರುದ್ದೇಶ ಪೂರ್ವಕವಾಗಿ, ಜಾತಿ ಶ್ರೇಷ್ಠತೆಯ ವ್ಯಸನಕ್ಕೆ ಒಳಗಾಗಿ ನ್ಯಾಯಮೂರ್ತಿಗಳತ್ತ ಶೂ ತೂರಲೆತ್ನಿಸಿರುವುದು ಅಕ್ಷಮ್ಯ ಅಪರಾಧ. ಈ ಸಂದರ್ಭದಲ್ಲಿ ತನ್ನ ರಕ್ಷಣೆಗಾಗಿ ಸನಾತನ ಎಂಬ ಪದ ಬಳಕೆ ಮಾಡಿಕೊಂಡು ಧರ್ಮದ ಲೇಪ ಹಚ್ಚಿ ಈ ರೀತಿಯ ಕೃತ್ಯ ಎಸಗಿರುವ ವಕೀಲರು ಪಶ್ಚಾತಾಪ ಪಡುವ ಬದಲಿಗೆ ಈ ಕೃತ್ಯಕ್ಕೆ ದೇವರ ಪ್ರೇರೇಪಣೆ ಇದೆ ಎಂದು ಸಂದರ್ಶನವೊಂದರಲ್ಲಿ ಸಮರ್ಥಿಸಿಕೊಂಡಿದ್ದಾರೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ, ಭಾರತ ದೇಶ ಬುಲ್ಡೋಜರ್ ನಿಯಮದಿಂದ ನಡೆಯುವುದಿಲ್ಲ. ಬದಲಾಗಿ ಸಂವಿಧಾನದಡಿಯಲ್ಲಿ ಕಾನೂನಾತ್ಮಕವಾಗಿ ನಡೆಯುತ್ತಿದೆ ಎಂಬ ಹೇಳಿಕೆ ಧಿಕ್ಕರಿಸಿರುವ ರಾಕೇಶ್ ಕಿಶೋರ್ ವಿಕೃತ ಮನಸ್ಸಿನವರಾಗಿರುವುದರಿಂದ ಇದೊಂದು ಆಕಸ್ಮಿಕ ಪ್ರಕರಣವಾಗಿರದೆ ಪೂರ್ವಯೋಜಿತ ಕೃತ್ಯವಾಗಿದೆ ಎಂಬುದು ಸ್ಪಷ್ಟವಾಗಿದೆ. ಈ ಕೃತ್ಯ ದಲಿತ ಸಮುದಾಯದ ವ್ಯಕ್ತಿಗಳು ಉನ್ನತ ಹುದ್ದೆಯಲ್ಲಿರುವುದನ್ನು ಸನಾತನವಾದಿಗಳು ಸಹಿಸಿಕೊಳ್ಳುವುದಿಲ್ಲ ಎಂಬುದನ್ನು ಸಾಬೀತುಪಡಿಸಿದಂತಾಗಿದೆ. ದೇಶದ ಪರಮೋಚ್ಚ ನ್ಯಾಯಾಲಯದಲ್ಲಿಯೇ ಈ ರೀತಿ ನಡೆದರೆ ಕುಗ್ರಾಮಗಳಲ್ಲಿ ಅಸ್ಪೃಶ್ಯರ ಸ್ಥಿತಿ ಹೇಗಿರಬೇಡ? ಇಂತಹ ಹುಚ್ಚಾಟಗಳಿಗೆ ಈಗಿನ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮತ್ತು ಹಿಂದುತ್ವವಾದಿ ಸಂಘಟನೆಗಳೇ ಕಾರಣ ಎಂದರು ದೂರಿದರು.

ನ್ಯಾಯಾಲಯದ ಘನತೆಗೆ ಧಕ್ಕೆ ತಂದಿರುವ ವಕೀಲ ರಾಕೇಶ್ ಕಿಶೋರ್ ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ಇವರನ್ನು ಶಿಕ್ಷೆಗೆ ಒಳಪಡಿಸಬೇಕು. ಅಲ್ಲದೆ ದೇಶದ್ರೋಹಿಗಳೆಂದು ಪರಿಗಣಿಸಿ ದೇಶದ ಐಕ್ಯತೆ, ಅಭಿವೃದ್ಧಿ, ಭದ್ರತೆಯ ಪರವಾಗಿರುವವರನ್ನು ಕಾಪಾಡುವ ದೃಷ್ಟಿಯಿಂದ ಸರ್ವಾಧಿಕಾರ ನಡೆಸುತ್ತಿರುವ ಕೇಂದ್ರ ಸರ್ಕಾರವನ್ನು ವಜಾಗೊಳಿಸಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ, ಚೋರನಹಳ್ಳಿ ಶಿವಣ್ಣ, ಆಲಗೂಡು ಶಿವಕುಮಾರ್, ಶಂಭುಲಿಂಗಸ್ವಾಮಿ, ಹೆಗ್ಗನೂರು ನಿಂಗರಾಜು, ಬಿಡಿ ಶಿವಬುದ್ಧಿ, ಮಹೇಶ್ ಮಲಾರ, ರಾಜು ಕುಕ್ಕೂರು, ರಾಮಕೃಷ್ಣ ಅತ್ತಿಕುಪ್ಪೆ, ಯಡದೊರೆ ಮಹದೇವಯ್ಯ, ದೇವೇಂದ್ರ, ಮಂಜು ಶಂಕರಪುರ, ಮಹೇಶ್, ಮಹದೇವಮ್ಮ, ತಿಮ್ಮೇಗೌಡ, ಕಿರಂಗೂರು ಸ್ವಾಮಿ ಇನ್ನಿತರರು ಭಾಗವಹಿಸಿದ್ದರು.

ವಿಶ್ವದ ಅಗ್ರ 2% ವಿಜ್ಞಾನಿಗಳ ಪಟ್ಟಿಯಲ್ಲಿ ಕೊಡಗಿನ ಡಾ.ಉತ್ತಪ್ಪ ಹೆಸರು ಪ್ರಕಟ



ವಿರಾಜಪೇಟೆ, ಅ.8– ಡಾ. ಉತಪ್ಪ ಯು.ಟಿ. ಅವರು 'ವಿಶ್ವದ ಅಗ್ರ 2% ವಿಜ್ಞಾನಿಗಳು' (2025ರ ಸಮೀಕ್ಷೆ) ಪಟ್ಟಿಯಲ್ಲಿ ತಮ್ಮ ಹೆಸರನ್ನು ದಾಖಲಿಸಿಕೊಂಡಿದ್ದಾರೆ.

ಪ್ರತಿ ವರ್ಷ, ಅಮೇರಿಕಾದ ಸ್ಟ್ಯಾಂಫರ್ಡ್ ವಿಶ್ವವಿದ್ಯಾಲಯದ ಪ್ರೊಫೆಸರ್.ಪಿ.ಎ. ಇಯೋನಿಡಿಸ್ ಅವರು, ಎಲ್ಸೆವಿಯರ್ (Elsevier) ಮತ್ತು ಸ್ಕೋಪಸ್ Scopus ಸಂಸ್ಥೆಗಳ ಸಹಯೋಗದೊಂದಿಗೆ "ವಿಶ್ವದ ಅಗ್ರ 2% ವಿಜ್ಞಾನಿಗಳು" ಪಟ್ಟಿಯನ್ನು ಪ್ರಕಟಿಸುತ್ತಾರೆ. ಈ ಪಟ್ಟಿ ವಿಶ್ವದಾದ್ಯಂತದ ಸುಮಾರು 2% ವಿಜ್ಞಾನಿಗಳಲ್ಲಿ ಅತ್ಯಂತ ಪ್ರಭಾವಶಾಲಿ ವಿಜ್ಞಾನಿಗಳನ್ನು ಗುರುತಿಸುವುದು. ಈ ಸಮೀಕ್ಷೆ ಮಾನದಂಡಿತ ಉಲ್ಲೇಖ (citation) ಅಂಶಗಳು ಮತ್ತು ಸಂಯುಕ್ತ ವೈಜ್ಞಾನಿಕ ಪರಿಣಾಮದ ಸೂಚ್ಯಂಕಗಳ ಆಧಾರದ ಮೇಲೆ ಮಾಡಲ್ಪಟ್ಟಿದೆ.

ಡಾ. ಉತಪ್ಪ ಯು.ಟಿ. ಅವರು ಪ್ರಸ್ತುತ ಚೀನಾದ ಶೆಜ್ಞೆನ್ ವಿಶ್ವವಿದ್ಯಾಲಯದ ರಸಾಯನ ಶಾಸ್ತ್ರ ಮತ್ತು ಪರಿಸರ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪೋಸ್ಟ್–ಡಾಕ್ಟರಲ್ ವಿಜ್ಞಾನಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದರ ಮೊದಲು ಅವರು ದಕ್ಷಿಣ ಕೊರಿಯಾದ ಚೋನ್ನಮ್ ನ್ಯಾಷನಲ್ ಯುನಿವರ್ಸಿಟಿಯಲ್ಲಿ (2021–2022) ಪೋಸ್ಟ್–ಡಾಕ್ಟರಲ್ ಫೆಲೋ ಆಗಿ ಹಾಗೂ ಯಾಂಗ್ನಮ್ ಯುನಿವರ್ಸಿಟಿಯಲ್ಲಿ (2022–2023) ಸಂಶೋಧನಾ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ.

ಉತ್ತಪ್ಪ ಅವರು ಅಂತಾರಾಷ್ಟ್ರೀಯ ಖ್ಯಾತಿಯ ವಿಮರ್ಶಿತ ವಿಜ್ಞಾನ ಪತ್ರಿಕೆಗಳಲ್ಲಿ 50ಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದು, 2300ಕ್ಕೂ ಹೆಚ್ಚು ಉಲ್ಲೇಖಗಳು (citations) ಪಡೆದಿದ್ದಾರೆ ಹಾಗೂ ಹೆಚ್.ಇಂಡೆಕ್ಸ್: 25 ಹೊಂದಿದ್ದಾರೆ. ಇದರ ಜೊತೆಗೆ 2 ಕೊರಿಯನ್ ಮತ್ತು 1 ಚೀನೀ ಪೇಟೆಂಟ್‌ಗಳನ್ನು ದಾಖಲಿಸಿದ್ದಾರೆ.

ಅಪೂರ್ವ ಸಾಧಕ ಡಾ. ಉತ್ತಪ್ಪ ಅವರು ಕೊಡಗಿನ ಪೊನ್ನಂಪೇಟೆ ತಾಲೂಕಿನ ಟಿ.ಶೆಟ್ಟಿಗೇರಿಯ ಉಳುವಂಗಡ ಸಾಬು ತಮ್ಮಯ್ಯ, ಹಾಗೂ ಉಳುವಂಗಡ ಮೀನಾ ಅವರ ಪುತ್ರ, ಪ್ರಸ್ತುತ ಇವರು ಚೀನಾ ದೇಶದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ಶೇ.77.86ರಷ್ಟು ಗಣತಿ ಪೂರ್ಣ


ಸಾಂದರ್ಭಿಕ ಚಿತ್ರ

ಮಡಿಕೇರಿ, ಅ.8– ಜಿಲ್ಲೆಯ ಎಲ್ಲಾ ನಾಗರಿಕರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಕುರಿತು ನಿಖರವಾದ ಮಾಹಿತಿ ಸಂಗ್ರಹಿಸುವ ಕಾರ್ಯವು ಜಿಲ್ಲೆಯಾದ್ಯಂತ ನಡೆಯುತ್ತಿದ್ದು, ಶೇ.77.86 ರಷ್ಟು ಗಣತಿಯಾಗಿದೆ.

ಈಗಾಗಲೇ ಗುರುತಿಸಲಾಗಿರುವ ಎಲ್ಲಾ ಮನೆಗಳಿಗೆ ಗಣತಿದಾರರು ಭೇಟಿ ನೀಡಿ, ಗಣತಿ ಕಾರ್ಯ ನಡೆಸುತ್ತಿದ್ದು, ಸಾರ್ವಜನಿಕರು ಕೂಡ ಸ್ವಯಂ ಆಗಿ ತಮ್ಮ ಮನೆಯ ಗಣತಿ ಮಾಡಿಕೊಳ್ಳಲು ಅನುಕೂಲವಾಗುವಂತೆ ಸೌಲಭ್ಯ ಸಿದ್ಧಪಡಿಸಲಾಗಿದೆ. ಸಾರ್ವಜನಿಕ https://kscbcselfdeclaration.karnataka.gov.in ನಲ್ಲಿ ಸ್ವಯಂ ಮಾಹಿತಿ ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ.

ಸ್ವಯಂ ಮಾಹಿತಿ ದಾಖಲಿಸಲು, ಪಡೆಯಲು ಅವಕಾಶ

ಕುಶಾಲನಗರ ತಾಲೂಕಿನಲ್ಲಿ 304 ಬ್ಲಾಕ್‌ಗಳಲ್ಲಿ 34,637 ಕುಟುಂಬಗಳಲ್ಲಿ 26,819 ಕುಟುಂಬಗಳ ಸಮೀಕ್ಷೆ ಆಗಿದೆ. ಮಡಿಕೇರಿ ತಾಲೂಕಿನಲ್ಲಿ 264 ಬ್ಲಾಕ್‌ಗಳಲ್ಲಿ 35,127 ಕುಟುಂಬಗಳಲ್ಲಿ 25,610 ಕುಟುಂಬಗಳ ಸಮೀಕ್ಷೆ ಆಗಿದೆ. ಪೊನ್ನಂಪೇಟೆ ತಾಲ್ಲೂಕಿನಲ್ಲಿ 87 ಬ್ಲಾಕ್‌ಗಳಲ್ಲಿ 10,337 ಕುಟುಂಬಗಳಲ್ಲಿ 8,743 ಕುಟುಂಬಗಳ ಸಮೀಕ್ಷೆ ಆಗಿದೆ. ಸೋಮವಾರಪೇಟೆ ತಾಲ್ಲೂಕಿನಲ್ಲಿ 266 ಬ್ಲಾಕ್‌ಗಳಲ್ಲಿ 29,402 ಕುಟುಂಬಗಳ ಗುರಿಯಲ್ಲಿ 24,428 ಕುಟುಂಬಗಳ ಸಮೀಕ್ಷೆ ಆಗಿದೆ. ಹಾಗೆಯೇ ವಿರಾಜಪೇಟೆ ತಾಲೂಕಿನಲ್ಲಿ 210 ಬ್ಲಾಕ್‌ಗಳಲ್ಲಿ 24,893 ಕುಟುಂಬಗಳ ಗುರಿಯಲ್ಲಿ 19,044 ಕುಟುಂಬಗಳ ಸರ್ವೇ ಆಗಿದೆ.

ಈ ಲಿಂಕ್‌ಅನ್ನು ಕ್ಲಿಕ್ ಮಾಡಿದಾಗ ತೆರೆದುಕೊಳ್ಳುವ ಪುಟದಲ್ಲಿ 'ನಾಗರಿಕ' ಎಂಬುದನ್ನು ಆಯ್ಕೆ ಮಾಡಿದ್ದಲ್ಲಿ ಲಾಗಿನ್‌ನಲ್ಲಿ ಮುಂದುವರೆಯಲು ಕೋರಲಾಗುತ್ತದೆ. ನಂತರದಲ್ಲಿ ತಮ್ಮ ಮೊಬೈಲ್ ಸಂಖ್ಯೆ ನೀಡಿದ್ದಲ್ಲಿ, ಒಟಿಪಿ ಬರಲಿದ್ದು, ಅದನ್ನು ದಾಖಲು ಮಾಡಬೇಕಿದೆ.


ನಂತರ ತೆರೆಯುವ ಪುಟದಲ್ಲಿ ತಮ್ಮ ಸಮೀಕ್ಷೆಯ ಸ್ಥಿತಿಗತಿ ಕುರಿತಂತೆ ನಿಮ್ಮ ಸಮೀಕ್ಷೆ ಪೂರ್ಣಗೊಂಡಿದೆ ಅಥವಾ ಬಾಕಿ ಎಂದು ಕಾಣಬಹುದಾಗಿದ್ದು, ಇದುವರೆಗೆ ಸಮೀಕ್ಷೆ ನಡೆಯದೇ ಬಾಕಿ ಇದ್ದಲ್ಲಿ ಇನ್ನೂ ಯಾವುದೇ ಕುಟುಂಬ ಸದಸ್ಯರನ್ನು ಸೇರಿಸಿಲ್ಲ ಫಾರ್ಮ್ ಭರ್ತಿ ಮಾಡಲು ಆರಂಭಿಸಿ ಎಂಬ ಸಂದೇಶ ಕಾಣಲಿದ್ದು, ಹೊಸ ಸಮೀಕ್ಷೆ ಆರಂಭಿಸಿ ಎಂಬುದನ್ನು ಕ್ಲಿಕ್ ಮಾಡಬೇಕಿದೆ.

ನಂತರದ ಪುಟದಲ್ಲಿ ಈಗಾಗಲೇ ತಮ್ಮ ಮನೆಗೆ ಅಂಟಿಸಲಾಗಿರುವ ಸ್ಟಿಕ್ಕರ್‌ನಲ್ಲಿರುವ UHID ಸಂಖ್ಯೆಯನ್ನು ದಾಖಲಿಸಿ ಸ್ಕ್ರೀನ್‌ನಲ್ಲಿ ಕೋರುವ ಮಾಹಿತಿ ದಾಖಲು ಮಾಡಬೇಕಿದೆ.

ಈ ಸಮೀಕ್ಷೆಗೆ ದಾಖಲೆಗಳ ಮಾಹಿತಿ ನೀಡುವ ಅವಶ್ಯಕತೆ ಇರುವುದರಿಂದ ತಮ್ಮ ಕುಟುಂಬದ ಸದಸ್ಯರ ರೇಷನ್ ಕಾರ್ಡ್, ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ವಿಕಲಚೇತನರಾಗಿದ್ದರೆ ಯುಐಡಿ ಕಾರ್ಡ್ ಅಥವಾ ಅಂಗವಿಕಲ ಪ್ರಮಾಣ ಪತ್ರದ ದಾಖಲೆಗಳನ್ನು ತೆಗೆದಿರಿಸಿಕೊಂಡು ಸುಲಭವಾಗಿ ಈ ಸಮೀಕ್ಷೆ ಕಾರ್ಯದಲ್ಲಿ ತಾವೇ ಸ್ವಯಂ ಆಗಿ ಭಾಗವಹಿಸಬಹುದಾಗಿದ್ದು, ಸಮೀಕ್ಷೆ ಯಶಸ್ವಿಯಾದ ನಂತರ ಈ ಬಗ್ಗೆ ಮೊಬೈಲ್‌ಗೆ ಸಂದೇಶ ಬರಲಿದೆ.

ಜಿಲ್ಲೆಯಲ್ಲಿ 1131 ಬ್ಲಾಕ್‌ಗಳಿದ್ದು, ಇದರಲ್ಲಿ 1,34,396 ಕುಟುಂಬಗಳ ಗುರಿಯಲ್ಲಿ ಈಗಾಗಲೇ 1,04,644 ಕುಟುಂಬಗಳ ಸಮೀಕ್ಷೆ ಆಗಿದೆ.

ಮೆಸ್ಕಾಂ ಅಧ್ಯಕ್ಷರಿಗೆ ಅರೆ ಭಾಷೆ ಅಕಾಡೆಮಿ ಅಧ್ಯಕ್ಷರಿಂದ ಗೌರವಾರ್ಪಣೆ


ಮಂಗಳೂರು ವಿದ್ಯುತ್ ಸರಬರಾಜು ನಿಗಮದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಹರೀಶ್ ಕುಮಾರ್‌ಗೆ ಅಭಿನಂದನೆ.

ನಾಪೋಕ್ಲು: ಮಂಗಳೂರು ವಿದ್ಯುತ್ ಸರಬರಾಜು ನಿಗಮದ (ಮೆಸ್ಕಾಂ)ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹರೀಶ್ ಕುಮಾರ್ ಅವರನ್ನು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಅಕಾಡೆಮಿ ಪರವಾಗಿ ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಕಾರ್ಮಿಕರ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ.ಎಂ. ಶಹೀದ್, ಸುಳ್ಯ ನಗರ ಯೋಜನಾ ಪ್ರಾಧಿಕಾರ (ಸೂಡ) ಅಧ್ಯಕ್ಷ ಕೆ.ಎಂ. ಮುಸ್ತಫ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಅಧ್ಯಕ್ಷರೊಂದಿಗೆ ಸುಳ್ಯದ ಗ್ರಾಮೀಣ ಭಾಗದ ವಿದ್ಯುತ್ ಸಮಸ್ಯೆ ಮತ್ತು 110 ಕೆವಿ ವಿದ್ಯುತ್ ಕಾಮಗಾರಿಯ ಬಗ್ಗೆ ಚರ್ಚಿಸಲಾಯಿತು. ಇದಕ್ಕೆ ಸ್ಪಂದಿಸಿದ ಅಧ್ಯಕ್ಷ ಹರೀಶ್ ಕುಮಾರ್ ಶೀಘ್ರದಲ್ಲಿಯೇ ಸುಳ್ಯಕ್ಕೆ ಭೇಟಿ ನೀಡಿ ಸಭೆ ನಡೆಸುವುದಾಗಿ ತಿಳಿಸಿದರು.

ನಿವೃತ್ತ ಪ್ರಾಂಶುಪಾಲೆ ಕೊಕ್ಕಲೇರ ರೇಖಾ ಕಾಳಯ್ಯ ನಿಧನ

ಮಡಿಕೇರಿ,ಅ.8– ಮಡಿಕೇರಿ ಜೂನಿಯರ್ ಕಾಲೇಜಿನ ನಿವೃತ್ತ ಪ್ರಾಂಶುಪಾಲೆ ಕೊಕ್ಕಲೇರ ರೇಖಾ ಕಾಳಯ್ಯ(ಬೊಳ್ಳಮ್ಮ) ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣ ಬಳಿ ಇರುವ ತಮ್ಮ ಸ್ಪೋರ್ಟ್ಸ್ ವಿವ್ಯೂ ನಿವಾಸದಲ್ಲಿ ನಿಧನರಾಗಿದ್ದಾರೆ. ಅವರಿಗೆ 75 ವರ್ಷ ವಯಸ್ಸಾಗಿತ್ತು. ರೇಖಾ ಕಾಳಯ್ಯ ಅತ್ಯುತ್ತಮ ಇಂಗ್ಲಿಷ್ ಜ್ಞಾನ ಹೊಂದಿದ್ದರಲ್ಲದೇ ಜೂನಿಯರ್ ಕಾಲೇಜ್‌ಗೆ ಖ್ಯಾತಿ ತಂದು ಕೊಟ್ಟಿದ್ದರು. ಮಾತ್ರವಲ್ಲದೇ ಅಮೂಲ್ಯ ಅಂಚೆ ಚೀಟಿ ಸಂಗ್ರಹಕರೂ ಆಗಿದ್ದರು. ಅಪಾರ ಬಂಧು ಬಳಗವನ್ನು ಅಗಲಿರುವ ರೇಖಾ ಕಾಳಯ್ಯ ಅವರ ಅಂತ್ಯಕ್ರಿಯೆ ಅ.9ರ ಮಧ್ಯಾಹ್ನ 1 ಗಂಟೆಗೆ ಮಡಿಕೇರಿ ಕೊಡವ ಸಮಾಜದ ರುದ್ರಭೂಮಿಯಲ್ಲಿ ಜರುಗಲಿದೆ.

ತುಂಡು ಕಾಮಗಾರಿ ಪಾವತಿಸಲು 25 ಸಾವಿರ ರೂ. ಲಂಚ ಸ್ವೀಕಾರ

ಲೋಕಾಯುಕ್ತ ಬಲೆಗೆ ಬಿದ್ದ ಗ್ರಾಪಂ ಅಧ್ಯಕ್ಷೆ

ಮಡಿಕೇರಿ,ಅ.8– 'ಡಿ' ದರ್ಜೆಯ ತುಂಡು ಕಾಮಗಾರಿ ಗುತ್ತಿಗೆದಾರನ ಬಿಲ್ ಪಾವತಿಸಲು 25 ಸಾವಿರ ರೂ. ಲಂಚ ಪಡೆಯುತ್ತಿದ್ದ ಗ್ರಾಮ ಪಂಚಾಯಿತಿ ಅಧ್ಯಕ್ಷೆಯನ್ನು ಕೊಡಗು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಸೋಮವಾರಪೇಟೆ ತಾಲೂಕಿನ ಶನಿವಾರಸಂತೆ ಸಮೀಪದ ಹಂಡ್ಲಿ ಗ್ರಾಪಂ ಅಧ್ಯಕ್ಷೆ ಸುಧಾ ಹಿರೇಶ್ ಬಂಧಿತರು.

ವಿವರ: ಶನಿವಾರಸಂತೆ ಹೋಬಳಿ ಒಡೆಯನಪುರ ಗ್ರಾಮ ನಿವಾಸಿ ಡಿ ದರ್ಜೆ ಗುತ್ತಿಗೆದಾರ ಹಮೀದ್ ಎಸ್.ಎ ಅವರು ಹಂಡ್ಲಿ ಗ್ರಾಮ ಪಂಚಾಯಿತಿಯಲ್ಲಿ ಪಡೆದಿರುವ ತುಂಡು ಗುತ್ತಿಗೆ ಕಾಮಗಾರಿಗಳ ಮೇಲುಸ್ತುವಾರಿ ನೋಡಿಕೊಳ್ಳಲು ಹುಲುಸೆ ಗ್ರಾಮದ ಭರತ್ ಎಂಬುವರನ್ನು ನೇಮಿಸಿಕೊಂಡಿದ್ದರು.

15ನೇ ಹಣಕಾಸು ಅನುದಾನದಡಿ 2 ಕಾಮಗಾರಿಗಳು ಹಾಗೂ ಇತರೆ 6 ಕಾಮಗಾರಿಗಳ ಒಟ್ಟು ಮೊತ್ತ ರೂ.14,79,700 ಮಂಜೂರು ಮಾಡಲು ಹಂಡ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸುಧಾ ಹಿರೇಶ್ 25 ಸಾವಿರ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಕುರಿತು ಅಧ್ಯಕ್ಷರ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡುವಂತೆ ಗುತ್ತಿಗೆದಾರ ಹಮೀದ್ ಅವರು ಭರತ್‌ಗೆ ತಿಳಿಸಿದ್ದರು.

ಹಂಡ್ಲಿ ಗ್ರಾಪಂ ಅಧ್ಯಕ್ಷೆ ಸುಧಾ ಹಿರೇಶ್ ವಿರುದ್ಧ ಭರತ್ ನೀಡಿದ ದೂರಿನ ಮೇರೆಗೆ ಅ.8ರಂದು ಹಂಡ್ಲಿ ಗ್ರಾಪಂ ಕಚೇರಿಯಲ್ಲಿ ಅಧ್ಯಕ್ಷೆ ಸುಧಾ ಹಿರೇಶ್ ಅವರಿಗೆ ಭರತ್ 25 ಸಾವಿರ ರೂ. ಗಳನ್ನು ನೀಡುವಾಗ ಅದನ್ನು ಮುಟ್ಟದ ಅಧ್ಯಕ್ಷೆ ಫೈಲ್ ಒಳಗೆ ಇಡಲು ಹೇಳಿ ಪಡೆದಿದ್ದರು. ಈ ವೇಳೆಗೆ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ದಾಳಿ ನಡೆಸಿ ಲಂಚದ ಹಣದ ಸಮೇತ ಪಂಚಾಯಿತಿ ಅಧ್ಯಕ್ಷೆ ಸುಧಾ ಹಿರೇಶ್ ಅವರನ್ನು ಬಂಧಿಸಿದ್ದಾರೆ. ಲೋಕಾಯುಕ್ತ ಪೊಲೀಸ್ ಮಹಾ ನಿರೀಕ್ಷಕ ಸುಬ್ರಮಣೇಶ್ವರ ರಾವ್, ಮೈಸೂರು ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಟಿ.ಜೆ. ಉದೇಶ್ ಮಾರ್ಗದರ್ಶನದಲ್ಲಿ ಮಡಿಕೇರಿ ಲೋಕಾಯುಕ್ತ ಡಿವೈಎಸ್‌ಪಿ ದಿನಕರ್ ಶೆಟ್ಟಿ, ಪೊಲೀಸ್ ನಿರೀಕ್ಷಕ ಲೋಕೇಶ್, ವೀಣಾ ನಾಯಕ್ ಮತ್ತು ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.


ಹಂಡ್ಲಿ ಗ್ರಾಮ ಪಂಚಾಯಿತಿ ಕಚೇರಿ.

ಉರುಸ್ ಪೋಸ್ಟರ್ ಬಿಡುಗಡೆ



ಇತಿಹಾಸ ಪ್ರಸಿದ್ಧ ಎಮ್ಮೆಮಾಡುವಿನ 2026ರ ಸಾಲಿನ ಉರುಸ್ ಕಾರ್ಯಕ್ರಮವು ಏಪ್ರಿಲ್ 17ರಿಂದ 24ರ ವರೆಗೆ ನಡೆಯಲಿದ್ದು, ಈ ಕಾರ್ಯಕ್ರಮದ ಪೋಸ್ಟರ್ ಅನ್ನು ಮರ್ಕಜ್ ಸಂಸ್ಥೆಯಲ್ಲಿ ಇಂಡಿಯನ್ ಗ್ರಾಂಡ್ ಮುಫ್ತಿ ಹಾಗೂ ಕೊಡಗು ಜಿಲ್ಲಾ ಖಾಜಿಗಳಾದ ಕಾಂತಪುರಂ ಎ.ಪಿ ಅಬೂಬಕರ್ ಮುಸ್ಲಿಯರ್ ಬಿಡುಗಡೆ ಗೊಳಿಸಿದರು.

ಶೋಭಾಯಾತ್ರೆ ವೇಳೆ ನಿಯಮ ಉಲ್ಲಂಘನೆ ಆರೋಪ

ಪೊಲೀಸರ ಎಫ್‌ಐಆರ್ ವಿರುದ್ಧ ಕಾನೂನು ಹೋರಾಟಕ್ಕೆ ನಿರ್ಧಾರ

ಮಡಿಕೇರಿ,ಅ.8– ಮಡಿಕೇರಿಯಲ್ಲಿ ನಡೆದ ದಸರಾ ದಶಮಂಟಪಗಳ ಶೋಭಾಯಾತ್ರೆ ವೇಳೆ ಧ್ವನಿವರ್ಧಕ ಬಳಸಿ ನಿಯಮ ಉಲ್ಲಂಘನೆ ಮಾಡಲಾಗಿದೆ ಎಂದು ನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ ಹಾಗೂ ದಸರಾ ಸಂದರ್ಭ ಧ್ವನಿವರ್ಧಕ ಬಳಕೆಗೆ ಅವಕಾಶ ನೀಡಬೇಕೆಂದು ಕೋರಿ ಕಾನೂನು ಹೋರಾಟ ಕೈಗೊಳ್ಳಲು ದಶಮಂಟಪ ಸಮಿತಿ ನಿರ್ಧರಿಸಿದೆ. ರಾತ್ರಿ 10 ಗಂಟೆ ನಂತರ ಸಾರ್ವಜನಿಕ ಸ್ಥಳದಲ್ಲಿ ಹೆಚ್ಚಿನ ಶಬ್ಧವನ್ನುಂಟು ಮಾಡುವ ಧ್ವನಿವರ್ಧಕವನ್ನು ಬಳಸಬಾರದೆಂಬ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಶೋಭಾಯಾತ್ರೆ ಸಂದರ್ಭದಲ್ಲಿ ಧ್ವನಿವರ್ಧಕವನ್ನು ಬಳಸಲಾಗಿದೆ ಎಂದು ಆರೋಪಿಸಿ ನಗರ ಠಾಣೆಯಲ್ಲಿ 10 ಮಂಟಪ ಸಮಿತಿಗಳ ಒಟ್ಟು 62 ಮಂದಿ ವಿರುದ್ಧ ಪ್ರತ್ಯೇಕ 10 ಸ್ವಯಂ ಪ್ರೇರಿತ ಪ್ರಕರಣ ದಾಖಲಾಗಿತ್ತು. ಈ ಹಿನ್ನೆಲೆ ದಶಮಂಟಪಗಳ ಸಮಿತಿ ನೇತೃತ್ವದಲ್ಲಿ ವಿವಿಧ ಸಮಿತಿ ಪದಾಧಿಕಾರಿಗಳು ಹಾಗೂ ಸದಸ್ಯರು ಠಾಣೆಗೆ ಹಾಜರಾಗಿ ವೃತ್ತ ನಿರೀಕ್ಷಕ ಪಿ.ಕೆ. ರಾಜು ಅವರೊಂದಿಗೆ ಸಮಾಲೋಚನೆ ನಡೆಸಿದರು.

ಪೊಲೀಸರ ಸೂಚನೆಯಂತೆ ರಾತ್ರಿ 11 ಗಂಟೆಯ ನಂತರ ಧ್ವನಿವರ್ಧಕಗಳನ್ನು ಸ್ಥಗಿತಗೊಳಿಸಲಾಗಿದೆ. ಹೀಗಿದ್ದರೂ ಪ್ರಕರಣ ದಾಖಲಿಸಲಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಕೋರ್ಟ್ ಆದೇಶದ ಪ್ರಕಾರ ರಾತ್ರಿ 10 ಗಂಟೆಯ ನಂತರ ಯಾವುದೇ ಕಾರಣಕ್ಕೂ ಧ್ವನಿವರ್ಧಕಗಳನ್ನು ಬಳಸುವಂತಿಲ್ಲ. ಇದರ ಉಲ್ಲಂಘನೆ ಸ್ಪಷ್ಟವಾಗಿ ಕಂಡು ಬಂದ ಹಿನ್ನೆಲೆ ಪ್ರಕರಣ ದಾಖಲಿಸಲಾಗಿದ್ದು, ನ್ಯಾಯಾಂಗದ ಮೂಲಕ ಸಮಸ್ಯೆ ಪರಿಹರಿಸಿಕೊಳ್ಳಬೇಕಾಗಿದೆ ಎಂದು ವೃತ್ತ ನಿರೀಕ್ಷಕ ರಾಜು ಸಲಹೆ ನೀಡಿದರು. ಬಳಿಕ ಸಮಿತಿಯ ಪದಾಧಿಕಾರಿಗಳು ನಿಯಮ ಉಲ್ಲಂಘನೆ ಮಾಡಿದ ಕುರಿತು ವಕೀಲರ ಸಲಹೆಯಂತೆ ನೋಟಿಸ್ ಸ್ವೀಕರಿಸಿದರು.


ಪೊಲೀಸ್ ಅಧಿಕಾರಿ ಜೊತೆ ಚರ್ಚಿಸುತ್ತಿರುವ ದಶಮಂಟಪ ಸಮಿತಿ ಪದಾಧಿಕಾರಿಗಳು.

ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಪ್ರಗತಿ

ರಾಜ್ಯದಲ್ಲಿಯೇ ಚಾಮರಾಜನಗರ ಜಿಲ್ಲೆ ಮೊದಲು


ಸಾಂದರ್ಭಿಕ ಚಿತ್ರ

ಚಾಮರಾಜನಗರ, ಅ.8 – ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ನಡೆಯುತ್ತಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಲ್ಲಿ ಚಾಮರಾಜನಗರ ಜಿಲ್ಲೆಯು ಶೇ. 98.21 ರಷ್ಟು ಪ್ರಗತಿ ಸಾಧಿಸುವ ಮೂಲಕ ರಾಜ್ಯದಲ್ಲಿ ಮೊದಲ ಸ್ಥಾನ ಪಡೆದು ಕೊಂಡಿದೆ.

ರಾಜ್ಯಾದ್ಯಾಂತ ನಾಗರಿಕರ ಸಾಮಾಜಿಕ ಶೈಕ್ಷಣಿಕ ಸಮೀಕ್ಷಾ ಕಾರ್ಯವು ಸೆ.22ರಿಂದ ಪ್ರಾರಂಭವಾಗಿದೆ. ಈ ಸಮೀಕ್ಷೆಯಲ್ಲಿ ಚಾಮರಾಜನಗರ ತಾಲೂಕು ಶೇ.99.15, ಗುಂಡ್ಲುಪೇಟೆ ತಾಲೂಕು ಶೇ.97.41, ಕೊಳ್ಳೇಗಾಲ ತಾಲ್ಲೂಕು ಶೇ.94.66, ಯಳಂದೂರು ಹಾಗೂ ಹನೂರು ತಾಲೂಕಿನಲ್ಲಿ ಶೇ.100 ರಷ್ಟು ಸಮೀಕ್ಷಾ ಕಾರ್ಯ ಪೂರ್ಣಗೊಳಿಸಲಾಗಿದ್ದು, ಒಟ್ಟಾರೆ ಚಾಮರಾಜನಗರ ಜಿಲ್ಲೆ ಶೇ.98.21ರಷ್ಟು ಪ್ರಗತಿ ಸಾಧಿಸಿದೆ.

ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ನಾಗರಿಕರ ಸಾಮಾಜಿಕ ಶೈಕ್ಷಣಿಕ ಸಮೀಕ್ಷೆ ಕಾರ್ಯವನ್ನು ನಡೆಸಲು ಸರ್ಕಾರದ ಮಾರ್ಗಸೂಚಿಯಂತೆ ಗಣತಿದಾರರು, ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಸಮೀಕ್ಷಾ ಕಾರ್ಯವನ್ನು ಅನುಷ್ಠಾನಗೊಳಿಸುವ ಸಂಬಂಧ ಜಿಲ್ಲಾಧಿಕಾರಿಯವರು ಜಿಲ್ಲೆಯ ಎಲ್ಲಾ ಹೋಬಳಿಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಿ ಪ್ರತಿದಿನ ವಿಡಿಯೋ ಸಂವಾದ ನಡೆಸಿ ಗಣತಿದಾರರಿಗೆ ಗುರಿಯನ್ನು ನಿಗದಿಪಡಿಸಿ ಆಯಾ ದಿನ ಪ್ರಗತಿಯನ್ನು ಪರಿಶೀಲಿಸಿ, ಉತ್ಸುಕತೆಯಿಂದ ಕಾರ್ಯನಿರ್ವಹಿಸಲು ಪ್ರೋತ್ಸಾಹಿಸಿದ್ದಾರೆ. ಇದರಿಂದ ಕ್ಷೇತ್ರ ಮಟ್ಟದಲ್ಲಿ ಸಮೀಕ್ಷೆ ಕಾರ್ಯನಿರ್ವಹಿಸುತ್ತಿದ್ದ ಎಲ್ಲಾ ಅಧಿಕಾರಿ, ಸಿಬ್ಬಂದಿ ಹಾಗೂ ಗಣತಿದಾರರು ಸಂಪೂರ್ಣವಾಗಿ ತಮ್ಮನ್ನು ಸಮೀಕ್ಷೆ ಕಾರ್ಯದಲ್ಲಿ ತೊಡಗಿಸಿಕೊಂಡು ಕಾರ್ಯನಿರ್ವಹಿಸಿರುವುದರಿಂದ ಅ.7ರ ವರದಿಯಂತೆ ಜಿಲ್ಲೆಯು ರಾಜ್ಯದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. ಚಾಮರಾಜನಗರ ಜಿಲ್ಲೆಯು ಹೆಚ್ಚಿನ ಭಾಗವು ಅರಣ್ಯ ಪ್ರದೇಶದಿಂದ ಕೂಡಿದ್ದು, ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿರುವ ಗ್ರಾಮ/ಪೋಡು/ಹಾಡಿಗಳಲ್ಲಿ (ಟೆಲಿಕಾಂ ಶ್ಯಾಡೋ ಏರಿಯಾ) ಮೊಬೈಲ್ ನೆಟ್‌ವರ್ಕ್ ಲಭ್ಯವಿಲ್ಲದಿರುವುದನ್ನು ಜಿಲ್ಲಾಡಳಿತವು ಪರಿಗಣಿಸಿ ಕಾಡಂಚಿನ ಗ್ರಾಮ/ಪೋಡು/ಹಾಡಿಗಳನ್ನು ಗುರುತಿಸಿ ಅವುಗಳನ್ನು ಕ್ಯಾಂಪ್ ಮೋಡ್ ಎಂದು ಪರಿಗಣಿಸಿ ನೆಟ್‌ವರ್ಕ್ ದೊರಕುವ ಪ್ರದೇಶಗಳಲ್ಲಿ ಕ್ಯಾಂಪ್‌ಗಳನ್ನು ಸ್ಥಾಪಿಸಿ ವಿವಿಧ ಇಲಾಖೆಯ ಸರ್ಕಾರಿ ವಾಹನಗಳಲ್ಲಿ ಗ್ರಾಮಸ್ಥರನ್ನು ಕ್ಯಾಂಪ್‌ಗಳಿಗೆ ಕರೆದುಕೊಂಡು ಬಂದು ಸಮೀಕ್ಷೆ ನಡೆಸಲಾಗಿದೆ. ಯಾವುದೇ ಮನೆಯು ಸಮೀಕ್ಷೆಯಿಂದ ಬಿಟ್ಟು ಹೋಗದಂತೆ ಕೂಂಬಿಂಗ್ ನಡೆಸಿ ಪರಿಶೀಲಿಸಲಾಗಿದೆ.

ಸಮೀಕ್ಷೆಯಿಂದ ಯಾವುದಾದರು ಕುಟುಂಬಗಳು ಕೈಬಿಟ್ಟು ಹೋಗಿದ್ದಲ್ಲಿ ಸಾರ್ವಜನಿಕರು ಯಾವುದೇ ಆತಂಕಕ್ಕೆ ಒಳಗಾಗದೆ ಜಿಲ್ಲಾಧಿಕಾರಿಗಳ ಕಚೇರಿಯ ಕಂಟ್ರೋಲ್ ರೂಂ ಸಹಾಯವಾಣಿ ಸಂಖ್ಯೆ 08226–223160/161/163 ಮತ್ತು ಮೊಬೈಲ್ ಸಂಖ್ಯೆ 9740942901 ಸಂಪರ್ಕಿಸಿ ಮಾಹಿತಿ ನೀಡಿದಲ್ಲಿ ಗಣತಿದಾರರನ್ನು ನಿಯೋಜಿಸಿ ಗಣತಿ ಕಾರ್ಯವನ್ನು ಪೂರ್ಣಗೊಳಿಸಲಾಗುವುದು. ಈ ಸಂಬಂಧ ಸಾರ್ವಜನಿಕರಲ್ಲಿ ಯಾವುದೇ ಗೊಂದಲ ಮತ್ತು ದೂರು ಇದ್ದಲ್ಲಿ ಕಂಟ್ರೋಲ್ ರೂಂ ಸಹಾಯವಾಣಿಯನ್ನು ಸಂಪರ್ಕಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

> **‘** ಚಾಮರಾಜನಗರ ವ್ಯಾಪ್ತಿಯಲ್ಲಿ ಈಗಾಗಲೇ ಕೆಲವು ಗಣತಿದಾರರು ಸಮೀಕ್ಷೆಯನ್ನು ಪೂರ್ಣಗೊಳಿಸಿದ್ದಾರೆ. ಆದರೆ, ಕಸಬಾ ಟೌನ್ ಹಾಗೂ ಗ್ರಾಮೀಣ ಭಾಗದಲ್ಲಿ ಗಣತಿ ಕಾರ್ಯ ವಿಳಂಬವಾಗಿರುವ ಕಾರಣ ಈಗಾಗಲೇ ಪೂರ್ಣಗೊಳಿಸಿರುವ ಗಣತಿದಾರರಿಗೆ ಸಮೀಕ್ಷೆ ಮಾಡಲು ಸೂಚನೆ ನೀಡಲಾಗಿತ್ತು. ಅದರಂತೆ ಈಗಾಗಲೇ 13 ತಂಡ ಸಮೀಕ್ಷೆ ಕಾರ್ಯದಲ್ಲಿ ತೊಡಗಿಕೊಂಡಿದೆ. ಆದರೆ, ಕೆಲವರು ಇದಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಯಾರಿಗೂ ಒತ್ತಡ ಹಾಕಿಲ್ಲ. ಇಷ್ಟ ಇದ್ದರೆ ಸಮೀಕ್ಷೆ ಮಾಡಲಿ, ಇಲ್ಲ ಅಂದರೆ ಬೇಡ ಎಂದು ಹೇಳಿದ್ದೇವೆ.
>
> –ಗಿರಿಜಾ, ತಹಶೀಲ್ದಾರರು, ಚಾಮರಾಜನಗರ.

ಭರಚುಕ್ಕಿ ಜಲಪಾತದ ವೈಭವ ವೀಕ್ಷಿಸಿದ ಕುಂಬ್ಳೆ


ಪತ್ನಿಯ ಜೊತೆ ಭರಚುಕ್ಕಿ ಜಲಪಾತ ವೀಕ್ಷಿಸುತ್ತಿರುವ ಅನಿಲ್ ಕುಂಬ್ಳೆ

ಕೊಳ್ಳೇಗಾಲ, ಅ.8– ತಾಲೂಕಿನ ಪ್ರವಾಸಿ ತಾಣ, ಕರ್ನಾಟಕದ ನಯಾಗರ ಫಾಲ್ಸ್ ಎಂದೇ ಖ್ಯಾತವಾಗಿರುವ ಭರಚುಕ್ಕಿ ಜಲಪಾತಕ್ಕೆ ಖ್ಯಾತ ಮಾಜಿ ಕ್ರಿಕೆಟಿಗ ಹಾಗೂ ಅರಣ್ಯ ವನ್ಯಜೀವಿ ರಾಯಬಾರಿಯಾದ ಅನಿಲ್ ಕುಂಬ್ಳೆ ಅವರು ಕುಟುಂಬ ಸಮೇತ ಬೇಟಿ ನೀಡಿ ಅಲ್ಲಿನ ವೈಭವವನ್ನು ಕಣ್ತುಂಬಿಕೊಂಡರು.

ಭರಚುಕ್ಕಿ ಜಲಪಾತಕ್ಕೆ ಪತ್ನಿ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳ ಜೊತೆ ಆಗಮಿಸಿ ಕೆಲಕಾಲ ಅಲ್ಲಿ ನೀರು ಧುಮ್ಮಿಕ್ಕುವ ವಿಹಂಗಮ ನೋಟವನ್ನು ನೋಡಿ ಅರಣ್ಯಾಧಿಕಾರಿಗಳ ಜೊತೆ ಚರ್ಚಿಸಿ ಸಂತಸ ವ್ಯಕ್ತಪಡಿಸಿದರು. ಬಳಿಕ ಶಿವನಸಮುದ್ರದ ಮಾರಮ್ಮ ಹಾಗೂ ರಂಗನಾಥಸ್ವಾಮಿ ದೇಗುಲಕ್ಕೂ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಈ ವೇಳೆ ಸಹಾಯಕ ಅರಣ್ಯ ಸಂರಕ್ಷಾಧಿಕಾರಿ ಶಿವರಾಮು ಇದ್ದರು

ನ್ಯಾಯಮೂರ್ತಿಗಳ ಮೇಲೆ ಶೂ ಎಸೆತಕ್ಕೆ ಯತ್ನ; ವಕೀಲದಿಂದ ಪ್ರತಿಭಟನೆ



ಶೂ ಎಸೆತ ಯತ್ನ ಪ್ರಕರಣ ಖಂಡಿಸಿ ಜಿಲ್ಲಾ ವಕೀಲರ ಸಂಘದಿಂದ ಪ್ರತಿಭಟನೆ ನಡೆಯಿತು.

ಚಾಮರಾಜನಗರ, ಅ.8– ಸುಪ್ರೀಂಕೋರ್ಟ್ ನ್ಯಾಯಾಧೀಶರ ಮೇಲೆ ಶೂ ಎಸೆತ ಯತ್ನ ಪ್ರಕರಣ ಖಂಡಿಸಿ ನಗರದಲ್ಲಿ ಜಿಲ್ಲಾ ವಕೀಲರ ಸಂಘದಿಂದ ಪ್ರತಿಭಟನೆ ನಡೆಯಿತು.

ನಗರದ ಜಿಲ್ಲಾ ವಕೀಲರ ಸಂಘದ ಕಚೇರಿಯಲ್ಲಿ ಸಂಘದ ಅಧ್ಯಕ್ಷ ಎಸ್. ನಂಜಯ್ಯ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ವಕೀಲರು ಅಲ್ಲಿಂದ ಕಾಲ್ನಡಿಗೆಯಲ್ಲಿ ಮೆರವಣಿಗೆ ಹೊರಟು ನ್ಯಾಯಾಲಯ ರಸ್ತೆ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಅಲ್ಲಿ ಕೆಲಹೊತ್ತು ಪ್ರತಿಭಟನೆ ನಡೆಸಿ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್.ನಂಜಯ್ಯ ಮಾತನಾಡಿ, ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾದ ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ ವಕೀಲ ರಾಕೇಶ್ ಕಿಶೋರ್ ವರ್ತನೆಯಿಂದ ನಮಗೆಲ್ಲ ನೋವಾಗಿದೆ. ಆತನನ್ನು ವಕೀಲ ವೃತ್ತಿಯಿಂದ ವಜಾಗೊಳಿಸಿ ದೇಶದಿಂದ ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು. ನಂತರ ಹಿರಿಯ ವಕೀಲ ಬಿ.ಪ್ರಸನ್ನಕುಮಾರ್ ಮಾತನಾಡಿದರು. ಪ್ರತಿಭಟನೆಯಲ್ಲಿ ಜಿಲ್ಲಾ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ರಂಗಸ್ವಾಮಿ, ಖಜಾಂಚಿ ರಮೇಶ್, ಹಿರಿಯ ವಕೀಲರಾದ ರಾಮಸಮುದ್ರ ಪುಟ್ಟಸ್ವಾಮಿ, ಮಲ್ಲಿಕಾರ್ಜುನಸ್ವಾಮಿ, ನಾಗಣ್ಣ, ನಾಗಮ್ಮ, ಸುಂದರು, ದೇವರಾಜು, ಈಸಾನ್ ಜಾವಿದ್, ಜಯಪ್ರಕಾಶ್, ಇತರರು ಭಾಗವಹಿಸಿದ್ದರು.

ತೆರಕಣಾಂಬಿ ಹುಂಡಿ ಸಮೀಪ ಹುಲಿ ದಾಳಿ : ಹಸು ಬಲಿ


ತೆರಕಣಾಂಬಿ ಹುಂಡಿ ಗ್ರಾಮದ ಸಮೀಪ ಹುಲಿ ದಾಳಿಯಿಂದ ಸಾವಿಗೀಡಾದ ಹಸುವನ್ನು ಅರಣ್ಯ ಸಿಬ್ಬಂದಿ ಹಾಗೂ ಗ್ರಾಮಸ್ಥರು ಪರಿಶೀಲಿಸಿದರು.

ಗುಂಡ್ಲುಪೇಟೆ, ಅ.8– ಹಾಡಹಗಲೇ ಹುಲಿ ದಾಳಿ ನಡೆಸಿ ಮೇಯುತ್ತಿದ್ದ ಹಸುವನ್ನು ಕೊಂದುಹಾಕಿರುವ ಘಟನೆ ತಾಲೂಕಿನ ತೆರಕಣಾಂಬಿ ಹುಂಡಿ ಗ್ರಾಮದ ಸಮೀಪದ ಜಮೀನಿನಲ್ಲಿ ನಡೆದಿದೆ.

ಗ್ರಾಮದ ಚಿಕ್ಕದಾಸಯ್ಯ ಎಂಬುವರ ಮಗ ರಾಮು ಬುಧವಾರ ಮಧ್ಯಾಹ್ನ ತಮ್ಮ ಜಮೀನಿನಲ್ಲಿ ಹಸುಗಳನ್ನು ಮೇಯಲು ಬಿಟ್ಟಿದ್ದಾಗ ಏಕಾಏಕಿ ಹುಲಿ ದಾಳಿ ನಡೆಸಿ ಹಸುವನ್ನು ಕೊಂದು ಹಾಕಿದೆ. ಹಸುವಿನ ಚೀರಾಟ ಕೇಳಿದ ಅಕ್ಕಪಕ್ಕದ ಜಮೀನಿನ ರೈತರು ಜೋರಾಗಿ ಕೂಗುತ್ತಿದ್ದಂತೆ ಹುಲಿ ಅಲ್ಲಿಂದ ಪರಾರಿಯಾಗಿದೆ. ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ಆಗಮಿಸಿದ ಬಫರ್ ವಲಯದ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದರು.

ಈ ಭಾಗದ ಜಮೀನಿನ ಸುತ್ತಲೂ ಗಿಡಗಂಟಿಗಳು ಬೆಳೆದು ದೊಡ್ಡ ದೊಡ್ಡ ಪೊದೆಗಳಾಗಿವೆ. ಇವುಗಳನ್ನು ತೆರವುಗೊಳಿಸುವಂತೆ ಗ್ರಾಮಪಂಚಾಯಿತಿಗೆ ಮನವಿ ಮಾಡಲಾಗಿದೆ. ಹುಲಿ ಸೆರೆಗೆ ಬೋನು ಅಳವಡಿಸಲಾಗುವುದು ಎಂದು ಬಫರ್ ವಲಯದ ಪ್ರಭಾರ ಆರ್‌ಎಫ್‌ಓ ಶಿವಕುಮಾರ್ ತಿಳಿಸಿದ್ದಾರೆ.

ಗ್ರಾಮದ ಸಮೀಪವೇ ಹಾಡಹಗಲೇ ಹತ್ತಾರು ಜನರೆದುರೇ ಹುಲಿ ದಾಳಿ ನಡೆಸಿ ಹಸುವನ್ನು ಕೊಂದುಹಾಕಿರುವುದು ಗ್ರಾಮಸ್ಥರಲ್ಲಿ ಆತಂಕವುಂಟುಮಾಡಿದೆ. ಇದರಿಂದ ತಮ್ಮ ಜಮೀನಿಗೆ ಹೋಗಲು ಭಯಪಡುತ್ತಿದ್ದಾರೆ. ಕೂಡಲೇ ಹುಲಿಯನ್ನು ಸೆರೆಹಿಡಿದು ಕಾಡಿಗೆ ಬಿಡಬೇಕು ಎಂದು ಗ್ರಾಮಸ್ಥರು ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ.

ದೇಶದಿಂದಲೇ ಗಡಿಪಾರು ಮಾಡಿ



ಚಾಮರಾಜನಗರ, ಅ.8– ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲು ಮುಂದಾದ ವ್ಯಕ್ತಿಯನ್ನು ದೇಶದಿಂದ ಗಡಿಪಾರು ಮಾಡಬೇಕು. ಇದರ ನೈತಿಕ ಹೊಣೆಯನ್ನು ಹೊತ್ತು ಮೋದಿ ನೇತೃತ್ವದ ಸರ್ಕಾರ ರಾಜೀನಾಮೆ ನೀಡಬೇಕು ಎಂದು ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಸಿ. ರಾಜಣ್ಣ ಯರಿಯೂರು ಆಗ್ರಹಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮನುವಾದದ ಪ್ರವರ್ತಕರು, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಮೇಲೆ ತನ್ನ ಶೂ ಎಸೆಯಲು ಮುಂದಾಗಿರುವುದು ನ್ಯಾಯದ ಮೇಲಿನ ದಾಳಿ, ಸಂವಿಧಾನ ಮೇಲಿನ ದಾಳಿಯಾಗಿದೆ ಎಂದು ಕಿಡಿಕಾರಿದರು.

ಮನುವಾದಿಗಳ ಈ ಮನಸ್ಥಿತಿಯ ಪೋಷಕರು ಯಾರೆಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. ಇದು ಕೇವಲ ಶೂ ದಾಳಿಯಲ್ಲ ಮನುವಾದದ ಮತಾಂದರು ನಡೆಸಿದ ಸಂವಿಧಾನದ ಮೌಲ್ಯಗಳ ಮೇಲಿನ ಭಯೋತ್ಪಾದಕ ದಾಳಿ ಇದಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ದಸಂಸ ಡಿ.ಜಿ. ಸಾಗರ್ ಬಣದ ಜಿಲ್ಲಾ ಸಂಚಾಲಕ ಸಿ.ಎಂ. ಶಿವಣ್ಣ, ಜನಹಿತಾಶಕ್ತಿ ಹೋರಾಟ ವೇದಿಕೆ ರಾಮಸಮುದ್ರ ಸುರೇಶ್, ಡಿಎಸ್‌ಎಸ್ ಜಿಲ್ಲಾ ಸಂಯೋಜಕ ಬಸವರಾಜು ಕೆರೆಹಳ್ಳಿ, ಜಿಲ್ಲಾ ಸಂಘಟಕರಾದ ನಂಜುಂಡಸ್ವಾಮಿ, ಶಿವಕುಮಾರ್, ಅನಿಲ್‌ಕುಮಾರ್ ಇದ್ದರು.

ನಾಳೆ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಪ್ರಯುಕ್ತ ಜಾಥಾ

ಚಾಮರಾಜನಗರ, ಅ.8– ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಅಂಗವಾಗಿ ಅ.10ರಂದು ಬೆಳಗ್ಗೆ 10 ಗಂಟೆಗೆ ನಗರದ ಚಾಮರಾಜೇಶ್ವರ ದೇವಸ್ಥಾನದಿಂದ ಸೇವೆಗಳಿಗೆ ಪ್ರವೇಶ–ವಿಪತ್ತುಗಳು ಮತ್ತು ತುರ್ತು ಪರಿಸ್ಥಿತಿಗಳಲ್ಲಿ ಮಾನಸಿಕ ಆರೋಗ್ಯ ಎಂಬ ಧ್ಯೇಯವಾಕ್ಯದೊಂದಿಗೆ ಜಾಗೃತಿ ಜಾಥ ಕಾರ್ಯ ಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಅಪ್ರಾಪ್ತೆ ಪ್ರೀತಿಸಿ, ತಾಳಿ ಕಟ್ಟಿದ್ದ ಪ್ರಿಯಕರನ ವಿರುದ್ಧ ಪೋಕ್ಸೋ ಪ್ರಕರಣ

ಗುಂಡ್ಲುಪೇಟೆ, ಅ.8– ಅಪ್ರಾಪ್ತೆಯನ್ನು ಪ್ರೀತಿಸಿ ದೇವಾಲಯದಲ್ಲಿ ಆಕೆಗೆ ತಾಳಿ ಕಟ್ಟಿದ್ದ ಪ್ರಿಯಕರನ ವಿರುದ್ಧ ತಾಲೂಕಿನ ತೆರಕಣಾಂಬಿ ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಪ್ರಕರಣ ದಾಖಲಾಗಿದೆ.

ತಾಲೂಕಿನ ಕುಂದಕೆರೆ ಗ್ರಾಮದ ವೆಂಕಟರಾಜು(25) ಎಂಬಾತನ ವಿರುದ್ಧ ಪ್ರಕರಣ ದಾಖಲಾಗಿದೆ. ಚಾಮರಾಜನಗರ ತಾಲೂಕಿನ ಗ್ರಾಮವೊಂದರ 15 ವರ್ಷದ ಅಪ್ರಾಪ್ತೆಯನ್ನು ಪ್ರೀತಿಸುತ್ತಿದ್ದ ಈತ ಆ.17ರಂದು ತೆರಕಣಾಂಬಿ ಸಮೀಪದ ವೆಂಕಟರಮಣಸ್ವಾಮಿ ದೇವಾಲಯಕ್ಕೆ ಬೈಕಿನಲ್ಲಿ ಕರೆ ತಂದು ಪೂಜಾರಿಗೆ ಆಕೆಗೆ 21 ವರ್ಷ ಎಂದು ಸುಳ್ಳು ಹೇಳಿ ತಾಳಿ ಕಟ್ಟಿದ್ದ. ಆದರೆ ತನ್ನ ಹಾಗೂ ಅಪ್ರಾಪ್ತೆಯ ಮನೆಯವರಿಗೆ ವಿಷಯ ತಿಳಿಸದೆ ಮುಚ್ಚಿಟ್ಟಿದ್ದ.

ನಂತರದ ದಿನಗಳಲ್ಲಿ ವಿಷಯ ತಿಳಿದ ಶಿಶು ಅಭಿವೃದ್ಧಿ ಇಲಾಖೆಯ ಅಧಿಕಾರಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿರುವ ತೆರಕಣಾಂಬಿ ಪೊಲೀಸರು ಬಾಲಕಿಯನ್ನು ಬಾಲ ಮಂದಿರಕ್ಕೆ ಕಳುಹಿಸಿದ್ದು, ಆರೋಪಿಯ ಬಂಧನಕ್ಕೆ ಕ್ರಮ ಕೈಗೊಂಡಿದ್ದಾರೆ.

ಹಸಗೂಲಿ ಪುಟ್ಟಸ್ವಾಮಪ್ಪ ನಿಧನ



ಗುಂಡ್ಲುಪೇಟೆ, ಅ.8– ತಾಲೂಕಿನ ಹಸಗೂಲಿ ಗ್ರಾಮದ ವಾಸಿ ಕೃಷಿಕರಾದ ಪುಟ್ಟಸ್ವಾಮಪ್ಪ(85) ಬುಧವಾರ ನಿಧನರಾದರು.

ಮೃತರು ತೆರಕಣಾಂಬಿ ಪೊಲೀಸ್ ಠಾಣೆಯ ಸಹಾಯಕ ಸಬ್‌ಇನ್ಸ್‌ಪೆಕ್ಟರ್ ಹೆಚ್.ಪಿ.ಶಿವನಂಜಪ್ಪ ಸೇರಿದಂತೆ ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿ ಹಾಗೂ ಅಪಾರ ಬಂಧುವರ್ಗದವರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಬುಧವಾರ ಸ್ವಗ್ರಾಮವಾದ ಹಸಗೂಲಿಯ ಅವರ ತೋಟದಲ್ಲಿ ನೆರವೇರಿಸಲಾಯಿತು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೈಸೂರು ಮಿತ್ರ 46 — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ದೇಶ ಕಂಡ ಶ್ರೇಷ್ಠ ಕವಿ ಮಹರ್ಷಿ ವಾಲ್ಮೀಕಿ



ಮುಳ್ಳೂರು ಸರ್ಕಾರಿ ಪ್ರೌಢಶಾಲೆಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು.

ಸರಗೂರು, ಅ.8– ರಾಮಾಯಣ ಮಹಾಕಾವ್ಯ ರಚಿಸಿದ ಮಹರ್ಷಿ ವಾಲ್ಮೀಕಿ ದೇಶ ಕಂಡ ಶ್ರೇಷ್ಠ ಕವಿ ಎಂದು ತಾಲೂಕಿನ ಮುಳ್ಳೂರು ಸರ್ಕಾರಿ ಶಾಲೆ ಎಸ್‌ಡಿಎಂಸಿ ಅಧ್ಯಕ್ಷ ರವಿಕುಮಾರ್ ತಿಳಿಸಿದರು.

ತಾಲೂಕಿನ ಮುಳ್ಳೂರು ಸರ್ಕಾರಿ ಪ್ರೌಢ ಶಾಲೆಯಲ್ಲಿ ನಡೆದ ವಾಲ್ಮೀಕಿ ಜಯಂತಿಯಲ್ಲಿ ಮಾತನಾಡಿದ ಅವರು, ಹಿಂದೂ ಧರ್ಮದ ಪವಿತ್ರ ಗ್ರಂಥಗಳಲ್ಲಿ ಒಂದಾದ ರಾಮಾಯಣವನ್ನು ಬರೆದಿದ್ದಕ್ಕಾಗಿ ಮಹರ್ಷಿ ವಾಲ್ಮೀಕಿ ಪ್ರಸಿದ್ಧರಾಗಿದ್ದಾರೆ. ವಾಲ್ಮೀಕಿ ರಾಮಾಯಣವು 24,253 ಶ್ಲೋಕಗಳನ್ನು ಒಳಗೊಂಡಿದೆ ಎಂದ ಅವರು ಮಹರ್ಷಿ ವಾಲ್ಮೀಕಿ ಅವರ ತತ್ವಾದರ್ಶಗಳನ್ನು ಯುವ ಪೀಳಿಗೆ ಮೈಗೂಡಿಸಿಕೊಳ್ಳಬೇಕು ಎಂದರು.

ಮಹರ್ಷಿ ವಾಲ್ಮೀಕಿ ಒಂದು ಸಮುದಾಯಕ್ಕೆ ಸೀಮಿತರಲ್ಲ. ಬದಲಿಗೆ ಇಡೀ ಮನುಕುಲಕ್ಕೆ ಬೇಕಾದ ಮಹಾನ್ ಸಂತ. ರಾಮಾಯಣ ಮಹಾಕಾವ್ಯದ ಮೂಲಕ ನಾವು ಹೇಗೆ ಮೌಲ್ಯಯುತ ಬದುಕು ಕಟ್ಟಿಕೊಳ್ಳಬೇಕು ಎಂಬುದನ್ನು ವಾಲ್ಮೀಕಿ ಅವರು ತಿಳಿಸಿಕೊಟ್ಟಿದ್ದಾರೆ. ಆ ಮಹಾನ್ ದಾರ್ಶನಿಕರು ಹಾಕಿಕೊಟ್ಟ ಹಾದಿಯಲ್ಲಿ ನಾವೆಲ್ಲರೂ ನಡೆಯಬೇಕಾಗಿದೆ ಎಂದರು.

ಮುಖ್ಯ ಶಿಕ್ಷಕ ಎನ್.ಡಿ.ವೆಂಕಟೇಶ್ ಮಾತನಾಡಿ, ಬೇಡ ಕುಲದಲ್ಲಿ ಜನಿಸಿದ ವ್ಯಕ್ತಿಯೊಬ್ಬ ಕವಿಯಾಗಿದ್ದು ಮಾತ್ರವಲ್ಲ ಆದರ್ಶ ಶಿಕ್ಷಕನಾಗಿ, ಪ್ರಜೆಗಳನ್ನು ಯಾವ ರೀತಿ ರಕ್ಷಿಸಬೇಕು. ಯಾವ ರೀತಿ ಆಡಳಿತ ನಡೆಸಬೇಕು ಎಂಬುದರ ಚಿತ್ರಣವನ್ನು ರಾಮಾಯಣದ ಮೂಲಕ ಇಡೀ ಜಗತ್ತಿಗೆ ತಿಳಿಸಿದವರು ಮಹರ್ಷಿ ವಾಲ್ಮೀಕಿ ಅವರು ಅಜ್ಞಾನದಿಂದ ಸುಜ್ಞಾನದ ಕಡೆಗೆ ಸಾಗುವ ದಾರಿ ತೋರಿಸಿಕೊಟ್ಟ ಮಹಾತ್ಮರು ಎಂದು ಗುಣಗಾನ ಮಾಡಿದರು.

ಈ ವೇಳೆ ಎಸ್‌ಡಿಎಂಸಿ ಉಪಾಧ್ಯಕ್ಷೆ ಅಂಬಿಕಾ, ಸದಸ್ಯರಾದ ಮಮತಾ, ಶಿವಚನ್ನಪ್ಪ, ಕೆಂಪರಾಜನಾಯಕ, ದೈಹಿಕ ಶಿಕ್ಷಕ ರಮೇಶ್, ಶಿಕ್ಷಕರಾದ ಉಮೇಶಪ್ಪ, ಮರಳುಸಿದ್ದಪ್ಪ, ತ್ರಿವೇಣಿ, ಅಶ್ವಿನಿ, ಮಹೇಶ್ ಸೇರಿದಂತೆ ವಿದ್ಯಾರ್ಥಿಗಳು ಹಾಗೂ ಬಿಸಿಊಟ ಸಿಬ್ಬಂದಿ ವರ್ಗ, ಇನ್ನಿತರರಿದ್ದರು.

ಡಾ. ರಾಜೇಂದ್ರ ಸ್ವಾಮೀಜಿ ಸೇವೆ ಅವಿಸ್ಮರಣೀಯ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬಣ್ಣನೆ

ತಿ.ನರಸೀಪುರ, ಅ.8– ಸುತ್ತೂರು ಮಠದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರು ಲಕ್ಷಾಂತರ ಮಕ್ಕಳಿಗೆ ಶಿಕ್ಷಣ ಹಾಗೂ ಅನ್ನ ದಾಸೋಹ ನಡೆಸಿ, ಅವರ ಜೀವನದ ದಾರಿದೀಪವಾಗಿದ್ದರು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಬಣ್ಣಿಸಿದರು.

ಜಗದ್ಗುರು ಡಾ.ಶ್ರೀಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಸೇವಾ ಪ್ರತಿಷ್ಠಾನದಿಂದ ಪಟ್ಟಣದ ವಿದ್ಯೋದಯ ಕಾಲೇಜು ಸಭಾಂಗಣದಲ್ಲಿ ಬುಧವಾರ ನಡೆದ ಸುತ್ತೂರು ವೀರಸಿಂಹಾಸನ ಮಹಾ ಸಂಸ್ಥಾನ ಮಠದ ಡಾ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 'ಶತೋತ್ತರ ದಶಮಾನೋತ್ಸವ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ ಹಾಗೂ ಜ್ಞಾನದಿಂದ ಸಮಾಜದ ಉದ್ಧಾರ ಸಾಧ್ಯ ಎಂದು ನಂಬಿದ್ದ ಸ್ವಾಮೀಜಿಗಳು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವ ನೀಡಿದ್ದರು. ಹಸಿವು ಇರುವಾಗ ಕಲಿಸಲು ಸಾಧ್ಯವಿಲ್ಲ ಎಂಬುದನ್ನು ಅರಿತಿದ್ದ ಶ್ರೀಗಳು ಅನ್ನ ದಾಸೋಹದ ಜೊತೆಗೆ ಶಿಕ್ಷಣ ನೀಡಿದರು. ಶ್ರೀಗಳು ಸಮಾಜಕ್ಕೆ ನೀಡಿದ ಸೇವೆ ಅವಿಸ್ಮರಣೀಯ ಎಂದರು.

ತಮ್ಮ 12ನೇ ವಯಸ್ಸಿಗೆ ಸುತ್ತೂರು ವೀರ ಸಿಂಹಾಸನ ಮಠದ 23ನೇ ಪೀಠಾಧ್ಯಕ್ಷರಾಗಿ ದೀಕ್ಷೆ ಸ್ವೀಕರಿಸಿದ ಶ್ರೀಗಳು, ಏಕಕಾಲದಲ್ಲಿ ಧಾರ್ಮಿಕ, ಸಾಮಾಜಿಕ, ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ಸೇವೆಗಳನ್ನು ನಿರಂತರವಾಗಿ ಮಾಡಿದರು. ಸ್ವಾರ್ಥ, ಅಸೂಯೆಗಳಿಲ್ಲದ ಅವರ ಸೇವಾಪರ ಚಿಂತನೆಯ ಪ್ರತೀಕವೇ ಜಗತ್ತಿನಾದ್ಯಂತ ಇಂದು ಬೃಹದಾಕಾರವಾಗಿ ಬೆಳೆದಿರುವ ಜೆಎಸ್‌ಎಸ್ ಸಂಸ್ಥೆ. ಸಂಸ್ಥೆ ಪ್ರಾರಂಭಿಸಿದ ದಿನಗಳಲ್ಲಿ ಹಾಸ್ಟೆಲ್ ಮಕ್ಕಳ ದಾಸೋಹಕ್ಕೆ ಹಣವಿಲ್ಲದೇ ತಮ್ಮ ಬಂಗಾರದ ಕರಡಿಗೆ ಮಾರಾಟ ಮಾಡಿ, ಆ ಹಣದಲ್ಲಿ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ, ಊಟ, ವಿದ್ಯಾರ್ಜನೆ ನೀಡಿದ್ದಾರೆ. ಅಲ್ಲದೇ ಲಕ್ಷಾಂತರ ಮಂದಿಗೆ ನೂರಾರು ಸಂಸ್ಥೆಗಳನ್ನು ತೆರೆದು ಕತ್ತಲಿನಿಂದ ಬೆಳಕಿನೆಡೆಗೆ ಹೋಗುವಂತಹ ದಾರಿಯನ್ನು ರಾಜೇಂದ್ರ ಸ್ವಾಮೀಜಿಗಳು ಸಮಾಜಕ್ಕೆ ಕೊಡುಗೆ ಕೊಟ್ಟು ಹೋಗಿದ್ದಾರೆ ಎಂದರು.



ಕಾರ್ಯಕ್ರಮದಲ್ಲಿ ಜಯದೇವ ಹೃದ್ರೋಗ ಸಂಸ್ಥೆ ನೂತನ ನಿರ್ದೇಶಕ ಡಾ.ದಿನೇಶ್ ಅವರನ್ನು ಸನ್ಮಾನಿಸಲಾಯಿತು.

ಶಿವರಾತ್ರಿ ರಾಜೇಂದ್ರ ಶ್ರೀಗಳು ಶಿಕ್ಷಣಕ್ಕೆ ನೀಡಿದ್ದ ಮಹತ್ವವನ್ನು ಅವರ ದೂರದೃಷ್ಟಿತ್ವದಿಂದ ತಿಳಿಯಬೇಕಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದ ವೇಳೆ ಶೇ.8 ರಷ್ಟಿದ್ದ ವಿದ್ಯಾವಂತರ ಸಂಖ್ಯೆ ಇಂದು ಶೇ.75ಕ್ಕೆ ಏರಿಕೆಯಾಗಿದ್ದು, ಇದಕ್ಕೆ ರಾಜೇಂದ್ರ ಶ್ರೀಗಳ ಕೊಡುಗೆಯೂ ಸಾಕ್ಷಿಯಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಎಂಎಲ್‌ಸಿ ಡಾ.ಯತೀಂದ್ರ, ಶಾಸಕ ಗಣೇಶ್ ಪ್ರಸಾದ್ ಮಾತನಾಡಿದರು. ಇದೇ ವೇಳೆ ಬೆಂಗಳೂರು ಜಯದೇವ ಹೃದ್ರೋಗ ಸಂಸ್ಥೆ ನೂತನ ನಿರ್ದೇಶಕ ಡಾ.ದಿನೇಶ್ ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರೇಣುಕಾ ಪ್ರಸನ್ನ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮಕ್ಕೂ ಮುನ್ನಾ ಡಾ.ಶಿವರಾತ್ರಿ ರಾಜೇಂದ್ರ ಶ್ರೀಗಳ ಪುತ್ಥಳಿಯನ್ನು ಪಟ್ಟಣದ ಖಾಸಗಿ ಬಸ್ ನಿಲ್ದಾಣದಿಂದ ಕಾಲೇಜು ಸಭಾಂಗಣಕ್ಕೆ ಮೆರವಣಿಗೆ ಮೂಲಕ ತರಲಾಯಿತು. ಅತ್ಯಾಕರ್ಷಕವಾಗಿ ಬಗೆ ಬಗೆಯ ಹೂಗಳಿಂದ ಅಲಂಕೃತಗೊಂಡಿದ್ದ ಬೆಳ್ಳಿ ರಥದಲ್ಲಿ ಶ್ರೀಗಳ ಪುತ್ಥಳಿ ಇರಿಸಿ ಪೂಜೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಲಾಯಿತು. ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ನಗಾರಿ ಸೇರಿದಂತೆ ವಿವಿಧ ಕಲಾ ತಂಡಗಳು ಭಾಗವಹಿಸಿದ್ದವು.

ಈ ವೇಳೆ ತುಮಕೂರು ಸಿದ್ಧಗಂಗಾ ಮಠದ ಕಿರಿಯ ಶ್ರೀಗಳಾದ ಶಿವಸಿದ್ದೇಶ್ವರ ಸ್ವಾಮೀಜಿ, ವಾಟಾಳು ಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಪಾಂಡುಮಟ್ಟಿ ಮಠಾಧ್ಯಕ್ಷ ಗುರುಬಸವ ಸ್ವಾಮೀಜಿ, ವಿದ್ಯೋದಯ ಶಿಕ್ಷಣ ಸಂಸ್ಥೆ ಗೌರವ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ, ಮದ್ದಾರಲಿಂಗಯ್ಯನ ಹುಂಡಿ ವಿರಕ್ತ ಮಠದ ಗೌರಿಶಂಕರ ಸ್ವಾಮೀಜಿ, ಬೆನಕನಹಳ್ಳಿ ಪಟ್ಟದ ಮಠದ ಇಮ್ಮಡಿ ಬಸವಲಿಂಗ ಸ್ವಾಮೀಜಿ, ಕಾರ್ಯಕ್ರಮದ ಆಯೋಜಕ ಕೃಷಿಕ ಸಮಾಜದ ತಾಲೂಕು ಅಧ್ಯಕ್ಷ ಬೆನಕನಹಳ್ಳಿ ಶಿವಮಲ್ಲಪ್ಪ, ಬಸವ ಬಳಗದ ಅಧ್ಯಕ್ಷ ಹಲವಾರು ಪರಮೇಶ್ ಪಟೇಲ್, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ಹೋಟೆಲ್ ರಾಜಣ್ಣ, ಶಿವಕುಮಾರ್, ಶ್ರೀಶಿವಕುಮಾರಸ್ವಾಮಿ ಟ್ರಸ್ಟ್ ಅಧ್ಯಕ್ಷ ಲಿಂಗಪ್ಪ, ಮಾಯಪ್ಪ, ಬಸವ ಕೇಂದ್ರದ ಅಧ್ಯಕ್ಷ ಪರಮೇಶ್ ಪಟೇಲ್, ದೊಡ್ಡನಹುಂಡಿ ನಂಜುಂಡಸ್ವಾಮಿ, ಪುರಸಭೆ ಸದಸ್ಯ ಎಸ್.ಕೆ.ಕಿರಣ್, ಕುರುಬೂರು ಶಿವು, ಜ್ಯೋತಿ ಸೇರಿದಂತೆ ಮತ್ತಿತರರಿದ್ದರು.

> “ತ್ರಿವಿಧ ದಾಸೋಹಿ, ಧಣಿವರಿಯದ ಕಾಯಕ ಯೋಗಿಯಾಗಿ ಶಾಂತಿ, ಸಾಮರಸ್ಯ, ದಯೆ, ನಿಸ್ವಾರ್ಥತೆಯನ್ನು ಬದುಕಿನಲ್ಲಿ ಅಳವಡಿಸಿಕೊಂಡಿದ್ದರು. ಶ್ರೀಮಠವು ಇಂದಿಗೂ ಅವುಗಳನ್ನು ಅನೂಚಾನವಾಗಿ ನಡೆಸಿಕೊಂಡು ಬರುತ್ತಿದೆ. ಮಾತೃ ಹೃದಯಿಗಳಾದ ಶ್ರೀಗಳವರು ಕಿರಿಯ ವಯಸ್ಸಿನಲ್ಲಿಯೇ ಮಠದ ಜವಾಬ್ದಾರಿ ಹೊರುವುದರೊಂದಿಗೆ ಅಂದಿನ ಕಾಲದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣಕ್ಕಾಗಿ ಪರದಾಡುತ್ತಿದ್ದ ವಿದ್ಯಾರ್ಥಿಗಳನ್ನು ಕಂಡು ಮರುಕಪಟ್ಟು, ಗ್ರಾಮೀಣ ಭಾಗದಲ್ಲಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದರು. ಆರ್ಥಿಕ ಸಂಕಷ್ಟದ ನಡುವೆಯೂ ಚಿನ್ನದ ಕರಡಿಗೆ ಮಾರಾಟ ಮಾಡಿ ವಿದ್ಯಾರ್ಥಿ ನಿಲಯಗಳನ್ನು ನಡೆಸಿದ್ದು, ಅವರ ತ್ಯಾಗ ಮನೋಭಾವಕ್ಕೆ ಸಾಕ್ಷಿಯಾಗಿದೆ.
> – ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ.

ಶಾಂತಿಪುರ ಮಾರುಕಟ್ಟೆಯಲ್ಲಿ ತಂಬಾಕು ಹರಾಜಿಗೆ ಚಾಲನೆ

ಉತ್ತಮ ಬೆಲೆಗೆ ಶಾಸಕ ಅನಿಲ್ ಒತ್ತಾಯ

ಹೆಚ್.ಡಿ.ಕೋಟೆ, ಅ.8– ಮೈಸೂರು ಭಾಗದಲ್ಲಿ ಬೆಳೆದಿರುವ ತಂಬಾಕು ಗುಣಮಟ್ಟದಿಂದ ಕೂಡಿದ್ದು ಉತ್ತಮ ಬೆಲೆ ನೀಡಬೇಕು ಎಂದು ಶಾಸಕ ಅನಿಲ್ ಆಗ್ರಹಿಸಿದರು.

ಪಟ್ಟಣದ ಶಾಂತಿಪುರದಲ್ಲಿರುವ ತಂಬಾಕು ಮಾರುಕಟ್ಟೆ ಪ್ಲಾಟ್ ಫಾರಂ 65ರಲ್ಲಿ ತಂಬಾಕು ಹರಾಜಿಗೆ ಚಾಲನೆ ನೀಡಿ ಮಾತನಾಡಿದ ಅವರು, ಮೈಸೂರು ಭಾಗದಲ್ಲಿ ಉತ್ಕೃಷ್ಟ ತಂಬಾಕು ಬೆಳೆಯಲಾಗುತ್ತಿದೆ. ಆದರೆ ಸರಿಯಾದ ದರ ನೀಡುತ್ತಿಲ್ಲ ಎಂದು ರೈತರು ದೂರುತ್ತಾರೆ. ಈ ಬಾರಿ ಉತ್ತಮ ಗುಣಮಟ್ಟದ ತಂಬಾಕಿಗೆ ಉತ್ತಮ ದರವೇ ದೊರೆಯಬೇಕು ಎಂದ ಅವರು ತಂಬಾಕು ಮಂಡಳಿ ಸದಸ್ಯರು ರೈತರು ಮತ್ತು ಖರೀದಿದಾರರೊಂದಿಗೆ ಮಾತುಕತೆ ನಡೆಸಿ ಹೆಚ್ಚಿನ ಬೆಲೆ ದೊರೆಯುವಂತೆ ಕ್ರಮ ವಹಿಸಬೇಕು ಎಂದರು.



ತಂಬಾಕು ಹರಾಜಿಗೆ ಶಾಸಕ ಅನಿಲ್ ಚಾಲನೆ ನೀಡಿದರು.

ತಂಬಾಕು ಮಂಡಳಿ ನಿರ್ದೇಶಕ ಶ್ರೀನಿವಾಸ್ ಮಾತನಾಡಿ, ಕಳೆದ ಬಾರಿ 1 ಕೆಜಿ ತಂಬಾಕು 361 ರೂ.ಗಳಿಗೆ ಮಾರಾಟವಾಗಿತ್ತು. ಈ ಬಾರಿ ಮೊದಲ ಬಿಡ್‌ನಲ್ಲಿ 320 ರೂ.ಗಳಿಗೆ ಮಾರಾಟವಾಗಿದೆ. ಮುಂದಿನ ದಿನಗಳಲ್ಲಿ ಬೆಲೆ ಹೆಚ್ಚಾಗುವ ನಿರೀಕ್ಷೆ ಇದೆ ಎಂದರು.

ಈ ಬಾರಿ ರೈತರು 8 ಮಿಲಿಯನ್ ತಂಬಾಕು ಬೆಳೆಯುವ ನಿರೀಕ್ಷೆ ಇದೆ. ಕಳೆದ ಬಾರಿ 8.37 ಮಿಲಿಯನ್ ತಂಬಾಕನ್ನು ಬೆಳೆದು ಮಾರಾಟ ಮಾಡಿದ್ದರು. ಓರ್ವ ರೈತ 1.7 ಹೆಕ್ಟರ್ ಪ್ರದೇಶದಲ್ಲಿ ತಂಬಾಕು ಬೆಳೆಯಬೇಕು. ಅದೇ ರೀತಿ ತಾಲೂಕಿನಲ್ಲಿ ಈ ಬಾರಿ 7 ಸಾವಿರ ಹೆಕ್ಟರ್ ಪ್ರದೇಶದಲ್ಲಿ ರೈತರು ತಂಬಾಕು ಬೆಳೆದಿದ್ದಾರೆ ಎಂದರು.

ಕಳೆದ ಬಾರಿ ತಾಲೂಕಿನಲ್ಲಿ 3845 ಅಧಿಕೃತ ಹಾಗೂ 4956 ಅನಧಿಕೃತ ತಂಬಾಕು ಬೆಳೆಗಾರರಿದ್ದು, ಅಧಿಕೃತ 1217 ಮತ್ತು ಅನಧಿಕೃತ 1651 ಬ್ಯಾರನ್ ಗಳಿದ್ದವು ಎಂದ ಅವರು, ಅನಧಿಕೃತ ಬೆಳೆಗಾರರಿಗೆ ಆದಷ್ಟು ಬೇಗ ಕಾರ್ಡ್ ವಿತರಿಸಲು ಯೋಜನೆ ರೂಪಿಸಲಾಗಿದೆ ಎಂದರು.

ಒಟ್ಟಾರೆ ಕಳೆದ ಬಾರಿ 214.69 ಕೋಟಿ ಮೌಲ್ಯದ ತಂಬಾಕು ಮಾರಾಟ ಮಾಡಲಾಗಿತ್ತು. ಈ ಬಾರಿ ಆ ಪ್ರಮಾಣ ಹಿಂದಿಕ್ಕುವ ಎಲ್ಲಾ ಸೂಚನೆಗಳಿವೆ. ಕಾರಣ ಈ ಬಾರಿ ಉತ್ತಮ ದರ ದೊರೆಯುವ ಭರವಸೆ ಇದೆ ಎಂದು ರೈತರಿಗೆ ಮಾಹಿತಿ ನೀಡಿದರು.

ತಂಬಾಕು ಬೆಳೆಗಾರ ಹಾಗೂ ಮುಖಂಡ ಬಿ.ವಿ.ಬಸವರಾಜ್ ಮಾತನಾಡಿ, ಕೇಂದ್ರ ತಂಬಾಕು ಮಂಡಳಿ ಸಭೆಗಳು ಆಂಧ್ರ ಪ್ರದೇಶದಲ್ಲಿ ನಡೆಯುತ್ತಿದ್ದು, ಆ ಸಭೆಗಳು ಕರ್ನಾಟಕದಲ್ಲೂ ನಡೆಯುವಂತೆ ವ್ಯವಸ್ಥೆ ಮಾಡಿ ಹಾಗೂ ಗುಣಮಟ್ಟದ ಉತ್ತಮ ತಂಬಾಕು ಬೆಳೆದ ರೈತರನ್ನು ಗುರುತಿಸುವ ಜೊತೆಗೆ, ತಂಬಾಕು ಮಂಡಳಿಯಿಂದ ತಂಬಾಕು ಬೆಳೆಗಾರರಿಗೆ ಬೋನಸ್ ನೀಡಬೇಕು ಎಂದು ತಂಬಾಕು ಮಂಡಳಿ ನಿರ್ದೇಶಕ ಶ್ರೀನಿವಾಸ್ ಅವರಿಗೆ ಮನವಿ ಮಾಡಿದರು.

ತಂಬಾಕು ಕ್ರಾಪ್ ಕಮಿಟಿ ಸದಸ್ಯ ಪರಶಿವಮೂರ್ತಿ, ಹರಾಜು ಮಾರುಕಟ್ಟೆ ಸೂಪರಿಡೆಂಟ್ ಹೆಚ್.ವಿ.ವಿಜಯಕುಮಾರ್, ಮುಖಂಡರಾದ ಮೊತ್ತ ಬಸವರಾಜಪ್ಪ, ಎ.ಜೆ.ಕಾಳೇಗೌಡ, ಕೆಂಡಗಣ್ಣಸ್ವಾಮಿ, ಶಿವರಾಜಪ್ಪ, ಆನಂದ, ಮೇಟಿಕುಪ್ಪೆ ಚಂದ್ರಶೇಖರ್, ಸುರೇಶ್, ಗುರುಸ್ವಾಮಿ, ಮಾದರಾಜು, ಪೃಥ್ವಿ, ಸುದರ್ಶನ್, ವೇಣುಗೋಪಾಲ್, ಸಿದ್ದರಾಜು, ಸತೀಶ್, ರೈತರು ಹಾಜರಿದ್ದರು.

ಖಾಸಗಿ ಬಸ್ ಏಜೆಂಟರ ಸಂಘದ ಮಾಜಿ ಅಧ್ಯಕ್ಷ ಪಿ.ಪುಟ್ಟರಾಜುಗೆ ಶ್ರದ್ಧಾಂಜಲಿ

ತಿ.ನರಸೀಪುರ, ಅ.8– ಪಟ್ಟಣದ ಖಾಸಗಿ ಬಸ್ ನಿಲ್ದಾಣದಲ್ಲಿ ಬುಧವಾರ ತಾಲೂಕು ಖಾಸಗಿ ಬಸ್ ಏಜೆಂಟರ ಸಂಘದ ಮಾಜಿ ಅಧ್ಯಕ್ಷ ಪಿ.ಪುಟ್ಟರಾಜು ಅವರಿಗೆ ಸಂಘದ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ತಾಲೂಕು ನಾಯಕರ ಸಂಘದ ಅಧ್ಯಕ್ಷ ಎಂ.ಡಿ.ಬಸವರಾಜು ಮಾತನಾಡಿ, ಪುಟ್ಟರಾಜು ಅವರ ಸಾಮಾಜಿಕ ಕಾರ್ಯವೈಖರಿ ಹಾಗೂ ಜನಪರ ಕಾಳಜಿ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು. ಅಲ್ಲದೇ ಪುಟ್ಟರಾಜು ಅವರು ನಾಗರಿಕ ಸೇವಾ ಸಮಿತಿ ಪ್ರಾರಂಭಿಸಿ ತಾಲೂಕಿನ ಅನೇಕ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ದೊರಕಿಸುವ ನಿಟ್ಟಿನಲ್ಲಿ ನಮ್ಮೊಡನೆ ಹೋರಾಟಕ್ಕೆ ಬೆಂಬಲವಾಗಿ ನಿಂತಿದ್ದರು. ಜೊತೆಗೆ ಖಾಸಗಿ ಬಸ್ ಮಾಲೀಕರಾಗಿ ಕಾರ್ಮಿಕರು, ನೊಂದವರ ಬಗ್ಗೆ ಕಾಳಜಿ ಹೊಂದಿದ್ದರು ಎಂದು ಸ್ಮರಿಸಿದರು.



ತಿ.ನರಸೀಪುರದಲ್ಲಿ ಪಿ.ಪುಟ್ಟರಾಜು ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಖಾಸಗಿ ಬಸ್ ಏಜೆಂಟರ ಅಧ್ಯಕ್ಷರಾಗಿ ಸಾಕಷ್ಟು ಸೇವಾ ಕಾರ್ಯ, ಪ್ರತಿಭಾವಂತರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ಹಾಗೂ ವಿವಿಧ ಕಲಾವಿದರಿಗೆ ಅವಕಾಶ ಕೊಡಿಸುವಲ್ಲಿ ಶ್ರಮಿಸಿದ್ದರು. ಇವರ ಅಗಲಿಕೆ ವೈಯಕ್ತಿಕವಾಗಿ ನೋವು ತಂದಿದೆ ಎಂದರು.

ಸಂಘದ ಗೌರವಾಧ್ಯಕ್ಷ, ಮಹದೇಶ್ವರ ಭವನ್ ಹೋಟೆಲ್ ಮಾಲೀಕ ರಾಜಣ್ಣ, ಅಧ್ಯಕ್ಷ ಶ್ರೀನಿವಾಸ್, ಕಾರ್ಯದರ್ಶಿ ರಾಜಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ರಾಜಣ್ಣ, ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್, ತಾಲೂಕು ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಮಹದೇವಯ್ಯ, ಕೆ.ಎನ್.ಪ್ರಭುಸ್ವಾಮಿ, ಸೋಮನಾಥಪುರ ಪಿಎಸಿಎಸ್ ಮಾಜಿ ಅಧ್ಯಕ್ಷ ಆರ್‌ಟಿಪಿ ಶಿವಣ್ಣ, ತಾಪಂ ಮಾಜಿ ಉಪಾಧ್ಯಕ್ಷ ಡಾ.ಬಿ.ಮರಯ್ಯ, ಚಂದ್ರೇಗೌಡ, ಪುಟ್ಟು, ಮುಖಂಡರಾದ ಪಿ.ಸ್ವಾಮಿನಾಥಗೌಡ, ಸಂದೇಶ್, ಮಣಿಕಂಠರಾಜ್‌ಗೌಡ, ಪಾರುಪತ್ತೇದಾರ್ ದೀಪು, ವೆಂಕಟೇಶ್, ಕುಮಾರ್, ಶಂಕರ್, ಮಾಧು, ನಂಜಪ್ಪ ಮತ್ತಿತರರಿದ್ದರು.

ನಂ.ಗೂಡಲ್ಲಿ ಲೋಕಾಯುಕ್ತರಿಂದ ಅಹವಾಲು ಸ್ವೀಕಾರ

ನಂಜನಗೂಡು, ಅ.8– ನಗರದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ಲೋಕಾಯುಕ್ತರು ಸಾರ್ವಜನಿಕರಿಂದ ದೂರು, ಅಹವಾಲುಗಳನ್ನು ಸ್ವೀಕರಿಸಿದರು.

ರಾಜ್ಯ ಲೋಕಾಯುಕ್ತ ನಿರೀಕ್ಷಕ ಪಿ.ಉಮೇಶ್ ಅವರಿಗೆ ಸಾರ್ವಜನಿಕರಿಂದ ತಹಸೀಲ್ದಾರ್ ಕಚೇರಿಯಲ್ಲಿ ರೈತರ ಸಮಸ್ಯೆ, ಆದಾಯ ಪ್ರಮಾಣ ಪತ್ರ ಸೇರಿದಂತೆ ವಿವಿಧ ಪ್ರಮಾಣ ಪತ್ರಗಳ ವಿತರಣೆಯಲ್ಲಿ ವಿಳಂಬ, ಆಹಾರ ಇಲಾಖೆಯಲ್ಲಿ ಪಡಿತರ ಚೀಟಿಗಳ ಸಮಸ್ಯೆ, ಗ್ರಾಪಂಗಳಲ್ಲಿ ಕೆಲಸ ವಿಳಂಬ, ಸ್ಮಶಾನ ಸಮಸ್ಯೆ ಸೇರಿದಂತೆ ಒಟ್ಟು 16 ಅರ್ಜಿಗಳು ಬಂದಿದ್ದು ಈ ಬಗ್ಗೆ ಚರ್ಚೆ ನಡೆಯಿತು.



ರಾಜ್ಯ ಲೋಕಾಯುಕ್ತ ನಿರೀಕ್ಷಕ ಪಿ.ಉಮೇಶ್ ಅಹವಾಲು ಸ್ವೀಕರಿಸಿದರು.

ರಾಜ್ಯ ಲೋಕಾಯುಕ್ತ ನಿರೀಕ್ಷಕ ಪಿ. ಉಮೇಶ್ ಮಾತನಾಡಿ, ಸಾರ್ವಜನಿಕರಿಂದ 16 ಅರ್ಜಿ ಬಂದಿದ್ದು, ಸ್ಥಳದಲ್ಲೇ 2 ಅರ್ಜಿಗಳನ್ನು ಇತ್ಯರ್ಥಗೊಳಿಸಲಾಗಿದೆ. ಕಳೆದ ಸಭೆಯಲ್ಲಿ ಬಂದಿದ್ದ ಸಾರ್ವಜನಿಕರ ದೂರುಗಳನ್ನು ಬಗೆಹರಿಸಲಾಗಿದೆ. ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳ ಜೊತೆ ಚರ್ಚಿಸಿ, ವರದಿ ತಯಾರಿಸಿ ಕೂಡಲೇ ಸಾರ್ವಜನಿಕರ ಸಮಸ್ಯೆ ಬಗೆಹರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದೇವೆ. ಸಾರ್ವಜನಿಕರು ತಮ್ಮ ಸಮಸ್ಯೆಗಳ ಬಗ್ಗೆ ಲೋಕಾಯುಕ್ತ ಪೊಲೀಸ್ ಠಾಣೆಗೆ ಬಂದು ದೂರು ನೀಡಬಹುದು ಎಂದರು.

ಸಭೆಯಲ್ಲಿ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ತಾಪಂ ಇಓ ಜೆರಾಲ್ಡ್ ರಾಜೇಶ್, ನಗರಸಭೆ ಆಯುಕ್ತ ವಿಜಯ್ ಉಪಸ್ಥಿತರಿದ್ದರು.

ವರುಣ ಕ್ಷೇತ್ರ ಅಭಿವೃದ್ಧಿಗೆ ಸರ್ಕಾರ ಬದ್ಧ



ತುಂಬನೇರಳೆಯಲ್ಲಿ ಎಂಎಲ್‌ಸಿ ಡಾ.ಯತೀಂದ್ರ ಕುಂದುಕೊರತೆ ಆಲಿಸಿದರು.

ಸುತ್ತೂರು, ಅ.8– ಗ್ರಾಮಸ್ಥರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಶ್ರಮಿಸಲಾಗುತ್ತಿದ್ದು, ವರುಣ ಕ್ಷೇತ್ರ ಅಭಿವೃದ್ಧಿಗೆ ಸರ್ಕಾರ ಬದ್ಧ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ತಿಳಿಸಿದರು.

ಇಲ್ಲಿನ ತುಂಬುನೇರಳೆ ಗ್ರಾಪಂನಲ್ಲಿ ಸಾರ್ವಜನಿಕರ ಕುಂದುಕೊರತೆ ಆಲಿಸಿ ಮಾತನಾಡಿದ ಅವರು, ಹಲವು ಅಭಿವೃದ್ಧಿ ಕಾರ್ಯಗಳ ಜೊತೆ ಕಂದಾಯ ಅದಾಲತ್ ಮತ್ತು ಪೋಡಿ ಅಭಿಯಾನ ಆಯೋಜಿಸಲಾಗುತ್ತಿದ್ದು, ಅರ್ಜಿ ಸಲ್ಲಿಸುವವರಿಗೆ ಅಗತ್ಯ ಪರಿಹಾರ ಒದಗಿಸಲಾಗುವುದು. ವರುಣ ಕ್ಷೇತ್ರ ವ್ಯಾಪ್ತಿಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಮೂವರು ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ತಲಾ 10 ಸಾವಿರ ಪ್ರೋತ್ಸಾಹ ಧನ ನೀಡಲಾಗುವುದು ಎಂದರು.

ಈ ವೇಳೆ ಕಾಂಗ್ರೆಸ್ ಮುಖಂಡರಾದ ಬುಲೆಟ್ ಮಹದೇವು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಗ್ರಾಪಂ ಅಧ್ಯಕ್ಷ ನಂದೀಶ್, ಪುಟ್ಟಸ್ವಾಮಿ, ಸೋಮು, ಗ್ರಾಪಂ ಎಲ್ಲಾ ಸದಸ್ಯರು, ತಾಲೂಕಿನ ಎಲ್ಲಾ ಅಧಿಕಾರಿಗಳು ಹಾಜರಿದ್ದರು.

ತಂಬಾಕು ಹರಾಜು ಪ್ರಕ್ರಿಯೆಗೆ ಚಾಲನೆ



ಕಂಪಲಾಪುರ ಸಮೀಪದ ಚಿಲ್ಕುಂದ ತಂಬಾಕು ಮಾರುಕಟ್ಟೆ ಸಂಖ್ಯೆ 62ರಲ್ಲಿ ಹರಾಜು ಪ್ರಕ್ರಿಯೆಗೆ ಸಂಸದ ಯದುವೀರ್ ಚಾಲನೆ ನೀಡಿದರು. ಪ್ರಾದೇಶಿಕ ವ್ಯವಸ್ಥಾಪಕ ಗೋಪಾಲ್, ಹರಾಜು ಅಧೀಕ್ಷಕ ಸಿದ್ದರಾಮ ಡಾಂಗೆ, ಕ್ಷೇತ್ರಾಧಿಕಾರಿ ಸಂದೀಪ್, ರೂಪ ಸೇರಿದಂತೆ ರೈತರು ಇದ್ದರು.

ಈ ಬಾರಿ ಗುಣಮಟ್ಟದ ತಂಬಾಕಿಗೆ ಉತ್ತಮ ಬೆಲೆ ಸಿಗಲಿದೆ

ಕಟ್ಟೆಮಳಲವಾಡಿಯಲ್ಲಿ ತಂಬಾಕು ಖರೀದಿಗೆ ಚಾಲನೆ ನೀಡಿ ಸಂಸದ ಯದುವೀರ್ ಭರವಸೆ

ಹುಣಸೂರು, ಅ.8– ರೈತರು ಬೆಳೆದ ತಂಬಾಕಿಗೆ ಉತ್ತಮ ಬೆಲೆ ಸಿಗುವವರೆಗೂ ನಾನು ಸದಾ ಅವರೊಂದಿಗೆ ಇರುತ್ತೇನೆ ಎಂದು ಸಂಸದ ಯದುವೀರ್ ತಿಳಿಸಿದರು.

ತಾಲೂಕಿನ ಕಟ್ಟೆಮಳಲವಾಡಿ ತಂಬಾಕು ಹರಾಜು ಮಾರುಕಟ್ಟೆಯಲ್ಲಿ ತಂಬಾಕು ಖರೀದಿಗೆ ಚಾಲನೆ ನೀಡಿ ಮಾತನಾಡಿ, ಕಳೆದ ವರ್ಷ ಆರಂಭಿಕ ಬೆಲೆ 290 ರೂ. ಇತ್ತು. ಈ ಬಾರಿ 320 ರೂ. ಸಿಗುವ ನಿರೀಕ್ಷೆ ಇದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಬೆಲೆ ಕೊಡಿಸಲು ಪ್ರಯತ್ನಿಸುತ್ತೇನೆ ಎಂದರು.

ಆಂಧ್ರ ಗುಂಟೂರಿನ ತಂಬಾಕಿನ ಬೆಲೆಗೂ ಇಲ್ಲಿನ ತಂಬಾಕಿನ ಬೆಲೆಗೂ ಹೋಲಿಕೆ ಮಾಡಬೇಡಿ. ಅವರ ತಂಬಾಕಿಗೂ ನಮ್ಮ ತಂಬಾಕಿಗೂ ವ್ಯತ್ಯಾಸವಿದೆ. ನಮ್ಮ ಮೈಸೂರು ತಂಬಾಕು ಉತ್ಕೃಷ್ಟವಾಗಿದ್ದು, ಸ್ವದೇಶಿ ವ್ಯವಸ್ಥೆಗೆ ನಾವು ಒತ್ತು ನೀಡಬೇಕಿದೆ. ಈ ಬಾರಿ ನಮ್ಮ ತಂಬಾಕು ಖರೀದಿಗೆ ಐಟಿಸಿ ಸೇರಿದಂತೆ 30 ಕಂಪನಿಗಳು ಮುಂದೆ ಬಂದಿದ್ದು, ಗುಣಮಟ್ಟದ ತಂಬಾಕಿಗೆ ಉತ್ತಮ ಬೆಲೆ ದೊರೆಯಲಿದೆ ಎಂದು ಭರವಸೆ ನೀಡಿದರು.



ಕಟ್ಟೆಮಳಲವಾಡಿಯಲ್ಲಿ ತಂಬಾಕು ಖರೀದಿಗೆ ಸಂಸದ ಯದುವೀರ್ ಚಾಲನೆ ನೀಡಿದರು.

ತಂಬಾಕು ಬೆಳೆಗಾರರಿಗೆ ತಲೆ ನೋವಾಗಿರುವ ಅನಧಿಕೃತ ರೈತರಿಗೆ ಮುಕ್ತಿ ಕೊಡಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದೊಂದಿಗೆ ಚರ್ಚಿಸಿ ಅಧಿಕೃತ ತಂಬಾಕು ಮಾರಾಟ ಮಾಡಲು ವ್ಯವಸ್ಥೆ ಕಲ್ಪಿಸಲು ಶತಪ್ರಯತ್ನ ಮಾಡಲಾಗುವುದು. ರೈತರ ನಿಲುವೇ ನನ್ನ ನಿಲುವಾಗಿದೆ ಎಂದರು.

ತಂಬಾಕು ಬೆಳೆ ಸಂಬಂಧ ರಾಷ್ಟ್ರೀಯ, ಅಂತರಾಷ್ಟ್ರೀಯ ಮಟ್ಟದಲ್ಲಿ ಕೆಲವು ಒಪ್ಪಂದಗಳಾಗಿದ್ದರೂ, ರೈತರ ಹಿತ ದೃಷ್ಟಿಯಿಂದ ಅವುಗಳನ್ನು ಮುರಿಯಲು ನಾವು ಸಂಬಂಧಪಟ್ಟ ಸಚಿವರು, ಅಧಿಕಾರಿಗಳೊಂದಿಗೆ ಚರ್ಚೆ ನಡೆಸಬೇಕಾಗಿದೆ. ಅನಧಿಕೃತ ರೈತರನ್ನು ಅಧಿಕೃತ ಮಾಡಲು ಹೋರಾಟ ನಡೆಸುತ್ತೇನೆ ಎಂದರು.

ಮಾರುಕಟ್ಟೆ ಸೂಪರಿಟೆಂಡ್ ಸಿದ್ದರಾಜು ಮಾತನಾಡಿ, ತಾಲೂಕಿನಲ್ಲಿ ಕಳೆದ ಬಾರಿ 8878 ಅಧಿಕೃತ ಮತ್ತು 3707 ಅನಧಿಕೃತ ತಂಬಾಕು ಬೆಳೆಗಾರರಿಂದ 17.737 ಹೆಕ್ಟರ್ ಪ್ರದೇಶದಲ್ಲಿ ಬೆಳೆದ ತಂಬಾಕಿನಿಂದ 25.03 ಮಿಲಿಯನ್ ಮೆಟ್ರಿಕ್ ಕೆಜಿ ತಂಬಾಕು ಉತ್ಪಾದನೆ ನಿರೀಕ್ಷಿಸಲಾಗಿತ್ತು. ಆದರೆ 21.70 ಮಿಲಿಯನ್ ಮೆಟ್ರಿಕ್ ಕೆಜಿ ಉತ್ಪಾದನೆಯಾಗಿತ್ತು. ಕಳೆದ ಬಾರಿ ರೈತರಿಗೆ ಹರಾಜಿನಲ್ಲಿ ಕನಿಷ್ಠ 290, ಉತ್ತಮ 320, ಸರಾಸರಿ 253 ರೂ. ದೊರೆತಿತ್ತು. ಅಲ್ಲದೇ ಶೇ.21ರಷ್ಟು ಉತ್ತಮ, ಶೇ.35ರಷ್ಟು ಮಧ್ಯಮ, ಶೇ.44ರಷ್ಟು ಕಳಪೆ ಗುಣಮಟ್ಟದ ತಂಬಾಕು ಉತ್ಪಾದನೆಯಾಗಿತ್ತು.

ಪ್ರಸಕ್ತ ಸಾಲಿನಲ್ಲಿ 8838 ಅಧಿಕೃತ ಹಾಗೂ 3806 ಅನಧಿಕೃತ ತಂಬಾಕು ಬೆಳೆಗಾರರಿಂದ 16615 ಹೆಕ್ಟೆರ್ ಪ್ರದೇಶದಲ್ಲಿ 21.83 ಮಿಲಿಯನ್ ಮೆಟ್ರಿಕ್ ಕೆಜಿ ತಂಬಾಕು ನಿರೀಕ್ಷಿಸಲಾಗಿದೆ. ಇಂದು ಆರಂಭವಾದ ಹರಾಜು ಮಾರುಕಟ್ಟೆಯಲ್ಲಿ ಪ್ರತಿ ಕೆಜಿ ಉತ್ತಮ ತಂಬಾಕಿಗೆ 320 ರೂ. ಲಭಿಸಿದೆ ಮುಂದಿನ ದಿನಗಳಲ್ಲಿ ಮತ್ತಷ್ಟು ಬೆಲೆ ಸಿಗುವ ನಿರೀಕ್ಷೆ ಇದೆ ಎಂದರು.

ತಂಬಾಕು ಹರಾಜು ಮಾರುಕಟ್ಟೆ ವಲಯ ವ್ಯವಸ್ಥಾಪಕ ಮೋಹನ್, ತಾಲೂಕು ತಂಬಾಕು ಕ್ಷೇಮಾಭಿವೃದ್ಧಿ ಸಂಘದ ಗೌರವಾಧ್ಯಕ್ಷ ಸಿ.ಚಂದ್ರೇಗೌಡ, ಅಧ್ಯಕ್ಷ ಶಿವಣ್ಣ, ಕಾರ್ಯದರ್ಶಿ ರಾಮೇಗೌಡ, ಬಿ.ಎನ್. ನಾಗರಾಜಪ್ಪ, ರಮೇಶ್ ಕುಮಾರ್, ನಗರಸಭೆ ಸದಸ್ಯ ಗಣೇಶ್ ಕುಮಾರಸ್ವಾಮಿ, ರಮೇಶ್ ಕುಮಾರ್, ನಾಗರಾಜ ಮಲ್ಲಾಡಿ, ಸತೀಶ್, ಚಂದ್ರಶೇಖರ್, ಪರಮೇಶ, ಕೂಸಪ್ಪ ರವಿಗೌಡ, ತಿಮ್ಮನಾಯಕ, ಸಿದ್ದರಾಜು, ಮೀನಾ, ಪ್ರಭಾಕರ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಗುರುವಾರ 9 ಅಕ್ಟೋಬರ್ 2025

ನ.6,7 ರಂದು ಸಂಯೋಜನಂ ರಾಷ್ಟ್ರೀಯ ಯೋಗ ಸಮ್ಮೇಳನ

● ಪಚನ ಸಂಬಂಧಿ ರೋಗಗಳು ಕುರಿತು ಚರ್ಚೆ ● 1,200 ಪ್ರತಿನಿಧಿಗಳು ಭಾಗಿ ● ಉದ್ಘಾಟನೆಗೆ ರಾಜ್ಯಪಾಲರು, ಸುತ್ತೂರು ಶ್ರೀಗಳಿಗೆ ಆಹ್ವಾನ ● ವಿಶ್ವ ಆಯುರ್ವೇದ ಪರಿಷದ್‌ಗೆ ಮುಕ್ತ ವಿವಿಯ ಸಹಯೋಗ



ಮೈಸೂರಿನ ಬಿಎಸ್‌ಎಸ್ ವಿದ್ಯೋದಯ ಸಂಸ್ಥೆಯಲ್ಲಿ ರಾಷ್ಟ್ರೀಯ ಯೋಗ ಸಮ್ಮೇಳನ ಕುರಿತ ಸಲಹಾ ಸಮಿತಿ ಸಭೆಯು ಮಂಗಳವಾರ ನಡೆಯಿತು.

ಮೈಸೂರು, ಅ.8– ವಿಶ್ವ ಆಯುರ್ವೇದ ಪರಿಷದ್ ವತಿಯಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸಹಯೋಗದಲ್ಲಿ ಕೆಎಸ್‌ಓಯು ಘಟಿಕೋತ್ಸವ ಸಭಾಂಗಣದಲ್ಲಿ ನ.6 ಮತ್ತು 7 ರಂದು ಸಂಯೋಜನಂ– ರಾಷ್ಟ್ರೀಯ ಆಯುರ್ವೇದ ಸಮ್ಮೇಳನ ನಡೆಯಲಿದೆ.

ಪಚನ ಸಂಬಂಧಿ ರೋಗಗಳು ಕುರಿತು ಪ್ರಮುಖವಾಗಿ ಚರ್ಚಿಸಲಿದ್ದು, ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಸುಮಾರು 1,200 ಪ್ರತಿನಿಧಿಗಳು ಭಾಗವಹಿಸುವರು. ಉದ್ಘಾಟನೆ ಸಮಾರಂಭದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಭಾಗವಹಿಸುವ ನಿರೀಕ್ಷೆ ಇದೆ. ಡಾ.ಮಂಜುನಾಥ್ ದಿಕ್ಸೂಚಿ ಭಾಷಣ ಮಾಡಲಿದ್ದು, ಹತ್ತು ಮಂದಿ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸುವರು. ಆನ್‌ಲೈನ್ ಮೂಲಕ ಪ್ರಬಂಧ ಮಂಡನೆ, ಶ್ಲೋಕ ಪಠಣ, ವಿಡಿಯೋ ತುಣುಕು ಪ್ರಸಾರ ಮತ್ತಿತರ ಚಟುವಟಿಕೆಗಳು ನಡೆಯಲಿವೆ.

ಹೊರಗಿನಿಂದ ಬರುವ ಪ್ರತಿನಿಧಿಗಳಿಗೆ ಮುಕ್ತ ವಿವಿ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ ಮತ್ತಿತರ ಕಡೆ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ. ಕಾವೇರಿ ಆಸ್ಪತ್ರೆಯ ಡಾ.ಚಂದ್ರಶೇಖರ್, ಎಂಐಟಿಯ ಡಾ.ಎಸ್. ಮುರುಳಿ ಅವರ ನೆರವಿನೊಂದಿಗೆ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗುವುದು. ಊಟೋಪಚಾರಕ್ಕೆ ಶ್ರೀ ಸುತ್ತೂರು ಮಠ, ಮುಕ್ತ ವಿವಿ ಮತ್ತಿತರರು ಕೈಜೋಡಿಸುವರು. ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಈ ಸಮ್ಮೇಳನಕ್ಕೆ ಬೇಕಾದ ಅಗತ್ಯ ಸೌಲಭ್ಯ ಕಲ್ಪಿಸಿದ್ದಾರೆ.

ಈ ಸಮ್ಮೇಳನದ ಸಿದ್ಧತೆ ಕುರಿತು ನಗರದ ಕೃಷ್ಣಮೂರ್ತಿಪುರಂನ ಬಿಎಸ್‌ಎಸ್ ವಿದ್ಯೋದಯದಲ್ಲಿ ಮಂಗಳವಾರ ಸಲಹಾ ಸಮಿತಿಯ ಸಭೆಯು ನಡೆಯಿತು. ಆರ್. ವಾಸುದೇವ ಭಟ್, ಡಾ. ಗಜಾನನ ಹೆಗಡೆ, ಡಾ.ಎ.ಎಸ್. ಚಂದ್ರಶೇಖರ್, ಡಾ.ಜಿ.ಆರ್. ಚಂದ್ರಶೇಖರ್, ಡಾ. ಸುಶ್ರೂತ್ ಗೌಡ, ಡಾ.ಎಸ್. ಮುರುಳಿ, ಜಿಎಸ್‌ಎಸ್ ಶ್ರೀಹರಿ ದ್ವಾರಕನಾಥ್, ಸ್ವಾಮಿ ಮರಳಾಪುರ, ಅಂಶಿ ಪ್ರಸನ್ನ ಕುಮಾರ್, ಡಾ.ಸೌಮ್ಯಾ, ಡಾ.ಎಂ.ಎನ್. ಸುಧಾ, ಡಾ. ಅಮರನಾಥ್, ಶಶಿ ಕುಮಾರ್, ಡಾ.ಕಾರ್ತಿಕ್ ಪಂಡಿತ್, ಡಾ. ಸುಭಾಷ್,. ಎಂ,.ಆರ್. ಮಂಜುನಾಥ್ ಇನ್ನಿತರರು ಭಾಗವಹಿಸಿದ್ದರು.

ಮಹಾರಾಣಿ ವಿಜ್ಞಾನ ಕಾಲೇಜಲ್ಲಿ ಎನ್‌ಎಸ್‌ಎಸ್ ದಿನಾಚರಣೆ; ಗಿಡ ನೆಟ್ಟು, ಸ್ವಚ್ಛತಾ ಅಭಿಯಾನ





ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆ ದಿನಾಚರಣೆ ಅಂಗವಾಗಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಕಾಲೇಜಿನ ಉದ್ಯಾನವನದಲ್ಲಿ ಗಿಡ ನೆಟ್ಟು ನೀರೆರೆದರು.

ಮೈಸೂರು, ಅ.8(ಎಂಟಿವೈ)– ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ಬುಧವಾರ ರಾಷ್ಟ್ರೀಯ ಸೇವಾ ಯೋಜನೆ ದಿನಾಚರಣೆ ಅಂಗವಾಗಿ ಎನ್‌ಎಸ್‌ಎಸ್ ವಿದ್ಯಾರ್ಥಿನಿಯರು ಕಾಲೇಜು ಕ್ಯಾಂಪಸ್‌ನಲ್ಲಿ 200ಕ್ಕೂ ಹೆಚ್ಚು ಗಿಡ ನೆಟ್ಟು ಕಾಲೇಜು ಆವರಣದಲ್ಲಿ ಸ್ವಚ್ಛತಾ ಅಭಿಯಾನ ನಡೆಸಿದರು.

ರಾಷ್ಟ್ರೀಯ ಸೇವಾ ಯೋಜನೆ ದಿನಾಚರಣೆ ಮಹಾರಾಣಿ ವಿಜ್ಞಾನ ಕಾಲೇಜಿನ ಪ್ರಾಧ್ಯಾಪಕರು ಕೊಡುಗೆ ನೀಡಿದ 200ಕ್ಕೂ ಹೆಚ್ಚು ಗಿಡಗಳನ್ನು ಕಾಲೇಜು ಆವರಣದಲ್ಲಿ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ನೆಟ್ಟು, ಅವುಗಳಿಗೆ ನೀರೆರೆದರು. ಅಲ್ಲದೆ, ಕಾಲೇಜು ಆವರಣ, ಉದ್ಯಾನವನದಲ್ಲಿ ಸ್ವಚ್ಛತಾ ಅಭಿಯಾನ ನಡೆಸಿ, ಗಮನ ಸೆಳೆದರು.

ಇದೇ ವೇಳೆ ಕಾಲೇಜಿನ ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕೆ.ನಟರಾಜ್ ಮಾತನಾಡಿ, ಎನ್‌ಎಸ್‌ಎಸ್ ವಿದ್ಯಾರ್ಥಿಗಳು ರಾಷ್ಟ್ರೀಯ ಸೇವಾ ಯೋಜನೆ ದಿನಾಚರಣೆ ಹಿನ್ನೆಲೆಯಲ್ಲಿ ಕಾಲೇಜು ಆವರಣದಲ್ಲಿ ವಿವಿಧ ತಳಿಯ 200ಕ್ಕೂ ಹೆಚ್ಚು ಗಿಡ ನೆಟ್ಟಿರುವುದು ಶ್ಲಾಘನೀಯ. ನೆಟ್ಟ ಗಿಡಗಳನ್ನು ಉಳಿಸಿ, ಬೆಳೆಸಲು ವಿದ್ಯಾರ್ಥಿನಿಯರು ಪಣ ತೊಡಬೇಕು. ಗಿಡ–ಮರಗಳು ನಮಗೆ ಜೀವ ಮತ್ತು ಜೀವನ ಎರಡನ್ನು ನೀಡುತ್ತವೆ. ಹಾಗಾಗಿ ಜೀವ ನೀಡುವ ಜೀವಗಳನ್ನು ಸ್ವಾಭಾವಿಕವಾಗಿ ಕಾಪಾಡುವುದು ನಮ್ಮ ಆದ್ಯ ಕರ್ತವ್ಯ. ಎಲ್ಲರೂ ಅದನ್ನು ಮರೆತಿದ್ದಾರೆ. ಆ ಕಾರಣದಿಂದಾಗಿ ಕಾರ್ಯಕ್ರಮ ಆಯೋಜಿಸಿ ಗಿಡಗಳನ್ನು ನಾವು ನೆಡುವ ಸ್ಥಿತಿಗೆ ತಲುಪಿದ್ದೇವೆ. ಇದು ಅನಿವಾರ್ಯ. ಆದರೂ ಗಿಡ ನೆಟ್ಟು, ಉಳಿಸಿ ಬೆಳೆಸುವುದು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾರಾಣಿ ವಿಜ್ಞಾನ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಂ. ಅಬ್ದುಲ್ ರಹಿಮಾನ್ ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನೆ ಮೂಲಕ ನಾವು ಕಾಡು ಉಳಿಸಿ, ಬೆಳೆಸುವುದರೊಂದಿಗೆ ಗ್ರಾಮೀಣ ಭಾಗದಲ್ಲಿ ಜನರ ಸೇವೆ ಮತ್ತು ಸವಲತ್ತು ಕುರಿತು ಅರಿವು ಮೂಡಿಸುತ್ತಿರುವುದು ಶ್ಲಾಘನೀಯ. ಗ್ರಾಮೀಣ ಪ್ರದೇಶದ ಅಭಿವೃದ್ಧಿ ಪಥದತ್ತ ಹೋಗಲು ಸಹಕಾರಿ ಆಗಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳ ಅಧಿಕಾರಿಗಳಾದ ಡಾ.ಲಕ್ಷ್ಮಣ ಬಿ, ಪ್ರೊ.ಶುಭಾ ಬಿ.ಎಸ್, ಅಧ್ಯಾಪಕ ಸಂಘದ ಕಾರ್ಯದರ್ಶಿ ರಮೇಶ ಕೆ.ಎಲ್, ಸಾಂಸ್ಕೃತಿಕ ಸಮಿತಿ ಸಂಚಾಲಕ ಗೋವಿಂದರಾಜು, ಅಧ್ಯಾಪಕರಾದ ಸುಧಾ, ಲೀಲಾವತಿ, ಪ್ರಮೀಳಾ ಹೆಚ್. ಸಿ., ಬೃಂದಾ ಎನ್. ಮಧುಮತಿ, ಸುರೇಶ್, ಅಧ್ಯಾಪಕೇತರರು, ರಾಷ್ಟ್ರೀಯ ಸೇವಾ ಯೋಜನೆ ವಿದ್ಯಾರ್ಥಿ ಪ್ರತಿನಿಧಿಗಳಾದ ರಮ್ಯಾ ಡಿ, ಶಿವಾಲಿ, ಸುಚಿತ್ರಾ, ಸ್ನೇಹ, ಸೌಂದರ್ಯ, ರಂಜಿತ ಆರ್ ಸೇರಿದಂತೆ ಸುಮಾರು 200 ಸ್ವಯಂ ಸೇವಕರು ಪಾಲ್ಗೊಂಡರು.

ವಿದುಷಿ ಡಾ. ಟಿ.ಎಸ್. ಸತ್ಯವತಿ 30ನೇ ಜೆಎಸ್‌ಎಸ್ ಸಂಗೀತ ಸಮ್ಮೇಳನಾಧ್ಯಕ್ಷರು

ಅಂತಿಮ ದಿನ ಸುತ್ತೂರು ಶ್ರೀಗಳಿಂದ ಸಂಗೀತ ವಿದ್ಯಾನಿಧಿ ಪ್ರಶಸ್ತಿ ಪ್ರದಾನ

ಮೈಸೂರು, ಅ.8 – ಮೈಸೂರಿನ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಪ್ರತಿವರ್ಷ ಡಿಸೆಂಬರ್ 2 ರಿಂದ 6ರವರೆಗೆ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಸಂಸ್ಮರಣಾ ಸಂಗೀತ ಸಮ್ಮೇಳನವನ್ನು ಆಯೋಜಿಸುತ್ತಾ ಬರುತ್ತಿದೆ. ಈ ವರ್ಷ 30ನೇ ಸಂಗೀತ ಸಮ್ಮೇಳನಾಧ್ಯಕ್ಷರಾಗಿ ಅಂತಾರಾಷ್ಟ್ರೀಯ ಖ್ಯಾತಿಯ ಕರ್ನಾಟಕ ಸಂಗೀತದ ಮೇರು ಗಾಯಕಿ ಹಾಗೂ ಸಂಸ್ಕೃತ ವಿದುಷಿ, ಕರ್ನಾಟಕ ಕಲಾಶ್ರೀ ಡಾ. ಟಿ.ಎಸ್. ಸತ್ಯವತಿಯವರು ಆಯ್ಕೆ ಆಗಿದ್ದಾರೆ ಎಂದು ಸಭೆಯ ಕಾರ್ಯದರ್ಶಿ ಟಿ.ಪಿ. ಪ್ರಭುಸ್ವಾಮಿ ಹಾಗೂ ಟ್ರಸ್ಟಿಗಳಾದ ಪ್ರೊ. ಕೆ. ರಾಮಮೂರ್ತಿರಾವ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಾಯನದಲ್ಲಿ ವಿದುಷಿ ವಸಂತಮಾಧವಿ, ಪದ್ಮಭೂಷಣ ಆರ್.ಕೆ. ಶ್ರೀಕಂಠನ್, ಸಂಗೀತಶಾಸ್ತ್ರದಲ್ಲಿ ಬಿ.ವಿ.ಕೆ. ಶಾಸ್ತ್ರಿ ಹಾಗೂ ಮೃದಂಗದಲ್ಲಿ ಬೆಂಗಳೂರು ವೆಂಕಟ್ರಾಂ ಮುಂತಾದ ದಿಗ್ಗಜರಿಂದ ಪ್ರೌಢಶಿಕ್ಷಣ ಪಡೆದಿರುವ ಡಾ. ಟಿ.ಎಸ್. ಸತ್ಯವತಿಯವರು ಕಳೆದ ಐದು ದಶಕಗಳಿಗೂ ಮೀರಿ ದೇಶ–ವಿದೇಶಗಳ ಪ್ರಸಿದ್ಧ ವೇದಿಕೆಗಳಲ್ಲಿ ಸಂಗೀತ ಕಚೇರಿಗಳನ್ನು ನೀಡಿ ಜನಮನ್ನಣೆ ಗಳಿಸಿದ್ದಾರೆ. ಆದರ್ಶ ಗುರುಗಳಾಗಿ, ಗಾಯಕಿಯಾಗಿ, ಆಕಾಶವಾಣಿ ಮತ್ತು ದೂರದರ್ಶನದಲ್ಲಿ ಶ್ರೇಣೀಕೃತ ಹದಿನೈದಕ್ಕೂ ಹೆಚ್ಚು ವಿದ್ಯಾರ್ಥಿಗಳೂ ಸೇರಿದಂತೆ, ದೇಶ–ವಿದೇಶಗಳಲ್ಲಿ ಇವರು ಅಪಾರ ಸಂಖ್ಯೆಯ ಶಿಷ್ಯವರ್ಗವನ್ನು ಹೊಂದಿದ್ದಾರೆ. ಸಂಗೀತದೊಂದಿಗೆ ಸಂಸ್ಕೃತ ವಿದ್ವಾಂಸರೂ ಆಗಿರುವ ಇವರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಂಗೀತ ಮತ್ತು ಸಂಸ್ಕೃತ ಕುರಿತ ಹಲವು ಕಾರ್ಯಾಗಾರಗಳನ್ನೂ, ಪ್ರಾತ್ಯಕ್ಷಿಕೆಗಳನ್ನು ನಡೆಸಿಕೊಟ್ಟಿದ್ದಾರೆ.



ಭಾರತೀಯ ಸಂಗೀತಕ್ಕೆ ಅಭಿಲಾಷಿತಾರ್ಥ ಚಿಂತಾಮಣಿಯ ಕೊಡುಗೆ ಎಂಬ ಇವರ ಪ್ರೌಢ ಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯ ಪಿಎಚ್.ಡಿ. ಪದವಿ ನೀಡಿದೆ. ಭಾರತೀಯ ವಿದ್ಯಾಭವನದಿಂದ ಪ್ರಕಟಗೊಂಡ ಚತುಷಷ್ಟಿಕಲೆ ಕೃತಿಯು ಸಾಂಸ್ಕೃತಿಕ ಕ್ಷೇತ್ರಕ್ಕೆ ಅವರು ಕೊಟ್ಟಿರುವ ಅಮೂಲ್ಯ ಕೊಡುಗೆ. ಪ್ರಸ್ತುತ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನ ಅಧ್ಯಕ್ಷೆಯಾಗಿಯೂ, ಪರ್ಕಸ್ಸಿವ್ ಆರ್ಟ್ಸ್ ಸೆಂಟರಿನ ಕಾರ್ಯನಿರ್ವಾಹಕ ನಿರ್ದೇಶಕಿಯಾಗಿಯೂ, ಭಾರತೀಯ ವಿದ್ಯಾಭವನದ ಕೇಂದ್ರ ಕಾರ್ಯಕಾರಿಣಿ ಸದಸ್ಯೆಯಾಗಿಯೂ, ದಿಶಾ ರಾಷ್ಟ್ರೀಯ ಸಂಸ್ಥೆಯ ಸಲಹಾ ಸಮಿತಿಯ ಸದಸ್ಯೆಯಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

ಇವರಿಗೆ ದೇಶದ ಒಳಗಿನ ಹಾಗೂ ಹೊರದೇಶದ ಪ್ರಮುಖ ಸಂಸ್ಥೆಗಳಿಂದ ಸಂಗೀತ ಪ್ರಾಚಾರ್ಯ, ನಾದನಿಧಿ, ಸಂಗೀತ ವೇದಾಂತ, ಗಾನ ವಾರಿಧಿ, ಕಲಾದೀಪ್ತಿ, ನಾದ ಸುರಭಿ, ಸಂಗೀತಕಲಾರತ್ನ ಮುಂತಾದ ಸುಮಾರು ಐವತ್ತಕ್ಕೂ ಹೆಚ್ಚು ಪ್ರಶಸ್ತಿಗಳು ಸಂದಿವೆ.

ಮೈಸೂರು ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿರುವ ರಾಷ್ಟ್ರೀಯ ಸಂಗೀತ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಡಿಸೆಂಬರ್ 6ರಂದು ಸಂಜೆ ಸಮ್ಮೇಳನಾಧ್ಯಕ್ಷರಾದ ಡಾ. ಟಿ.ಎಸ್. ಸತ್ಯವತಿ ಅವರಿಗೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ವಿದ್ವಜ್ಜನರ ಸಮ್ಮುಖದಲ್ಲಿ ಸಂಗೀತ ವಿದ್ಯಾನಿಧಿ ಪ್ರಶಸ್ತಿಯೊಂದಿಗೆ ಚಿನ್ನದ ಪದಕ ನೀಡಿ ಗೌರವಿಸಲಿದ್ದಾರೆ.

ಕೆ.ಎಂ.ಲೇಖಾ, ಕೆ.ಎಂ.ನಿಧಿಗೆ ಸನ್ಮಾನ



ರಾಜ್ಯ ಮಟ್ಟದ ಸವಿಗನ್ನಡ ಸಾಂಸ್ಕೃತಿಕ ಪ್ರಶಸ್ತಿಯಾದ ದಸರಾ ಯುವ ಪ್ರತಿಭಾ ಪ್ರಶಸ್ತಿ 2025 ಅನ್ನು ನೃತ್ಯ, ಸಂಗೀತ ಮತ್ತು ಹಲವು ಕ್ಷೇತ್ರಗಳಲ್ಲಿ ಕಿರಿಯ ವಯಸ್ಸಿನಲ್ಲೇ ಸಾಧನೆಗೈದ ಕರ್ನಾಟಕ ಕಲಾಶ್ರೀ ಡಾ. ಕೆ. ಕುಮಾರ್ ಮತ್ತು ಹಿರಿಯ ಮಕ್ಕಳ ತಜ್ಞೆ ಡಾ. ಜಿ. ಮಾಲತಿ ಅವರ ಪುತ್ರಿಯರಾದ ಕಲೆಮನೆ ಸಹೋದರಿಯರಾದ ಕೆ.ಎಂ. ಲೇಖಾ ಮತ್ತು ಕೆ.ಎಂ. ನಿಧಿ ಅವರಿಗೆ ನೀಡಿ ಗೌರವಿಸಲಾಯಿತು.

ಶಿಕ್ಷಕ ವೃತ್ತಿ ಪ್ರಾರಂಭಿಸುವವರಿಗೆ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಉತ್ಕೃಷ್ಟ ದರ್ಜೆಯ ತರಬೇತಿ

ಮೈಸೂರು, ಅ. 8– ಮೈಸೂರಿನ ಅಚೀವರ್ಸ್ ಅಕಾಡೆಮಿ ಫಾರ್ ಎಕ್ಸಲೆನ್ಸ್ ಸಂಸ್ಥೆ ವತಿಯಿಂದ ಸಮರ್ಥ ಶಿಕ್ಷಕರ ನಿರ್ಮಾಣ ಕಾರ್ಯಕ್ರಮದಡಿಯಲ್ಲಿ ಶಿಕ್ಷಕ ವೃತ್ತಿ ಪ್ರಾರಂಭಿಸಲು ಇಚ್ಛಿಸಿರುವ ಡಿ.ಎಲ್.ಇಡಿ., ಬಿ.ಇಡಿ. ಹಾಗೂ ಎಂ.ಇಡಿ ಪದವಿಧರರಿಗೆ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಉತ್ಕೃಷ್ಟ ದರ್ಜೆಯ ತರಬೇತಿ ನೀಡಲಾಗುವುದು.

ವಿಷಯ ಜ್ಞಾನ, ಸಂವಹನ ಕೌಶಲ್ಯ, ಬೋಧನಾ ವಿಧಾನ ಕೌಶಲ್ಯ, ತಾಂತ್ರಿಕ ಕೌಶಲ್ಯ, ತರಗತಿ ನಿರ್ವಹಣಾ ಕೌಶಲ್ಯ, ಸೃಜನಾತ್ಮಕ ಚಿಂತನೆ, ಮಾನವ ಸಂಬಂಧ ಕೌಶಲ್ಯ, ವೃತ್ತಿಪರ ಬೆಳವಣಿಗೆ ಕೌಶಲ್ಯ ಹಾಗೂ ನಾಯಕತ್ವ ಗುಣ ವಿಷಯಗಳ ಕುರಿತು ಪರಿಣಾಮಕಾರಿ ತರಬೇತಿಯನ್ನು ಭಾನುವಾರಗಳಂದು ನೀಡಲಾಗುವುದು.

ಅರ್ಹ ಶಿಕ್ಷಕರಿಗೆ ಸೂಕ್ತ ಶಾಲೆಗಳಲ್ಲಿ ಪ್ಲೇಸ್‌ಮೆಂಟ್ ಕೂಡ ಮಾಡಿಸಲಾಗುವುದು. ವೃತ್ತಿನಿರತ ಶಿಕ್ಷಕರು ಸಹ ತರಬೇತಿ ಪಡೆಯಬಹುದಾಗಿದೆ. ನೋಂದಣಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಮೊ : 6364160584 ಸಂಖ್ಯೆಯಲ್ಲಿ ಅಥವಾ achieversacademy086@gmail.com ಈ ಇಮೇಲ್ ವಿಳಾಸದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಸಂಯೋಜಕರು ತಿಳಿಸಿದ್ದಾರೆ.

ರಾಜ್ಯದಲ್ಲಿರುವುದು ರೈತ ವಿರೋಧಿ ಕಾಂಗ್ರೆಸ್ ಸರ್ಕಾರ

● ವಿಪಕ್ಷ ನಾಯಕ ಆರ್. ಅಶೋಕ್ ಆಕ್ರೋಶ ● ಇತ್ತೀಚೆಗೆ ಸಿಎಂ ನಡೆಸಿದ್ದು ಕಾಟಾಚಾರದ ವೈಮಾನಿಕ ಸಮೀಕ್ಷೆ

ಬೆಂಗಳೂರು, ಅ. 8(ಕೆಎಂಶಿ)–ನೆರೆಪೀಡಿತ ಪ್ರದೇಶಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾಟಾಚಾರದ ವೈಮಾನಿಕ ಸಮೀಕ್ಷೆ ನಡೆಸಿದ್ದಾರೆ ಎಂದು ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ಟೀಕಿಸಿದ್ದಾರೆ.



ಇದು ರೈತ ವಿರೋಧಿ ಕಾಂಗ್ರೆಸ್ ಸರ್ಕಾರವಾಗಿದ್ದು, ಕೃಷಿಕರ ಸ್ಥಿತಿ ಕೇಳುವವರು ಇಲ್ಲದಂತಾಗಿದೆ. ರೈತರು ಬೆವರು ಸುರಿಸಿ ಬೆಳೆದ ಬೆಳೆಗಳು ಅಪಾರ ಪ್ರಮಾಣದಲ್ಲಿ ನಾಶವಾಗಿವೆ.

ರಾಜ್ಯ ಸರ್ಕಾರ ರೈತರಿಗೆ ಉತ್ತಮ ಬೆಲೆ ಸಿಗುವಂತಹ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸುಧಾರಣೆ ನಂತರ ದಿನಬಳಕೆ ವಸ್ತುಗಳಿಂದ ಮೋಟಾರ್ ಬೈಕ್, ಕಾರುಗಳ ವಹಿವಾಟು ದೇಶಾದ್ಯಂತ ಹೆಚ್ಚಿದ್ದು, ಜನಸಾಮಾನ್ಯರು ಉಳಿತಾಯದ ಲಾಭ ಪಡೆಯುತ್ತಿದ್ದಾರೆ. ವ್ಯಾಪಾರಸ್ಥರು, ವರ್ತಕರು ಸಂತೋಷಗೊಂಡಿದ್ದಾರೆ.

ಆದರೆ, ರಾಜ್ಯದಲ್ಲಿ ಜನವಿರೋಧಿ ಕಾಂಗ್ರೆಸ್ ಸರ್ಕಾರ ಕಳೆದ ಎರಡು ವರ್ಷಗಳಿಂದ ಸತತವಾಗಿ ಏರಿಸಿರುವ ಹಾಲು, ಪೆಟ್ರೋಲ್, ಡಿಸೇಲ್, ನೀರು, ವಿದ್ಯುತ್ ಬೆಲೆ ಇಳಿಸುವುದು ಯಾವಾಗ, ಗ್ಯಾರಂಟಿ ಸಿದ್ದರಾಮಯ್ಯ ಅವರಿಂದ ಕನ್ನಡಿಗರಿಗೆ ಮುಕ್ತಿ ಯಾವಾಗ ಸಿಗಲಿದೆ.

ಜಾತಿಗಣತಿಗೆ ಎಷ್ಟು ಸಮಯ ಬೇಕು ಎನ್ನುವ ಪೂರ್ವ ಯೋಜನೆ ಇಲ್ಲ. ಸಮೀಕ್ಷೆಯಲ್ಲಿ ಯಾವ ಪ್ರಶ್ನೆ ಕೇಳಬೇಕೆಂಬ ಸ್ಪಷ್ಟತೆ ಇಲ್ಲ. ಜಾತಿಗಣತಿ ಸಮೀಕ್ಷೆಗೆ ಶಿಕ್ಷಕರ ನಿಯೋಜನೆ ಮಾಡಿದರೆ ಸರ್ಕಾರಿ ಶಾಲೆಗಳಲ್ಲಿ ಪಾಠ ಮಾಡುವವರು ಯಾರು ಎಂಬ ಯೋಚನೆ ಮಾಡಲಿಲ್ಲ.

ಯಾವುದೇ ಪೂರ್ವಸಿದ್ಧತೆ, ರೂಪುರೇಷೆ, ಗೊತ್ತು ಗುರಿ ಇಲ್ಲದೆ ಕೇವಲ ರಾಜಕೀಯ ತೆವಲಿಗೆ ಮಾಡುತ್ತಿರುವ ಜಾತಿಗಣತಿಯಿಂದ ಕನ್ನಡಿಗರಿಗೆ ನಯಾ ಪೈಸೆ ಉಪಯೋಗವಿಲ್ಲ.

ಜಾತಿಗಣತಿ ಸಮೀಕ್ಷೆಗೆ 10 ವರ್ಷಗಳ ಹಿಂದೆ 150 ಕೋಟಿ ರೂ. ಪೋಲು ಮಾಡಿದ ಸಿದ್ದರಾಮಯ್ಯ ಸರ್ಕಾರ, ಈಗ ಮತ್ತೊಮ್ಮೆ ಕನ್ನಡಿಗರ 650 ಕೋಟಿ ರೂ. ತೆರಿಗೆಯನ್ನು ಬೇಕಾಬಿಟ್ಟಿ ಪೋಲು ಮಾಡುತ್ತಿದೆ ಎಂದು ಟೀಕಿಸಿದರು.

ಅ.12 ರಂದು ಉದ್ಯೋಗ ಮೇಳ

ಮೈಸೂರು, ಅ.8(ಎಂಕೆ)– ಮೈಸೂರು ಗಾಣಿಗರ ಹಿತೈಷಿಗಳ ಬಳಗದ ವತಿಯಿಂದ ಉದ್ಯೋಗದಾತ ಫೌಂಡೇಶನ್ ಸಹಯೋಗದೊಂದಿಗೆ ಅ.12 ರಂದು ಬೆಳಗ್ಗೆ 9 ರಿಂದ ಸಂಜೆ 4 ರವರೆಗೆ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ 'ಉದ್ಯೋಗ ಮೇಳ' ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿದ ಉದ್ಯೋಗದಾತ ಫೌಂಡೇಶನ್ ಅಧ್ಯಕ್ಷ ರುಕ್ಮಾಂಗದ, ಗಾಣಿಗ ಜನಾಂಗದ ಉದ್ಯೋಗಾಕಾಂಕ್ಷಿಗಳು ಸೇರಿದಂತೆ ಎಲ್ಲಾ ಸಮುದಾಯಗಳ ನಿರುದ್ಯೋಗಿ ಯುವಕ–ಯುವತಿಯರ ಅನುಕೂಲಕ್ಕಾಗಿ ಈ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು. ಸುಮಾರು 30ಕ್ಕೂ ಹೆಚ್ಚು ಕಂಪನಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಲಿದ್ದು, ನೋಂದಣಿ ಉಚಿತವಾಗಿರಲಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಯಾವುದೇ ಪದವಿ ಇಲ್ಲವೇ ಉನ್ನತ ಶಿಕ್ಷಣ ಪಡೆದ ಅಭ್ಯರ್ಥಿಗಳು ಪಾಲ್ಗೊಳ್ಳಬಹುದಾಗಿದೆ. ಹಾಗೆಯೇ ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂ. 80956 79666 ಅನ್ನು ಸಂಪರ್ಕಿಸಬಹುದಾಗಿದೆ ಎಂದರು.

ಅಖಿಲ ಕರ್ನಾಟಕ ಗಾಣಿಗರ ಸಂಘದ ಜಂಟಿ ಕಾರ್ಯದರ್ಶಿ ಕೆ.ಆರ್.ಚನ್ನಕೇಶವ ಶೆಟ್ಟಿ, ಗಾಣಿಗರ ಹಿತೈಷಿಗಳ ಬಳಗದ ಅಧ್ಯಕ್ಷ ಆರ್.ರಘು, ಉಪ ಸಮಿತಿ ಅಧ್ಯಕ್ಷ ಎಸ್.ವೆಂಕಟೇಶ್, ಮುಖಂಡರಾದ ಜಿ.ಸ್ವಾಮಿ, ಜಿ.ಎಸ್.ಸುಬ್ರಹ್ಮಣ್ಯ, ಎಸ್.ಮಹೇಶ್ ಉಪಸ್ಥಿತರಿದ್ದರು.

ಅಭಿನಂದನೆ



ಮೈಸೂರು ಆದಿಚುಂಚನಗಿರಿ ರಸ್ತೆಯ ಶ್ರೀ ಮರುಳೇಶ್ವರ ವಿದ್ಯಾಸಂಸ್ಥೆಯ ನೂತನ ಕೊಠಡಿ ಉದ್ಘಾಟನಾ ಸಂದರ್ಭದಲ್ಲಿ ಪ್ರೊ. ಕೆ.ಆರ್. ರಂಗಯ್ಯ (ಕಾರ್ಯದರ್ಶಿ), ಡಾ. ಎಂ. ಮಹದೇವಯ್ಯ (ಅಧ್ಯಕ್ಷ), ಪಿ. ಮಹದೇವಪ್ಪ (ಖಜಾಂಚಿ), ಆರ್. ಶಿವಲಿಂಗು (ಸಹ ಕಾರ್ಯದರ್ಶಿ), ಬಿ. ಸೋಮಣ್ಣ (ಧರ್ಮದರ್ಶಿ), ನಿಂಗಪ್ಪ, ಕೆ. ಶಿವಲಿಂಗು ಮತ್ತು ನಂಜುಂಡಸ್ವಾಮಿ ಅವರನ್ನು ಅಭಿನಂದಿಸಲಾಯಿತು.

ಇಂದಿನಿಂದ 50ನೇ ಸೀನಿಯರ್ ನ್ಯಾಷನಲ್ ಯೋಗ ಸ್ಪೋರ್ಟ್ಸ್

ಮೈಸೂರು, ಅ.8(ಎಂಕೆ)– ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಯೋಗ ಫೆಡರೇಶನ್ ಆಫ್ ಇಂಡಿಯಾ ವತಿಯಿಂದ ಕರ್ನಾಟಕ ರಾಜ್ಯ ಅಮೆಚೂರ್ ಯೋಗ ಕ್ರೀಡಾ ಸಂಘ, ಗ್ಲೋಬಲ್ ಯೋಗ ಫೋರಂ, ಮೈಸೂರು ಜಿಲ್ಲಾ ಯೋಗ ಸ್ಪೋರ್ಟ್ ಫೌಂಡೇಶನ್ ಹಾಗೂ ಮೈಸೂರು ವಿವೇಕಾನಂದ ಯೋಗ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಸಹಯೋಗದೊಂದಿಗೆ ಅ.9 ರಿಂದ ಅ.12 ರವರೆಗೆ 50ನೇ ಸೀನಿಯರ್ ನ್ಯಾಷನಲ್ ಯೋಗ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್ ಆಯೋಜಿಸಲಾಗಿದೆ ಎಂದು ಫೆಡರೇಶನ್ ಅಧ್ಯಕ್ಷ ಅಶೋಕ್ ಕುಮಾರ್ ಅಗರ್‌ವಾಲ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿದ ಅವರು, ದೇಶದ 25 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಂದ 590 ಕ್ಕೂ ಹೆಚ್ಚು ಯೋಗ ಪಟುಗಳು ಪಾಲ್ಗೊಳ್ಳಲಿದ್ದಾರೆ. 145 ಆಕರ್ಷಕ ಯೋಗ, ಜೋಡಿ ಯೋಗ, ರಿದ್ಮಿಕ್ ಯೋಗ ಮತ್ತು ಫ್ರೀ ಫ್ಲೋ ಯೋಗ ಸ್ಪರ್ಧೆಗಳು ನಡೆಯಲಿವೆ. 175 ರಾಷ್ಟ್ರೀಯ ಯೋಗ ನಿರ್ಣಾಯಕರು ಮತ್ತು ಅಧಿಕಾರಿಗಳು ಸಹ ಪಾಲ್ಗೊಳ್ಳಲಿದ್ದಾರೆ ಎಂದರು.

ಅ.9ರ ಬೆಳಗ್ಗೆ 10 ಗಂಟೆಗೆ ಆಶ್ರಮದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಸಾನಿಧ್ಯದಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪಂದ್ಯಾವಳಿ ಉದ್ಘಾಟಿಸಲಿದ್ದಾರೆ. ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಯೋಗ ಫೆಡರೇಶನ್ ಆಫ್ ಇಂಡಿಯಾ ಪದಾಧಿಕಾರಿಗಳಾದ ಅಭಿನವ್ ಜೋಶಿ, ಇಂದು ಅಗರ್‌ವಾಲ್, ಡಾ.ಗಣೇಶ್ ಕುಮಾರ್, ಜಿ.ಎನ್.ಕೃಷ್ಣಮೂರ್ತಿ, ಶಶಿಕುಮಾರ್ ಮತ್ತಿತರರಿದ್ದರು.

ಕನ್ನಡ ಸಿನಿಮಾಗಳ ನೆರವಿಗೆ ಬಂದ ರಾಜ್ಯ ಸರ್ಕಾರ

ಹೊಸ ವರ್ಷಕ್ಕೆ ಸರ್ಕಾರಿ ಸ್ವಾಮ್ಯದ ಒಟಿಟಿ ಪ್ರಾರಂಭ

ಬೆಂಗಳೂರು, ಅ.8– ಕನ್ನಡ ಸಿನಿಮಾಗಳಿಗೆ ಹಾಲಿ ಒಟಿಟಿ ಪ್ಲ್ಯಾಟ್‌ಫಾರ್ಮ್‌ಗಳಲ್ಲಿ ಸೂಕ್ತ ಪ್ರಾಮುಖ್ಯತೆ ಸಿಗುತ್ತಿಲ್ಲ ಎಂಬ ದೂರುಗಳು ಕೇಳಿಬರುತ್ತಲೇ ಇದ್ದು, ಈ ನಡುವೇ ನೆರವಿಗೆ ಧಾವಿಸಿರುವ ರಾಜ್ಯ ಸರ್ಕಾರ ಸರ್ಕಾರಿ ಸ್ವಾಮ್ಯದ ಒಟಿಟಿ ಪ್ರಾರಂಭಿಸಲು ಮುಂದಾಗಿದೆ. ಎಲ್ಲವೂ ಅಂದುಕೊಂಡಂತೆ ಆದರೆ, ಹೊಸ ವರ್ಷಕ್ಕೆ ಪ್ರಾರಂಭವಾಗುವ ಸಾಧ್ಯತೆಗಳಿವೆ. ಒಟಿಟಿ 'ಸಿ–ಸ್ಪೇಸ್' ಮತ್ತು ಪ್ರಸಾರ ಭಾರತಿಯ 'ವೇವ್ಸ್' ಅನ್ನು ಅಧ್ಯಯನ ಮಾಡುತ್ತಿದೆ.



ಸಮಿತಿಯ ಸದಸ್ಯರಾದ ಶ್ರೀ ಕಂಠೀರವ ಸ್ಟುಡಿಯೋಸ್ ಅಧ್ಯಕ್ಷ ಮಹಬೂಬ್ ಪಾಷಾ ಅವರು ಮಾತನಾಡಿ, ಈ ತಿಂಗಳ ಅಂತ್ಯದ ವೇಳೆಗೆ ಆಯುಕ್ತರು, ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯೊಂದಿಗೆ ಸಭೆ ನಡೆಸುತ್ತೇವೆ. ಅಲ್ಲಿ ಕಾರ್ಯಸಾಧ್ಯತಾ ವರದಿಯನ್ನು ಸಲ್ಲಿಸಲಾಗುವುದು. ಮುಖ್ಯಮಂತ್ರಿ ಮತ್ತು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಈ ಪ್ರಸ್ತಾವನೆಯ ಪರವಾಗಿದ್ದಾರೆಂದು ಹೇಳಿದ್ದಾರೆ.

ಖಾಸಗಿ ಒಟಿಟಿ ಪ್ಲಾಟ್‌ಫಾರ್ಮ್‌ಗಳು ಕನ್ನಡ ಚಲನಚಿತ್ರಗಳನ್ನು ಪ್ರೋತ್ಸಾಹಿಸುವುದಿಲ್ಲ. ಚಿತ್ರಮಂದಿರಗಳ ಕೊರತೆಯಿಂದಾಗಿ ಸುಮಾರು 4,000 ಚಲನಚಿತ್ರಗಳು ಬಿಡುಗಡೆಯಾಗಿಲ್ಲ. ಖಾಸಗಿ ಒಟಿಟಿ ಪ್ಲಾಟ್‌ಫಾರ್ಮ್‌ಗಳು ಅವುಗಳನ್ನು ಸ್ವೀಕರಿಸಲು ಸಿದ್ಧರಿಲ್ಲ, ಪ್ರಸ್ತಾವಿತ ಸರ್ಕಾರಿ ಒಟಿಟಿ ಪ್ಲಾಟ್‌ಫಾರ್ಮ್ ಕನ್ನಡ ಚಲನಚಿತ್ರಗಳನ್ನು ಬಿಡುಗಡೆ ಮಾಡಲು ಮಾತ್ರವಲ್ಲದೆ, ಕಲೆ ಮತ್ತು ಸಂಸ್ಕೃತಿಯ ಕುರಿತಾದ ಸಾಕ್ಷ್ಯಚಿತ್ರಗಳು ಮತ್ತು ಕೃತಿಗಳನ್ನು ಪ್ರದರ್ಶಿಸಲು ಕೂಡ ಸಹಾಯ ಮಾಡುತ್ತದೆ ಎಂದು ತಿಳಿಸಿದರು.

ಟಿಕೆಟ್ ಮಾದರಿಯಲ್ಲಿ (ಪೇ–ಪರ್–ವ್ಯೂ ಮಾದರಿ) ಚಲನಚಿತ್ರಗಳನ್ನು ನೀಡುವ ಕೇರಳದ ಪ್ಲಾಟ್‌ಫಾರ್ಮ್‌ಗಿಂತ ನಮ್ಮ ಒಟಿಟಿ ಭಿನ್ನವಾಗಿರಲಿದೆ. ಇಲ್ಲಿ ಬಳಕೆದಾರರಿಗೆ ಒಮ್ಮೆ ಶುಲ್ಕ ವಿಧಿಸಲಾಗುತ್ತದೆ. ನಾವು ಚಂದಾದಾರಿಕೆ ಮಾದರಿ ಮತ್ತು ಟಿಕೆಟ್ ಮಾದರಿಯನ್ನು (ಹೊಸ ಬಿಡುಗಡೆಗಳಿಗೆ) ಎರಡೂ ಆಯ್ಕೆಗಳನ್ನು ನೀಡುತ್ತೇವೆ.

ಬಿಡುಗಡೆಯಾಗಲಿರುವ ಚಲನಚಿತ್ರವನ್ನು ವೀಕ್ಷಿಸಲು ವಿಷಯ ಪರಿಶೀಲನಾ ಸಮಿತಿ ಇರುತ್ತದೆ. ಚಲನಚಿತ್ರವನ್ನು ಬಿಡುಗಡೆ ಮಾಡುವ ಮೊದಲು ನಿರ್ಮಾಪಕರೊಂದಿಗೆ ಆದಾಯ ಹಂಚಿಕೆಯ ಕುರಿತು ಪರಸ್ಪರ ಒಪ್ಪಂದಕ್ಕೆ ಸಹಿ ಹಾಕಲಾಗುತ್ತದೆ ಎಂದು ಮಾಹಿತಿ ನೀಡಿದರು.

ಒಟಿಟಿ ಅಪ್ಲಿಕೇಶನ್ ಅನ್ನು ಅಭಿವೃದ್ಧಿಪಡಿಸಲು ಮತ್ತು ಐದು ವರ್ಷಗಳ ಕಾಲ ಅದರ ನಿರ್ವಹಣೆಗೆ ಸುಮಾರು 8 ಕೋಟಿ ರೂ. ಅಗತ್ಯವಿದೆ. ವೇದಿಕೆ ಉಳಿಸಿಕೊಳ್ಳಲು ಸರ್ಕಾರ 50 ಕೋಟಿ ರೂ.ಗಳನ್ನು ಮೂಲ ಹಣವಾಗಿ ಬಿಡುಗಡೆ ಮಾಡಬೇಕು. ಒಟಿಟಿ ಪ್ರಾರಂಭವಾದ ಕೂಡಲೇ ಆದಾಯ ನಿರೀಕ್ಷಿಸಲಾಗುವುದಿಲ್ಲ. ಎರಡು ವರ್ಷಗಳ ನಂತರ ಚಂದಾದಾರಿಕೆಗಳು ಮತ್ತು ಆದಾಯವು ಸುಧಾರಿಸಲಿದೆ. 5ನೇ ವರ್ಷಕ್ಕೆ ಲಾಭ ಸಾಧಿಸಿ ಸ್ವಾವಲಂಬಿಯಾಗುವ ವಿಶ್ವಾಸವಿದೆ ಎಂದು ತಿಳಿಸಿದ್ದಾರೆ.

ರಾಜ್ಯ ಸರ್ಕಾರವು ಈಗ 50 ಕೋಟಿ ರೂ.ಗಳ ಹೂಡಿಕೆ ಮಾಡಿದರೆ, ಪ್ರತಿ ವರ್ಷ ಕೋಟಿ ಗಳಿಸಬಹುದು. ಕನ್ನಡದ ಜೊತೆಗೆ, ಪ್ರಸ್ತಾವಿತ ಒಟಿಟಿ ವೇದಿಕೆಯು ತಮಿಳು, ತೆಲುಗು, ಮಲಯಾಳಂ ಮತ್ತು ಹಿಂದಿಯಂತಹ ಇತರ ಭಾಷೆಗಳ ಚಲನಚಿತ್ರಗಳನ್ನು ಪ್ರಚಾರ ಮಾಡುತ್ತದೆ. ಈ ವೇದಿಕೆಯಿಂದ 25 ಲಕ್ಷ ಚಂದಾದಾರರನ್ನು ನಿರೀಕ್ಷಿಸಬಹುದು ಎಂದು ಸಮಿತಿಯ ಸದಸ್ಯರು ಹೇಳಿದ್ದಾರೆ.

ಮೈಸೂರು ಮಾನ್ಸೂನ್ ರೇಸ್

10ನೇ ದಿನ, ಗುರುವಾರ, 9–10–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.30 ಗಂಟೆಗೆ

I. ದೂ ಪಾಂಟ್ ಪ್ಲೇಟ್ ಡಿII–1200 ಮೀ. ರೇಟೆಡ್ 20 ರಿಂದ 45. (ಮೈಸೂರ್ ಬೇಸ್‌ಡ್ ಹಾರ್ಸ್) ಮ.2.30ಕ್ಕೆ
1 ಅನುಸ್ತುಭ 2. ಸೀ ಆಫ್ ಅಡ್ವೆಂಚರ್

II. ದೂ ಪಾಂಟ್ ಪ್ಲೇಟ್ ಡಿI–1200 ಮೀ. ರೇಟೆಡ್ 20 ರಿಂದ 45. (ಮೈಸೂರ್ ಬೇಸ್‌ಡ್ ಹಾರ್ಸ್) ಮ.3.00ಕ್ಕೆ
1 ಮ್ಯಾಜಿಕ್ ಸರ್ಕಲ್ 2. ಮೇಬರಿ

III. ಗಾಲೂ ಅಂಡ್ ಸೋಲಿ ಪೂನಾವಾಲ ಮೆಮೋರಿಯಲ್ ಟ್ರೋಫಿ–1400 ಮೀ. 3 ವರ್ಷ (ಟರ್ಮ್ಸ್) ಮ.3.30ಕ್ಕೆ
1 ಗಾಡೆಸೆಸ್ಸ್ ಆಫ್ ವಾರ್ 2 ಡಾರಿಂಗ್ ಟನ್

IV ಚೀಫ್ ಮಿನಿಸ್ಟರ್ಸ್ ಕಪ್– 1600ಮೀ. ರೇಟೆಡ್ 20 ರಿಂದ 45 ಮ.4.00ಕ್ಕೆ
1. ಪವರ್ ಆಫ್ ಗೋಲ್ಡ್ 2. ಯುಕಿಗಾಝೆ

V. ಹೋಟೆಲ್ RRR ಟ್ರೋಫಿ–1200 ಮೀ. ರೇಟೆಡ್ 40 ರಿಂದ 65 (ಮೈಸೂರ್ ಬೇಸ್‌ಡ್ ಹಾರ್ಸ್) ಸಂ.4.30ಕ್ಕೆ
1 ಓಶನ್ 2. ಶರುಕ್

VI. ಕೂರ್ಗ್ ಪ್ಲೇಟ್–1100 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1 ಅಗೇರಾ 2 ಡಫಿ

ದಿನದ ಅತ್ಯುತ್ತಮ	ಪವರ್ ಆಫ್ ಗೋಲ್ಡ್
ಡಬ್ಬಲ್	ಮ್ಯಾಜಿಕ್ ಸರ್ಕಲ್, ಗಾಡೆಸೆಸ್ಸ್ ಆಫ್ ವಾರ್
ಜಾಕ್‌ಪಾಟ್	2, 3, 4, 5 ಮತ್ತು 6
ಮಿನಿ ಜಾಕ್‌ಪಾಟ್	3, 4, 5 ಮತ್ತು 6
I ಟ್ರಿಬಲ್	1, 2 ಮತ್ತು 3
II ಟ್ರಿಬಲ್	4, 5 ಮತ್ತು 6


ಟಿಪ್‌ಸ್ಟರ್ ಪಿಜೆಸಿ

29ನೇ ವರ್ಷದ ಜನ್ಮದಿನೋತ್ಸವ

ಬಿ.ಎಂ. ದೀಪಕ್

ಬಿ.ಇ. ಸಿವಿಲ್ ಇಂಜಿನಿಯರ್
ಬೆಟ್ಟದಪುರ. ಪಿರಿಯಾಪಟ್ಟಣ ತಾಲ್ಲೂಕು.





ಅಶೋಕಪುರಂ, ಚಿಕ್ಕಗರಡಿ ಅಧ್ಯಕ್ಷರಾದ

ನಾಗರಾಜು (ಬಿಲ್ಲಣ್ಣ) ರವರಿಗೆ

ಹುಟ್ಟು ಹಬ್ಬದ ಶುಭಾಶಯಗಳು



ಶುಭಕೋರುವವರು:
ಸ್ವಾಮಿ ಎಂ (ರವಿ)
ಎಸ್ಸಿ ಯುವ ಮೋರ್ಚಾ, ಚಾಮುಂಡೇಶ್ವರಿ ಕ್ಷೇತ್ರ ಮತ್ತು ದಲಿತ ಹೋರಾಟಗಾರರು

G9 projects
Designing your Dreams
Vee2 Developers

Vaishnavi Layout

RT Nagar Entrance Mysuru

DASARA OFFER

Offer valid till 10 - 10- 2025

30×40 | 30×50

8088-707-707

PROPERTIES FOR SALE

Ready for Registration
Prime Locations

30x40
Near Vivekananda Circle

43x93
East Facing Ashokapuram
Railway Station 100 Mtr
Near Bedarakanappa Temple.

40x55 NF
Srirampura, Residence House
Good Interior Design

(Brokers Excuse)
9008111454

IMKTA TEACHER TRAINING INDIA MYSORE

IMKTA Since 2003

WWW.IMKTA.IN

FIRST AND LARGEST PRESCHOOL TEACHER TRAINING STUDENTS BASE IN MYSORE SINCE 2003

Want to be a teacher?

Study Diploma in Montessori/ Primary Teacher Training

WHILE WORKING/ STUDYING/ HOME MAKER



ELIGIBILITY : SSLC/PUC/ANY DEGREE
DURATION : 6 TO 9 MONTHS
• CAMPUS INTERVIEWS
• PLACEMENT ASSISTANCE

MODE : REGULAR/ONLINE/ SATURDAY/ WITH PRACTICAL TRAINING

- 30,000+ ALUMNI
- 25+ BRANCHES IN INDIA & ABROAD
- 22 YEARS OF SUCCESS
- 800+ SCHOOL PARTNERSHIP

GET PLACED IN INDIA, DUBAI, QATAR, UAE, SHARJAH, OMAN, SRILANKA, MALAYSIA, SINGAPORE

Alpha International School
Manandavadi Road, Near Ring Road
Signal Junction, Srirampura, Mysore

DOWNLOAD IMKTA APP Google play

+91 7829937469

NOT GETTING YOUR STAR OF MYSORE & ಮೈಸೂರು ಮಿತ್ರ

Call: 98452-96447 / 99003-82840

6ನೇ ವರ್ಷದ ಪುಣ್ಯಸ್ಮರಣೆ



ಸದಾ ನಿಮ್ಮ ನೆನಪಿನಲ್ಲಿರುವ ಶ್ರೀ ನಾರಾಯಣ ಸ್ವಾಮಿರವರು (ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು, ನೇರಳೆ) ಮತ್ತು ಕುಟುಂಬವರ್ಗ

ಶ್ರೀಮತಿ ಧನಲಕ್ಷ್ಮಿ (ಸರಸ್ವತಿ)

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

2.5 BHK
HOME INTERIORS @ Rs. 2.9 Lakhs* onwards

Home Space Mart
*T&C Apply
91089 23123


ಮೈಸೂರಿನಲ್ಲಿ DTCP APPROVED ಬಡಾವಣೆಗಳಲ್ಲಿ ನಿವೇಶನಗಳು ದೊರೆಯುತ್ತವೆ

1) ಟಿ–ನರಸೀಪುರ ಮುಖ್ಯರಸ್ತೆ,
2) ಹೆಚ್ ಡಿ ಕೋಟೆ ಮುಖ್ಯರಸ್ತೆ,
3) ಕೆಲ್ಲಹಳ್ಳಿ, ಫೆರಿಫೆರಲ್ ರಿಂಗ್ ರಸ್ತೆ,

ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ

ಶ್ರೀ ರಮಣಶ್ರೀ ಡೆವಲಪರ್ಸ್
7411914135

15ನೇ ವರ್ಷದ ಪುಣ್ಯಸ್ಮರಣೆ



ಪಾಪಯ್ಯನ ರಾಚಯ್ಯ

ಕುರುಬಗೇರಿ, ನಂಜನಗೂಡು
ನಿಧನ: 09–10–2010

ಸದಾ ನಿಮ್ಮ ನೆನಪಿನಲ್ಲಿರುವ

ಧರ್ಮಪತ್ನಿ : ಶ್ರೀಮತಿ ಸರೋಜಮ್ಮ ರಾಚಯ್ಯ, ಮಗ: ಎನ್.ಆರ್. ನಾಗೇಶ್, ಅಧ್ಯಕ್ಷರು, ಮೈಸೂರು ನಗರ ಕಾಂಗ್ರೆಸ್ ಸಮಿತಿ (OBC) ಸೊಸೆ: ಶ್ರೀಮತಿ ಲತಾ ನಾಗೇಶ್, ಮಾಲೀಕರು, ಶ್ರೀ ರಾಘವೇಂದ್ರ ಟಿವಿ ಸೆಂಟರ್, ಹೆಬ್ಬಾಳ್ ಮೈಸೂರು ಮತ್ತು ಕುಟುಂಬವರ್ಗ

MUDA APPROVED

SP MEADOWS

(Lingambudhi)

Near to Ring Road
Attached to
VidyaDev Enclave

Rs.4999/-Sq.Ft

30x50 & 30x40

Ready for Registration

9964906588

ಉತ್ತರಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಇವರು ದಿ: 29.09.2025 ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ದಿ: 09.10.2025 ಗುರುವಾರ ಮಧ್ಯಾಹ್ನ 12.30 ಗಂಟೆಗೆ ಉತ್ತರ ಕ್ರಿಯಾದಿ ಭೂ ಶಾಂತಿ ಕಾರ್ಯಕ್ರಮವನ್ನು ನಮ್ಮ ಸ್ವಗೃಹ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಹುಂಡಿ ಗ್ರಾಮದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಮಾಜಿ ಗೌಡಿಕೆ ಕರೀಗೌಡರ ಮಾಲೇಗೌಡರು

ಇಂತಿ ದುಃಖತಪ್ತರು:
ಶ್ರೀಮತಿ ಸಿದ್ದಮ್ಮ, ಗಂಡುಮಕ್ಕಳು ಹೆಣ್ಣು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಕುಟುಂಬವರ್ಗದವರು ಹಾಗೂ ಗ್ರಾಮಸ್ಥರು.

ಭೋಜನ: ಮಧ್ಯಾಹ್ನ 1.00 ಗಂಟೆಗೆ

PUBLIC NOTICE

Notice is hereby given that my clients Mr. Ravi Prakash N.P., S/o Puttamadayya N.K., aged 47years, and Mrs. Uma Raviprakash, W/o Ravi Prakash N.P., residing at LIG 49, CITB HUDCO, New Kantharaj Urs Road, Mysore – 570009, are proposing to purchase the below-mentioned properties from Mr. Mohana G.S., S/o Siddaraju R., aged 42 years, and Mrs. Jalajakshi Poojari, W/o Mohana G.S., aged 36 years, residing at KSN Layout, 2nd Ward, Gundlupete Town, Chamrajnagar District.

Any person having any claim, right, title, or interest over the said properties is hereby called upon to submit the same in writing with supporting documents to the undersigned within 7 days from the date of publication of this notice. Failing which, it will be presumed that there are no objections and my clients shall proceed with the purchase.

Property 1: Sy.No. 101/1, Parvatanapura Village, Begur Hobli, Gundlupete Taluk, measuring 2 Acre 1Gunta.Boundaries – East: Seeramma | West: Manishetty | North: Devashetty | South: Nagaraju.

Property 2: Sy.No. 165/3, Parvatanapura Village, Begur Hobli, Gundlupete Taluk, measuring 1 Acre 23 Guntas. Boundaries – East: Devashetty | West: Rangamma | North: Manishetty | South: Manishetty

Sd/- Manju Kashyap.
Advocate. Mysore Law Associates
5th Main, 3rd Cross Road,
Mysuru – 570009.
Ph: 9538915183

Place: Mysuru
Date: 08-10-2025

5ನೇ ವರ್ಷದ ಪುಣ್ಯಸ್ಮರಣೆ

ನಿಧನ: 9.10.2020



ಲಿಂಗೈಕ್ಯ ಗೌಡಿಕೆ **ಪಟೇಲ್ ಪಿ.ಪುಟ್ಟಬುದ್ಧಿ** ಅವರು

ಆಯರಹಳ್ಳಿ ಗ್ರಾಮ, ಮೈಸೂರು ತಾಲ್ಲೂಕು, ಜಿಲ್ಲೆ.

ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷವಾಯಿತು.
ನೀವು ಹಾಕಿಕೊಟ್ಟ ಮಾದರಿ ಮಾರ್ಗದರ್ಶನದಲ್ಲಿ ಇಡೀ ಕುಟುಂಬ ಸಾಗಿದೆ.
ನಿಮ್ಮ ಆಶೀರ್ವಾದ ಸದಾ ಸಕುಟುಂಬದ ಮೇಲಿರಲಿ.

ಇಂತಿ ದುಃಖತಪ್ತರು

ಶ್ರೀಮತಿ ಶಿವನಂಜಮ್ಮ ಪುಟ್ಟಬುದ್ಧಿ ಮಕ್ಕಳಾದ ಶ್ರೀಮತಿ ಸುಜಾತ ನಿರಂಜನಮೂರ್ತಿ, ಡಾ.ಪಿ.ನಂದೀಶ್‌ಕುಮಾರ್, ಆಯರಹಳ್ಳಿ ಪಿ.ವಿರೂಪಾಕ್ಷ ಹಾಗೂ ಸೊಸೆಯಂದಿರು ಮತ್ತು ಮೊಮ್ಮಕ್ಕಳು, ಪಟೇಲ್ ಕುಟುಂಬ ವರ್ಗದವರು ಹಾಗೂ ಆಯರಹಳ್ಳಿ ಗ್ರಾಮಸ್ಥರು

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಇವರು ದಿನಾಂಕ: 30–09–2025 ನೇ ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ: 10–10–2025ನೇ ಶುಕ್ರವಾರ ಬೆಳಗ್ಗೆ 9.00 ಗಂಟೆಗೆ ಉತ್ತರ ಕ್ರಿಯಾದಿಯನ್ನು ನಮ್ಮ ಸ್ವಗೃಹ ದೇವರಸನಹಳ್ಳಿ, ನಂಜನಗೂಡು ತಾಲೂಕು, ಮೈಸೂರು ಜಿಲ್ಲೆ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಶ್ರೀ ಮಲ್ಲಣ್ಣರವರು

ಜನನ: 28–01–1950
ನಿಧನ: 30–09–2025

ದುಃಖತಪ್ತರು:
ಮೃತರ ಪತ್ನಿ ಶ್ರೀಮತಿ ಪ್ರೇಮ, ಮಕ್ಕಳು, ಕುಟುಂಬವರ್ಗದವರು ಮತ್ತು ದೇವರಸನಹಳ್ಳಿ ಗ್ರಾಮಸ್ಥರು

ಹಸಿರು ನಮ್ಮ ಉಸಿರು

ಕರ್ನಾಟಕ ಸರ್ಕಾರ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ,
ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿ
ನಂ: 5/1, ವಿನೋಬಾ ರಸ್ತೆ, ಪ್ರೀಮಿಯರ್ ಸ್ಟುಡಿಯೋ ಎದುರು, ಮಾನಸ ಗಂಗೋತ್ರಿ, ಮೈಸೂರು–570006.
E-mail ID:-dsdomysore@gmail.com Ph No:- 0821-2970815

ಸಂ:ಜಿಕೌಕಮೈ/ವಿ.ಕ.ರಾ.ವ.ಶಿ.ಸ/ಟೆಂ.ಕ.ಬ.ಹ/ಸಿ.ಆರ್-01/2012-13 ದಿನಾಂಕ: 29.09.2025

ಟೆಂಡರ್–ಕಂ–ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮೈಸೂರು ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿ ಆವರಣದಲ್ಲಿರುವ 22 ತೆಂಗಿನ ಮರಗಳ (15 ಮರಗಳಲ್ಲಿ ಇಳುವರಿ ಇರುತ್ತದೆ ಉಳಿದ 7 ಮರಗಳಲ್ಲಿ ಇಳುವರಿ ಇರುವುದಿಲ್ಲ) ಫಸಲಿನ ಬೆಳೆಗಳಿಗೆ ಸಂಬಂಧಿಸಿದಂತೆ ಎರಡು ವರ್ಷದ ಅವಧಿಗೆ ಟೆಂಡರ್–ಕಂ–ಬಹಿರಂಗ ಹರಾಜನ್ನು ನಿಗಧಿಪಡಿಸಲಾಗಿರುತ್ತದೆ.

ಕ್ರಂ. ಸಂ	ಟೆಂಡರ್–ಕಂ–ಬಹಿರಂಗ ಹರಾಜಿನ ಅಧಿಸೂಚನೆ ಸಂಖ್ಯೆ	ಹರಾಜಿನ ವಿವರ	ವಿಸ್ತೀರ್ಣ	ಬಹಿರಂಗ ಹರಾಜಿನ ದಿನಾಂಕ ಮತ್ತು ಸ್ಥಳ	ಠೇವಣಿ ಮೊತ್ತ
1	ಸಂ:ಜಿಕೌಕಮೈ/ವಿ.ಕ.ರಾ.ವ.ಶಿ.ಸ/ಟೆಂ.ಕ.ಬ.ಹ/ಸಿಆರ್–01/2012–13	ಮೈಸೂರು ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿ ಆವರಣದಲ್ಲಿರುವ 22 (15 ಮರಗಳಲ್ಲಿ ಇಳುವರಿ ಇರುತ್ತದೆ ಉಳಿದ 7 ಮರಗಳಲ್ಲಿ ಇಳುವರಿ ಇರುವುದಿಲ್ಲ) ತೆಂಗಿನ ಮರಗಳು ಮತ್ತು ತೋಟಗಾರಿಕೆ ಬೆಳೆಯ ಫಸಲಿನ ಹರಾಜು (ಎರಡು ವರ್ಷದ ಅವಧಿಗೆ)	ಸುಮಾರು ಒಂದೂವರೆ ಎಕರೆ	ದಿನಾಂಕ :13.10.2025ರ ಸೋಮವಾರ ಬೆಳಿಗ್ಗೆ 11.00 ಗಂಟೆ ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿ, ಆವರಣ ಮೈಸೂರು.	5,000/-

ಆಸಕ್ತಿಯುಳ್ಳವರು ಟೆಂಡರ್–ಕಂ–ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದು. ಟೆಂಡರ್ ಅರ್ಜಿ ಸಲ್ಲಿಸಬಯಸುವವರು ಅರ್ಜಿ ಶುಲ್ಕ ರೂ.100/–ಗಳನ್ನು ಪಾವತಿಸಿ ಅರ್ಜಿಯನ್ನು ದಿನಾಂಕ:03.10.2025 ರಿಂದ 10.10.2025ರ ರವರೆಗೆ ಕಛೇರಿಯಲ್ಲಿ ವಿತರಿಸಲಾಗುವುದು. ಭರ್ತಿ ಮಾಡಿದ ಟೆಂಡರ್ ಅನ್ನು ದಿನಾಂಕ:10.10.2025 ಸಂಜೆ 4.00 ಗಂಟೆಯೊಳಗೆ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳು, ಮೈಸೂರು ಜಿಲ್ಲೆ ಇವರ ಹೆಸರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಬೇಕು. ನಿಗಧಿತ ಅವಧಿಯ ನಂತರ ಬರುವ ಟೆಂಡರ್ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿಯಿಂದ ಕಛೇರಿ ಸಮಯದಲ್ಲಿ ಭೇಟಿ ಮಾಡಿ ಪಡೆಯಬಹುದಾಗಿರುತ್ತದೆ.

ಸೂಚನೆ: ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಆಸಕ್ತ ಬಿಡ್‌ದಾರರು ಹರಾಜು ಆರಂಭವಾಗುವ ಮೊದಲು ಕನಿಷ್ಠ ಠೇವಣಿ ರೂ.5000/–(ರೂಪಾಯಿ ಐದು ಸಾವಿರ ಮಾತ್ರ) ಹಣವನ್ನು ಹರಾಜು ನಡೆಯುವ ಸ್ಥಳ(ಮೈಸೂರು ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿ) ಇಲ್ಲಿ ನಗದು ರೂಪದಲ್ಲಿ ಪಾವತಿ ಮಾಡಿ ಹರಾಜಿನಲ್ಲಿ ಭಾಗವಹಿಸುವುದು.

ಸಹಿ/– ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ,
ಮೈಸೂರು ಜಿಲ್ಲೆ, ಮೈಸೂರು

ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀ ನಂಜಪ್ಪರವರು (ಮರದ ವ್ಯಾಪಾರಿಗಳು)

ನಿಧನ 9–10–2024

ನಿಮ್ಮ ನೆನಪು ನಮ್ಮ ಹೃದಯದಲ್ಲಿ ಸದಾ ಶಾಶ್ವತವಾಗಿದ್ದು, ನಿಮ್ಮೊಂದಿಗಿನ ಒಡನಾಟದ ಕ್ಷಣಗಳು ಯಾವಾಗಲೂ ಹಚ್ಚ ಹಸಿರಾಗಿರುತ್ತದೆ

ದುಃಖತಪ್ತರು : ಮೃತರ ಪತ್ನಿ ಚಿಕ್ಕತಾಯಮ್ಮ, ಮಗ–ಮಂಜುನಾಥ, ಸೊಸೆ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಮೊಸನಬಾಯನಹಳ್ಳಿ, ಯರಗನಹಳ್ಳಿ ಗ್ರಾಮಸ್ಥರು, ಸ್ನೇಹವರ್ಗ ಹಾಗೂ ಅಪಾರ ಬಂಧು–ಬಳಗ. ಮೊ :7204001000

ದಿಪಾವಳಿ ಹಾಗೂ ಮದುವೆ ಸಮಾರಂಭಗಳ ಪ್ರಯುಕ್ತ!
ಪರಿಶುದ್ಧ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ
ಪ್ರದರ್ಶನ ಮತ್ತು ಮಾರಾಟ

VISIT TODAY

ಸಿಲ್ಕ್ ಇಂಡಿಯ® 2025



ಭಾರತದ ಎಲ್ಲಾ ರಾಜ್ಯಗಳಿಂದ ಪರಿಶುದ್ಧ ರೇಷ್ಮೆ ಸೀರೆಗಳು ಹಾಗೂ ರೇಷ್ಮೆ ಉತ್ಪನ್ನಗಳು

ಬಿಹಾರ್ : ತಸ್ಸರ್ ರೇಷ್ಮೆ ಸೀರೆಗಳು, ಸ್ಟೋಲ್ಸ್, ಶಾಲುಗಳು, ಕರ್ನಾಟಕ : ಕ್ರೇಪ್, ಶಿಫಾನ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ ತಮಿಳುನಾಡು : ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು, ಆಂಧ್ರ ಪ್ರದೇಶ : ಧರ್ಮಾವರಂ ಸೀರೆಗಳು, ಉಪ್ಪಡಾ ಮತ್ತು ಗೊಡ್ವಾಲ್ ಸೀರೆಗಳು, ಮಂಗಲಗಿರಿ ಹಾಗೂ ಪೋಚಂಪಲ್ಲಿ ಸೀರೆಗಳು ಉತ್ತರ ಪ್ರದೇಶ : ಬನಾರಸ್ ಮತ್ತು ಜಮ್‌ದಾನಿ, ಜಮಾವರ್ ರೇಷ್ಮೆ, ಟೆಂಪಲ್ ಬಾರ್ಡರ್‌ಉಳ್ಳ ಮುಲ್‌ಬಾರಿ ಸಿಲ್ಕ್, ಲಕ್ನೋ ಚಿಕಾನ್ ಕಸೂತಿ, ಮಹರಾಷ್ಟ : ಪೈಥಾಣಿ ಸೀರೆ, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್, ಪಂಜಾಬ್ : ಪಟಿಯಾಲ ಡ್ರೆಸ್ ಮೆಟೀರಿಯಲ್ಸ್ ಒರಿಸ್ಸಾ : ಸಂಬಲ್‌ಪುರಿ, ಇಕ್ಕತ್, ಬೋಂಕೈ ಸೀರೆಗಳು, ಹ್ಯಾಂಡ್‌ಲೂಮ್ ಸಿಲ್ಕ್ ಕಾಟನ್ ಚತ್ತೀಸ್‌ಘಡ್ : ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು, ಮಧ್ಯ ಪ್ರದೇಶ : ಮಹೇಶ್ವರಿ ಮತ್ತು ಚಂದೇರಿ ಸಿಲ್ಕ್ ಪಶ್ಚಿಮ ಬಂಗಾಳ : ಢಾಕ ಸೀರೆಗಳು, ಬಲ್‌ಚೂರಿ ರೇಷ್ಮೆ, ಕಲ್ಕೋತ್ತಾ ರೇಷ್ಮೆ ಸೀರೆಗಳು ಮತ್ತು ಕಾಂತ ಎಂಬ್ರಾಯಿಡರಿ ಸೀರೆಗಳು, ಅಸ್ಸಾಂ : ಮುಗಾ ಮತ್ತು ಎರಿ ರೇಷ್ಮೆ ಸೀರೆಗಳು, ಜಮ್ಮು ಮತ್ತು ಕಾಶ್ಮೀರ : ಚಿನಾನ್, ಟೆಡ್ಡಿ ರೇಷ್ಮೆ ಸೀರೆಗಳು, ಪಶ್ಮೀನಾ ಸೀರೆಗಳು, ಸ್ಟೋಲ್ಸ್, ಶಾಲುಗಳು ರಾಜಾಸ್ಥಾನ್ : ಕೋಟಾ ಸಿಲ್ಕ್, ಕೈ ಅಚ್ಚಿನ ಸೀರೆಗಳು ...

Exclusive Wedding Collections

4 ರಿಂದ 15 ಅಕ್ಟೋಬರ್ 2025 ರವರೆಗೆ | ಸಮಯ : ಬೆಳಗ್ಗೆ 10.30 ರಿಂದ ಸಂಜೆ 8.30 ರವರೆಗೆ

ನಂಜರಾಜ ಬಹದ್ದೂರ್ ಛತ್ರ

ವಿನೋಬಾ ರಸ್ತೆ, ಮೈಸೂರು

Entry Free | All Credit & Debit Cards Accepted | Contact : 63641 65152, 98977 09954